ಶ್ರೀ ಮಹಾಂತಯ್ಯ ಬಸಯ್ಯ ಹಿರೇಮಠ, ಅಂದಿನ ಕಾರ್ಯದರ್ಶಿ ಹರಿಹರಪಲ್ಲತಡ್ಕ ಗ್ರಾಮ ಪಂಚಾಯತ್, ಸುಳ್ಯ ತಾಲ್ಲೂಕು ಇವರು ದಿನಾಂಕ:04.08.1994 ರಂದು ಹರಿಹರಪಲ್ಲತಡ್ಕ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯಕ್ಕೆ ಹಾಜರಾಗಿ ಸದರಿ ಗ್ರಾಮ ಪಂಚಾಯತ್‌ನ ಪ್ರಭಾರ ವಹಿಸಿಕೊಳ್ಳದೇ ದಿನಾಂಕ:09.01.1996 ರ ತನಕ ಗೈರು ಹಾಜರಾಗಿರುವುದು ಮತ್ತು ದಿನಾಂಕ:10.01.1996ರಂದು ಕರ್ತವ್ಯಕ್ಕೆ ಹಾಜರಾಗಿ ದಿನಾಂಕ:06.02.1996ರ ತನಕ ಕರ್ತವ್ಯ ನಿರ್ವಹಿಸಿದ್ದು, ನಂತರ ದಿನಾಂಕ:07.06.1996 ರಿಂದ ಇದುವರೆಗೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಈ ಸಂಬಂಧ ಅವರಿಗೆ ಉಲ್ಲೇಖ (1)ರ ತಿಳುವಳಿಕೆ ಪತ್ರದೊಂದಿಗೆ ದೋಷಾರೋಪಣಾ ಪಟ್ಟಿ ಅನುಬಂಧ–1 ರಿಂದ 4ನ್ನು ಜಾರಿ ಮಾಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಉಲ್ಲೇಖ (2) ರಂತೆ ಆಪಾದಿತರು ತನ್ನ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿದ್ದು, ಆರೋಪವನ್ನು ನಿರಾಕರಿಸಿರುತ್ತಾರೆ.

ಆಪಾದಿತರು ಸಲ್ಲಿಸಿದ ಲಿಖಿತ ಸಮಜಾಯಿಷಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಇವರ ಗೈರು ಹಾಜರಿ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ 11(2) ರಂತೆ ವಿಚಾರಣಾಧಿಕಾರಿಯಾಗಿ ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ., ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಂಗಳೂರು ಇವರನ್ನು ಮತ್ತು ನಿಯಮ 11(5)(ಸಿ) ಪ್ರಕಾರ ಮಂಡನಾಧಿಕಾರಿಯನ್ನಾಗಿ ಅಧೀಕ್ಷಕರು, ತಾಲ್ಲೂಕು ಪಂಚಾಯತ್ ಸುಳ್ಯ ಇವರನ್ನು ನೇಮಿಸಿ ಇಲಾಖಾ ವಿಚಾರಣೆ ನಡೆಸಲು ಉಲ್ಲೇಖ (3)ರ ಪ್ರಕಾರ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಯವರು ಉಲ್ಲೇಖ (4)ರಂತೆ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ವಿಚಾರಣೆಗೆ ಹಾಜರಾಗಲು ಆಪಾದಿತರಿಗೆ ಹಲವಾರು ಬಾರಿ ನೋಟೀಸ್ ನೀಡಿದ್ದರೂ ಶ್ರೀ ಮಹಾಂತಯ್ಯ ಬಸಯ್ಯ ಹಿರೇಮಠ ಇವರು ವಿಚಾರಣೆಗೆ ಹಾಜರಾಗಿರುವುದಿಲ್ಲವೆಂದು ವರದಿ ಸಲ್ಲಿಸಿ ಈ ಕಾರಣದಿಂದ ಆಪಾದಿತ ನೌಕರರ ವಿರುದ್ಧದ ಆರೋಪ ಸಾಬೀತಾಗಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ. ವಿಚಾರಣಾ ವರದಿಯನ್ನು ಉಲ್ಲೇಖ (5) ರಂತೆ ಆಪಾದಿತರಿಗೆ ಜಾರಿ ಮಾಡಿ ಪ್ರತಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಆಪಾದಿತರು ಉಲ್ಲೇಖ (6) ರಂತೆ ವಿಚಾರಣಾ ವರದಿಗೆ ತನ್ನ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುತ್ತಾ, ಕೆಳಕಂಡ ಕಾರಣಗಳಿಗೆ ಅನಧಿಕೃತ ಗೈರು ಹಾಜರಿ ಆರೋಪವನ್ನು ನಿರಾಕರಿಸಿರುವುದಾಗಿ ತಿಳಿಸಿರುತ್ತಾರೆ.

1) ಅನಾರೋಗ್ಯದ ಕಾರಣ ತಾನು ಪೂರ್ವಾನುಮೋದನೆ ಪಡೆದಿರುವುದಿಲ್ಲ.

2) ಈ ಮೊದಲು ತಾವು ಕಳಿಸಿರುವ ಪತ್ರಗಳು ತಲುಪಿರುವುದಿಲ್ಲ.

3) ಅನಾರೋಗ್ಯದ ಕಾರಣ ಕಾಲಕಾಲಕ್ಕೆ ರಜೆ ವಿಸ್ತರಿಸಲು ಅನುಮತಿ ಪತ್ರ ಕಳುಹಿಸಿರುವುದಿಲ್ಲ.

4) ತಾನು ದಿನಾಂಕ:20.09.2002 ರಂದು ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ವೈದ್ಯಕೀಯ ಪ್ರಮಾಣ ಪತ್ರದ ಜೊತೆ ಹಾಜರು ಆಗಿರುವುದಾಗಿ, ಆದರೆ ಸರ್ಕಾರದಿಂದ ಉತ್ತರ ಬಂದ ನಂತರ ಹಾಜರಾಗಲು ತಿಳಿಸಿದ್ದರಿಂದ ತಮ್ಮ ಸ್ವಗ್ರಾಮದಲ್ಲಿ ಇರುವುದಾಗಿ ತಿಳಿಸಿರುತ್ತಾರೆ.

ಆಪಾದಿತ ನೌಕರರು ನೀಡಿರುವ ಕಾರಣಗಳು ಕ್ಷುಲ್ಲಕವಾಗಿರುತ್ತದೆ. ರಜೆಯ ಮೇಲೆ ತೆರಳುವ ಮುನ್ನ ಮಂಜೂರಾತಿ ಪಡೆದಿರುವುದಿಲ್ಲ ಹಾಗೂ ರಜೆಯನ್ನು ವಿಸ್ತರಿಸಲು ಸಹ ಪತ್ರ ಬರೆದಿರುವುದಿಲ್ಲ ಎಂದು ಆರೋಪಿ ನೌಕರರು ಒಪ್ಪಿಕೊಂಡಂತಾಗಿದೆ. ಇವರು ನಿರಂತರವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ಸೇವೆಯಲ್ಲಿ ಮುಂದುವರಿಯಲು ಸೂಕ್ತವಾಗಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/350/ಗ್ರಾಪಂಕಾ/95, ದಿನಾಂಕ:14.02.1998ರ ಪ್ರಕಾರ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳನ್ನು ನೇಮಕಾತಿ ಪ್ರಾಧಿಕಾರರನ್ನಾಗಿ ಮಾಡಲಾಗಿದೆ. ಆದರೆ ಸದರಿ ನೌಕರರು ಸದರಿ ಆದೇಶ ಹೊರಡಿಸುವುದಕ್ಕಿಂತ ಮುಂಚಿತವಾಗಿ ನೇಮಕಾತಿ ಹೊಂದಿರುವುದರಿಂದ ಸದರಿಯವರಿಗೆ ಮಹಾದಂಡನೆ ವಿಧಿಸಲು ಉಲ್ಲೇಖ (7) ರಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅಲ್ಲದೇ, ಈ ಕಛೇರಿಯ ಉಲ್ಲೇಖ (8)ರ ಆದೇಶದಲ್ಲಿ ಶ್ರೀ ಮಹಾಂತಯ್ಯ ಇವರ ಹುದ್ದೆಯ ಲೀನ್ (ಕರ್ತವ್ಯದ ಹಕ್ಕು) ನ್ನು ಬೆಳ್ತಂಗಡಿ ತಾಲ್ಲೂಕು ಇಂದಬೆಟ್ಟು ಗ್ರಾಮ ಪಂಚಾಯತ್‌ಗೆ ವರ್ಗಾಯಿಸಿದ್ದು, ಈ ಹುದ್ದೆಯನ್ನು ಇವರಿಗಾಗಿಯೇ ಕಾದಿರಿಸಲಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಿದ್ದರೂ ಇದುವರೆಗೆ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

ಸದರಿಯವರ ವಿರುದ್ಧ ಶಿಸ್ತು ಕ್ರಮವನ್ನು ಉಪ ಕಾರ್ಯದರ್ಶಿಯವರ ಹಂತದಲ್ಲಿ ಕೈಗೊಳ್ಳುವಂತೆ ಉಲ್ಲೇಖ (9)ರ ಸರ್ಕಾರದ ಪತ್ರದಲ್ಲಿ ಸೂಚಿಸಿರುತ್ತಾರೆ. ಆದ್ದರಿಂದ ಸದರಿಯವರ ಅನಧಿಕೃತ ಗೈರು ಹಾಜರಿ ಆರೋಪದ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ 8(viii) ರಂತೆ ಸೇವೆಯಿಂದ ಯಾಕೆ ವಜಾ ಮಾಡಬಾರದು ಎಂಬ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿ, ಈ ಕಛೇರಿಯಿಂದ ಉಲ್ಲೇಖ (10) ರ ಪ್ರಕಾರ ಅಂತಿಮ ಕಾರಣ ಕೇಳುವ ನೋಟೀಸ್‌ನ್ನು ಸ್ವೀಕೃತಿ ಬಾಕಿ ನೊಂದಾಯಿತ ಅಂಚೆ ಮೂಲಕ ಜಾರಿ ಮಾಡಲಾಗಿತ್ತು. ಇದನ್ನು ಸದರಿಯವರು ಸ್ವೀಕರಿಸಿದ ಬಗ್ಗೆ ಅಂಚೆಯಲ್ಲಿ ಸ್ವೀಕೃತಿ ಬಂದಿದ್ದು, ಸ್ವೀಕೃತಿಯಲ್ಲಿರುವ ಸದರಿಯವರ ಸಹಿಯು ಈ ಕಛೇರಿಯಲ್ಲಿರುವ ದಾಖಲೆಗಳಲ್ಲಿರುವ ಅವರ ಸಹಿಯೊಂದಿಗೆ ತಾಳೆಯಾಗಿದ್ದು, ಶ್ರೀ ಮಹಾಂತಯ್ಯ ಇವರೇ ನೋಟೀಸ್ ಸ್ವೀಕರಿಸಿರುವುದು ದೃಢಪಟ್ಟಿದೆ. ಅಲ್ಲದೇ ಅಂತಿಮ ಕಾರಣ ಕೇಳುವ ನೋಟೀಸ್‌ನ್ನು ರಾಜ್ಯ ಮಟ್ಟದಲ್ಲಿ ಅತ್ಯಧಿಕ ಪ್ರಸಾರವುಳ್ಳ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ದಿನಾಂಕ:04.12.2009ರ ಸಂಚಿಕೆಯ ಪುಟ ಸಂಖ್ಯೆ 10ರಲ್ಲಿ ಪ್ರಕಟಿಸಿ ವಿವರಣೆ ನೀಡುವಂತೆ ಸದರಿಯವರಿಗೆ ಸೂಚಿಸಲಾಗಿತ್ತು.

ಆಪಾದಿತ ನೌಕರರು ಉಲ್ಲೇಖ (10)ರಂತೆ ನೀಡಲಾದ ಅಂತಿಮ ನೋಟೀಸ್‌ನ್ನು ಸ್ವೀಕರಿಸಿದ್ದರೂ ನಿಗದಿತ ಕಾಲಮಿತಿಯೊಳಗೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲವಾದ್ದರಿಂದ ಇವರು ಆರೋಪಗಳನ್ನು ಒಪ್ಪಿಕೊಂಡಂತಾಗಿದೆ. ಈ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರವು ಶ್ರೀ ಮಹಾಂತಯ್ಯ ಬಸಯ್ಯ ಹಿರೇಮಠ ಇವರ ಅನಧಿಕೃತ ಗೈರು ಹಾಜರಿ ಆರೋಪದ ಬಗ್ಗೆ ನಡೆಸಲಾದ ಇಲಾಖಾ ವಿಚಾರಣೆ ವರದಿ ಹಾಗೂ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸದರಿಯವರ ಮೇಲಿನ ಆರೋಪದ ಇಲಾಖಾ ವಿಚಾರಣೆ ವರದಿಯನ್ನು ಒಪ್ಪಿ, ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ 8(viii)ರಲ್ಲಿ ನಿಗದಿಪಡಿಸಿರುವ ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸಲು ನಿರ್ಣಯಿಸಿ ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ದಕಜಿಪ/ಆಡಳಿತ/ಶಿಸ್ತು/ಸಿಆರ್18/2004–05(ಎ6), ದಿನಾಂಕ:12ನೇ ಜನವರಿ, 2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಹಾಂತಯ್ಯ ಬಸಯ್ಯ ಹಿರೇಮಠ, ಅಂದಿನ ಕಾರ್ಯದರ್ಶಿ ಹರಿಹರಪಲ್ಲತಡ್ಕ ಗ್ರಾಮ ಪಂಚಾಯತ್, ಸುಳ್ಯ ತಾಲ್ಲೂಕು ಪ್ರಸ್ತುತ ಬೆಳ್ತಂಗಡಿ ತಾಲ್ಲೂಕು, ಇಂದಬೆಟ್ಟು ಗ್ರಾಮ ಪಂಚಾಯತ್ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಿದ್ದು, ಇವರು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವ ಕಾರಣ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ 8(viii)ರ ಪ್ರಕಾರ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ಈ ಮೂಲಕ ವಿಧಿಸಿ ಆದೇಶಿಸಿದೆ.

ಶಿಸ್ತು ಪ್ರಾಧಿಕಾರಿ ಹಾಗೂ ಉಪಕಾರ್ಯದರ್ಶಿ,
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು.

ಪಿ.ಆರ್.112

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂಖ್ಯೆ: ಆಸಾನಿ159/ಆಡಳಿತ–2/07–08/28966–72, ಬೆಂಗಳೂರು, ದಿನಾಂಕ:11ನೇ ಜನವರಿ, 2010

ವಿಷಯ: ಇಲಾಖಾ ವಿಚಾರಣೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಂಡ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಆರ್.ಎಂ.ಕುಲಕರ್ಣಿ ಇವರ ಅಮಾನತ್ತು ಅವಧಿಯನ್ನು "ಅಮಾನತ್ತಿನಲ್ಲಿಯೇ ಕಳೆದ ಅವಧಿ" ಎಂದು ಪರಿಗಣಿಸುವ ಕುರಿತು.

ಉಲ್ಲೇಖ: 1) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:13.10.2008.
2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:03.03.2009.
3) ಸರ್ಕಾರದ ಪತ್ರದ ಸಂಖ್ಯೆ: ಪಿಡಿ:114:ಎಸ್ಎಂಸಿ:2009, ದಿನಾಂಕ:15.07.2009.
4) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ಸಂಖ್ಯೆ: ಆಡಳಿತ/ 260/ 2009–10, ದಿನಾಂಕ:26.08.2009.

ಉಲ್ಲೇಖ(1)ರಲ್ಲಿನ ಆದೇಶದಲ್ಲಿ, ಅದೇ ಆದೇಶದಲ್ಲಿ ವಿವರಿಸಲಾದ ಕಾರಣಗಳಿಂದ ಸರ್ಕಾರದ ಸೇವೆಯಿಂದ ಅಮಾನತ್ತುಗೊಂಡಿದ್ದ ಹಿಂದಿನ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಆರ್.ಎಂ. ಕುಲಕರ್ಣಿ, (ಪ್ರಸ್ತುತ ಕಡ್ಡಾಯ ನಿವೃತ್ತಿ) ಇವರನ್ನು ಉಲ್ಲೇಖ (2)ರ ಆದೇಶದಲ್ಲಿ ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸಿ, ತಾಲ್ಲೂಕು ಕಛೇರಿ, ಸಿಂಧನೂರು ಇಲ್ಲಿ ನೇಮಕಾತಿ ಮಾಡಲಾಗಿತ್ತಾದರೂ, ಸದರಿ ಶ್ರೀ ಆರ್.ಎಂ. ಕುಲಕರ್ಣಿ (ಪ್ರಸ್ತುತ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ ಹೊಂದಿದವರು) ಅವರನ್ನು ಸೇವೆಗೆ ಪುನರ್ ಸ್ಥಾಪಿಸಿ ನೇಮಕಾತಿ ಮಾಡಲಾಗಿದ್ದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ವಿವಿಧ ಮೂಲಗಳಿಂದ ಆತನನ್ನು ಹಾವೇರಿ ಜಿಲ್ಲೆಗೆ ನೇಮಕಾತಿ ಮಾಡುವಂತೆ ತೀವ್ರವಾದ ಒತ್ತಡ ಹೇರುತ್ತಿದ್ದರೂ, ಅಂತಿಮವಾಗಿ, ಉಲ್ಲೇಖ (3)ರಲ್ಲಿನ ಸರ್ಕಾರದ ಪತ್ರದ ಅನ್ವಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲ್ಪಟ್ಟ ಶ್ರೀ ಆರ್.ಎಂ. ಕುಲಕರ್ಣಿ, ಈತನಿಗೆ ದಿನಾಂಕ:21.07.2009ರಂದು ಈ ನಿರ್ದೇಶನಾಲಯದಿಂದ ಒಂದು ಅಂತಿಮ ಜ್ಞಾಪನವನ್ನು ಹೊರಡಿಸಿ, ಸೇವೆಗೆ ಪುನರ್ ಸ್ಥಾಪಿಸಿ ನೇಮಕಾತಿ ಮಾಡಲಾದ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಿದ ನಂತರ, ಸದರಿಯವರು ದಿನಾಂಕ:11.08.2009ರ ಪೂರ್ವಾಹ್ನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಯಚೂರು ಇಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರೂ, ಅವರನ್ನು ನೇಮಕಾತಿ ಮಾಡಲಾಗಿದ್ದ ಸಿಂಧನೂರು ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಕುರಿತು ನಿರ್ದಿಷ್ಟವಾದ ದಿನಾಂಕವನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ/ ಈ ನಿರ್ದೇಶನಾಲಯಕ್ಕೆ ತಿಳಿಸದೇ ಇದ್ದುದರಿಂದ, ಅವರ ಅಮಾನತ್ತು ಅವಧಿ ಕುರಿತು ನಿರ್ಧರಿಸಿಲ್ಲವಾದ್ದರಿಂದ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಆಡಳಿತ:533:2009–10

ಶ್ರೀ ಆರ್.ಎಂ. ಕುಲಕರ್ಣಿ, ಹಿಂದಿನ ಸಾಂಖ್ಯಿಕ ನಿರೀಕ್ಷಕರು, ಇವರು ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಅರ್ಜಿ ಸಲ್ಲಿಸಲಾಗಿದೆ ಎಂದು ನಿರೂಪಿಸುವಂತೆ ಖೊಟ್ಟಿ ದಾಖಲೆ (forged documents) ಸೃಷ್ಟಿಸಿದ್ದ ಗಂಭೀರ ಸ್ವರೂಪದ ಆರೋಪಗಳ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಇಲಾಖಾ ವಿಚಾರಣೆಯಲ್ಲಿ ಆತನ ವಿರುದ್ಧದ "ಆರೋಪಗಳು" ಸಾಬೀತಾಗಿದ್ದರಿಂದ, ಆತನನ್ನು ಈ ನಿರ್ದೇಶನಾಲಯದ, ಇದೇ ಕ್ರಮಾಂಕದ ಆದೇಶದ ದಿನಾಂಕ:26.08.2009ರಲ್ಲಿ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿತ್ತಾದರೂ, ದಿನಾಂಕ:13.10.2008 ರಿಂದ 10.08.2009ರ ವರೆಗಿನ ಆತನ ಅಮಾನತ್ತಿನ ಅವಧಿಯನ್ನು ಆತನು ಪುನರ್ ನೇಮಕಾತಿಗೊಂಡ ತಹಶೀಲ್ದಾರರ ಕಛೇರಿ, ಸಿಂಧನೂರು ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದ ಖಚಿತವಾದ ದಿನಾಂಕದ ಮಾಹಿತಿ ಇಲ್ಲದೇ ಇದ್ದುದರಿಂದ ಯಾವ ರೀತಿ ಪರಿಗಣಿಸಬಹುದೆಂಬುದರ ಕುರಿತು ಆದೇಶಿಸಿಲ್ಲವಾದ್ದರಿಂದ, ಶ್ರೀ ಆರ್.ಎಂ. ಕುಲಕರ್ಣಿ, ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಂಡ ಇವರ ದಿನಾಂಕ:13.10.2008 ರಿಂದ 10.08.2009ರವರೆಗಿನ ಅಮಾನತ್ತಿನ ಅವಧಿಯನ್ನು "ಅಮಾನತ್ತಿನಲ್ಲಿಯೇ ಕಳೆದ ಅವಧಿ" (period spent under suspension) ಎಂದು ಪರಿಗಣಿಸಿ ಆದೇಶಿಸಲಾಗಿದೆ.

ಹೆಚ್.ಇ. ರಾಜಶೇಖರಪ್ಪ
ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

ಪಿ.ಆರ್.92

OFFICE OF THE DEPUTY COMMISSIONER, CHITRADURGA DISTRICT

NOTIFICATION

No.CNS/CR/8/2009-10, Dated:4th January, 2010

In exercise of the powers delegated by the Government in their notification No.RD 20 ETC 2009 Dated:02.12.2009, the undersigned under sub-section (4) of section 4 of the India census act 1948 (Central act No. 37 of 1948) here by appoints the officers noted in col.3 as Census Officers with

designation noted in col.4 for the jurisdiction noted in col.5 of the table given below for the purpose of 2011 Census.

Sl. No.	Administrative Unit	Designation	To be appointed as	Jurisdiction
1.	Chitradurga District	Additional Deputy Commissioner,	District Census Officer	Entire District excluding with the exception of CHitradurga city having population of more than one lakh.
2.	Chitradurga District	District Statistical Officer	Additional District Census Officer	Entire district excluding with the exception of Chitradurga City with a population of more than one lakh and work in co-ordination with District Census Officer under the control of Principal Census Officer.
3.	Chitradurga Sub-Division	Assistant Commissioner	Chitradurga Sub-Divisional Census Officer	Chitradurga Sub-Division excluding Chitradurga City area with one lakh and more population.
4.	Molakalmuru Taluk	Tahsildar	Census Charge Officer-Rural	Entire Molakalmuru taluk excluding urban areas
5.	Molakalmuru Taluk	Election Sheristedar	Additional Census Charge Officer-Rural	As entrusted by Tahsildar Molakalmur Taluk
6.	Town Panchayath Molakalmuru	Chief Officer	Census Charge Officer-Urban	Molakalmur Urban areas
7.	Challakere Taluk	Tahsildar	Census Charge Officer-Rural	Entire Challakere taluk excluding urban areas
8.	Challakere Taluk	R.R. Sheristedar	Additional Census Charge Officer-Rural	As entrusted by Tahsildar Challekere Taluk
9.	Town Muncipal Council Challakere	Chief Officer	Census Charge Officer-Urban	Respective Challakere urban areas
10.	City Municipal Council Chitradurga	Commissioner	City Census Officer	Entire Chitradurga City and out growth Medhehalli area and work in co-ordination with District Census Officer under the control of Principal Census Officer.

Sl. No.	Administrative Unit	Designation	To be appointed as	Jurisdiction
11.	City Municipal Council (60,000 and above population)	Municipal Tahsildar DC Office	Census Charge Officer-Urban 1	From ward No.1 to 18 of Chitradurga City Municipal Council
12.	City Municipal Council (60,000 and above pupulation)	Assistant Executive Engineer CMC Chitradurga	Census Charge Officer-Urban 2	From ward No.19 to 35 of Chitradurga City Municipal Council and outgrowth area of Medhehalli
13.	Chitradurga Taluk	Tahsildar	Census Charge Officer-Rural	Entire Chitradurga taluk excluding urban area
14.	Matadakurubarahatti Village (Census Town)			Matadakurubarahatti Village (C.T.)
15.	Chitradurga Taluk	Election Sheristedar	Additional Census Charge Officer-Rural	As entrusted by Chitradurga Tahsildar
16.	Holalkere Taluk	Tahsildar	Census Charge Officer-Rural	Entire Holalkere taluk excluding urban areas
17.	Chikkajajur Village (Census Towns)			Chikkajajur Village (CT)
18.	Holalkere Taluk	R.R. Sheristedar	Additional Census Charge Officer-Rural	As entrusted by Tahsildar Holalkere Taluk
19.	Town Panchayat Holalkere	Chief Officer	Census Charge Officer-Urban	Holalkere urban areas
20.	Hiriyur Taluk	Tahsildar	Census Charge Officer-Rural	Entire Hiriyur taluk excluding urban areas
21.	Hiriyur Taluk	R.R. Sheristedar	Additional Census Charge Officer-Rural	As entrusted by Tahsildar Hiriyur Taluk
22.	Town Muncipal Council Hiriyur	Chief Officer	Census Charge Officer-Urban	Hiriyur urban areas
23.	Hosadurga Taluk	Tahsildar	Census Charge Officer-Rural	Entire Hosadurga Taluk excluding urban areas
24.	Hosadurga Taluk	Election Sheristedar	Additional Census Charge Officer-Rural	As entrusted by Tahsildar Hosadurga Taluk
25.	Town Municipal Council Hosadurga	Chief Officer	Census Charge Officer-Urban	Hosadurga urban areas

Place: Chitradurga
Date:04.01.2010
PR-93

Principal Census Officer & Deputy Commissioner, Chitradurga District.

ಜಲ ಸಂಪನ್ಮೂಲ ಇಲಾಖೆ

ಪ್ರಕಟಣೆ

ಸಂಖ್ಯೆ: ಜಸಂಇ 110 ಎಂಟಿಪಿ 2009, ಬೆಂಗಳೂರು, ದಿನಾಂಕ:6ನೇ ಜನವರಿ, 2010

ಕೊಪ್ಪಳ ಜಿಲ್ಲೆ, ಹಿರೇಹಳ್ಳ ಯೋಜನೆಯ ಎಡದಂಡೆ ಮುಖ್ಯ ಕಾಲುವೆ ಮತ್ತು ಬಲದಂಡೆ ಮುಖ್ಯ ಕಾಲುವೆ ಹಾಗೂ ಅವುಗಳ ವಿತರಣಾ ನಾಲೆಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. (ಎಡದಂಡೆ ಮುಖ್ಯ ಕಾಲುವೆಯ ವಿತರಣೆ ನಾಲ ಸಂಖ್ಯೆ: 1, 19, 20 ಮತ್ತು ಬಲದಂಡೆ ಮುಖ್ಯ ಕಾಲುವೆಯ ವಿತರಣಾ ನಾಲೆ ಸಂಖ್ಯೆ:3, 15, 17, 29 ಹೊರತುಪಡಿಸಿ)

ಹಿರೇಹಳ್ಳ ಜಲಾಶಯದಿಂದ ನೀರಾವರಿಗಾಗಿ 16,072 ಎಕರೆ 32 ಗುಂಟೆ ಪ್ರದೇಶಕ್ಕೆ ನೀರು ಹರಿಸಬಹುದಾಗಿದೆ.

ಕ್ರಮ ಸಂಖ್ಯೆ	ಹಿರೇಹಳ್ಳ ಯೋಜನೆ	ಎಕರೆ–ಗುಂಟೆ
1.	ಎಡದಂಡೆ ಮುಖ್ಯ ಕಾಲುವೆಯ ಅಡಿಯಲ್ಲಿ	10,839–16
2.	ಬಲದಂಡೆ ಮುಖ್ಯ ಕಾಲುವೆಯ ಅಡಿಯಲ್ಲಿ	5,233–16
	ಒಟ್ಟು	**16,072–32**

ಜಮೀನುಗಳ ಉತ್ತಮ ಕೃಷಿಗೆ ಮತ್ತು ನೀರಾವರಿ ಕಾಮಗಾರಿಯ, ಜಲ ಸಂಪನ್ಮೂಲಗಳ ಯುಕ್ತ ಸಂರಕ್ಷಣೆಗಾಗಿ, ನೀರು ಪಡೆಯುವ ಜಮೀನುಗಳಲ್ಲಿ ಬೆಳೆಯುವ ಬೆಳೆಯ ಬಗೆಗಳು ಹಾಗೂ ಆ ಬಗೆಗಳ ಬಿತ್ತನೆಯ ಕಾಲ ನಿಯಂತ್ರಿಸುವುದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಸಮಯೋಚಿತ ಮತ್ತು ಅಪೇಕ್ಷಣೀಯವೆಂದು ಪರಿಗಣಿಸಿ, ಕರ್ನಾಟಕ ನೀರಾವರಿ ಕಾಯ್ದೆ 1965 ಸೆಕ್ಷನ್ 32(1) ರಂತೆ ಘೋಷಣೆ ಹೊರಡಿಸಲಾಗಿದೆ.

ಆರ್. ಶಿವಶಂಕರ್
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ–1)
ಜಲ ಸಂಪನ್ಮೂಲ ಇಲಾಖೆ.

ಪಿ.ಆರ್.94

ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರ ಕಾರ್ಯಾಲಯ, ಡಾ: ರವೀಂದ್ರ ಜೋಶಿ ಕಟ್ಟಡ, ಹಳಿಯಾಳ ಸಾಕಾ, ಜರ್ಮನ್ ಆಸ್ಪತ್ರೆ ರಸ್ತೆ, ನಾರಾಯಣಪೂರ, ಧಾರವಾಡ–580008

ಪ್ರಕಟಣೆ

ಕ್ರ.ಸಂ. ಸಿಬ್ಬಂದಿ:ಕಸ್ಥ: ಪ್ರಕಟಣೆ:09–10:1203 ದಿನಾಂಕ:8/13ನೇ ಜನವರಿ, 2010

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಧಾರವಾಡ ಈ ಕಾರ್ಯಾಲಯವು "ಬನಶಂಕರಿ ಅವೆನ್ಯೂ, ಎಸ್.ಟಿ.ವಿ.ಎಫ್ ಎದುರಿಗೆ, ರಾಮನಗರ, ಧಾರವಾಡ" ಈ ವಿಳಾಸದಿಂದ ನೂತನ ವಿಳಾಸಕ್ಕೆ ಸ್ಥಳಾಂತರಗೊಂಡು ದಿನಾಂಕ:01.01.2010 ರಿಂದ ಹೊಸ ವಿಳಾಸದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಕಛೇರಿಯ ನೂತನ ವಿಳಾಸವು ಈ ಕೆಳಗಿನಂತೆ ಇರುತ್ತದೆ.

ನೂತನ ವಿಳಾಸ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು,
ಡಾ: ರವೀಂದ್ರ ಜೋಶಿ ಕಟ್ಟಡ,
ಹಳಿಯಾಳ ನಾಕಾ– ಜರ್ಮನ್ ಆಸ್ಪತ್ರೆ ರಸ್ತೆ, ನಾರಾಯಣಪೂರ, ಧಾರವಾಡ–580008.

ಈ ಮಾಹಿತಿಯನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಎಸ್. ಶಿವಕುಮಾರ
ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ
ಉಪನಿರ್ದೇಶಕರು, ಧಾರವಾಡ.

ಪಿ.ಆರ್.95

ಕಾರ್ಮಿಕ ಇಲಾಖೆ

ತಿದ್ದುಪಡಿ

ಸಂಖ್ಯೆ: ಕಾಇ 8 ಎಲ್ಎಸ್ಐ 2008, ಬೆಂಗಳೂರು, ದಿನಾಂಕ:15ನೇ ಜನವರಿ, 2010

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 8 ಎಲ್ಎಸ್ಐ 2008, ದಿನಾಂಕ:05.12.2008ರಂದು ಹೊರಡಿಸಿದ ಅಧಿಸೂಚನೆಯಲ್ಲಿನ 1985ನೇ ಸಾಲಿನಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ನೇಮಕಾತಿ ಹೊಂದಿದ ಡಾ:ಗುರುನಾಥ್ ಎಂ. ಜೋಷಿ (ಕ್ರ.ಸಂ.39 ಜೇಷ್ಠತಾ ಪಟ್ಟಿಯ ಸಂಖ್ಯೆ:286) ಎಂದು ಇರುವುದನ್ನು ಡಾ: ಗುರುನಾಥ್ ವಿ.ಜೋಷಿ (Dr. GURUNATH V. JOSHI) ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಗೋವಿಂದಸ್ವಾಮಿ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ (ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್.117

IN THE COURT OF COMMISSIONER FOR WORKMEN'S COMPENSATION, BIDAR

No.LOB/WQA/ Cr-F-03/2010

Applicants:	V/s	Respondents:
1) Rajamma W/o Late Prashanth Age 20 years Occu: House hold R/o Village Khasimpur Bidar and 3 others.		1) Kotarki shankar S/o Dasharath rao, Age: Major Occup: Business contractor Opp: Gandhi Gunj Police Station Bidar. 2) The Authorised signatory Bajaj Allianz G.I. Co.Ltd., Bangalore.

PROCLAIMATION

Smt. Rajamma W/o late Prashanth R/o Village Khasimpur Bidar, have/ has filed application in this court claiming compensation stating that Late: Prashanth was working as Driver Under the Respondent No he met with an accident arising out of and during the course of employment as a result he died on 28.11.2009.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the court will proceeded further in the matter.

COMMISSIONER FOR WORKMEN'S
COMPENSATION, BIDAR.

PR-100

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಫ್‌ಸಿ–19/2008

ಅರ್ಜಿದಾರರು:		ಪ್ರತಿವಾದಿಗಳು:
1) ಪಿ. ರಾಮ್ಮನ ಬಿನ್ ಲೇಟ್ ಸೀತನ್ನ 2) ಶ್ರೀಮತಿ ರತ್ನಮ್ಮ ಕೋಂ ಪಿ. ರಾಮ್ಮನ ವಾಸ: CTM Area, ಮದನಪಲ್ಲಿ ಮಂಡಲಂ, ಚಿತ್ತೂರು ಜಿಲ್ಲೆ. ಆಂಧ್ರಪ್ರದೇಶ.	V/s	1) ಬಿ. ಮಹೇಶ ರೆಡ್ಡಿ ಬಿನ್ ಬಿ.ವಿ. ಶ್ರೀರಾಮಲು, ನಂ.14–547 ಟಿ.ಎನ್. ನಾಗಿರೆಡ್ಡಿ ಸ್ಟ್ರೀಟ್, ಮದನಪಲ್ಲಿ ಟೌನ್, ಚಿತ್ತೂರು ಜಿಲ್ಲೆ. 2) M/s ಓರಿಯಂಟಲ್ ಇನ್‌ಶೂರೆನ್ಸ್ ಕಂ.ಲಿ., D.O.I 1ನೇ ಮಹಡಿ ಹೋಟಲ್, ಅಧಿಕಾರಿ ಮುಂಭಾಗ, ಲಬ್ಬಿಪೇಟೆ. ಎಂ.ಜಿ. ರೋಡ್, ವಿಜಯವಾಡ, ಆಂಧ್ರಪ್ರದೇಶ–520010.

ಅಧಿಸೂಚನೆ

ಅರ್ಜಿದಾರರಾದ ಪಿ. ರಾಮ್ಮನ ಅವರು ತಮ್ಮ ಮಗ ಮಲ್ಲಿಕಾರ್ಜುನ ಅವರು 1ನೇ ಪ್ರತಿವಾದಿ ಬಿ. ಮಹೇಶರೆಡ್ಡಿ ರವರ ಬಳಿ ಚಾಲಕ: ಕ್ಲೀನರ್: ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:25.06.2008 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:13.08.2009 ರಂದು ನೀಡಲಾಗಿದೆ.

ಎಸ್. ರೇವಣ್ಣ

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು ಕೋಲಾರ ಉಪವಿಭಾಗ, ಕೋಲಾರ.

ಪಿ.ಆರ್.120

OFFICE OF THE DEPUTY COMMISSIONER, GULBARGA DISTRICT

NOTIFICATION

ಕಾ/ಜನನಲೆ:1/2009–10/40939, ದಿನಾಂಕ:8ನೇ ಜನವರಿ, 2010

In exercise of the powers delegated by the Government in their notification No.RD 20 ETC 2009 Dated:02.12.2009, the undersigned under sub-section (4) of section 4 of the India census act 1948 (Central act No.37 of 1948) here by appoints the officers noted in col.3 as Census Officers with designation noted in col.4 for the jurisdiction noted in col.5 of the table given below for the purpose of 2011 Census.

Sl. No.	Administrative Unit	Designation	To be appointed as	Jurisdiction
1.	Gulbarga District	Additional Deputy Commissioner,	District Census Officer	Entire District excluding the Corporations and cities having population of more than one lakh.
2.	Gulbarga District	District Statistical Officer	Additional District Census Officer	Entire district excluding the corporations and cities having population of more than one lakh and work in co-ordination with District Census Officer under the control of Principal Census Officer.
3.	Gulbarga Sub-Division	Assistant Commissioner	Sub-Divisional Census Officer	Respective Sub Division excluding Corporation and City areas with one lakh and more population.
4.	Sedam Sub Division	Assistant Commissioner	Sub Divisional Census Officer	Respective Sub Division excluding Corporation and City areas with one lakh and more population.
5.	Shahabad City Municipal Councils	Commissioner	City Census Officer	Entire City concerned area and work in co-ordination with District Census Officer Under the control of Principal Census Officer.
6.	Afzalpur Taluk	Tahsildar	Census Charge Officer-Rural	Entire Taluk excluding Urban areas.
7.	Aland Taluk	Tahsildar	Census Charge Officer-Rural	Entire Taluk excluding Urban areas.
8.	Chincholi Taluk	Tahsildar	Census Charge Officer-Rural	Entire Taluk excluding Urban areas.

Sl. No.	Administrative Unit	Designation	To be appointed as	Jurisdiction
9.	Chittapur Taluk	Thasildar	Census Charge Officer-Rural	Entire Taluk excluding Urban areas.
10.	Gulbarga Taluk	Thasildar	Census Charge Officer-Rural	Entire Taluk excluding Urban areas.
11.	Jewargi Taluk	Thasildar	Census Charge Officer-Rural	Entire Taluk excluding Urban areas.
12.	Sedam Taluk	Thasildar	Census Charge Officer-Rural	Entire Taluk excluding Urban areas.
13.	Aland Town Muncipal Council	Chief Officer	Census Charge Officer-Urban	Respective Urban Areas
14.	Chittapur Town Muncipal Council	Chief Officer	Census Charge Officer-Urban	Respective Urban Areas
15.	Wadi Town Muncipal Council	Chief Officer	Census Charge Officer-Urban	Respective Urban Areas
16.	Sedam Town Muncipal Council	Chief Officer	Census Charge Officer-Urban	Respective Urban Areas
17.	Shahabad Notified Area Committee	Chief Officer	Census Charge Officer-Urban	Respective Urban Areas
18.	Afzalpur Town Panchayat	Chief Officer	Census Charge Officer-Urban	Respective Urban Areas
19.	Chincholi Town Panchayat	Chief Officer	Census Charge Officer-Urban	Respective Urban Areas
20.	Jewargi Town Panchayat	Chief Officer	Census Charge Officer-Urban	Respective Urban Areas
21.	Afzalpur Taluka	Deputy Tahsildar	Additional Census Charge Officer	As entrusted by the Concerned Tahsildar
22.	Aland Taluka	Deputy Tahsildar	Additional Census Charge Officer	As entrusted by the Concerned Tahsildar
23.	Chincholi Taluka	Deputy Tahsildar	Additional Census Charge Officer	As entrusted by the Concerned Tahsildar
24.	Chittapur Taluka	Deputy Tahsildar	Additional Census Charge Officer	As entrusted by the Concerned Tahsildar
25.	Gulbarga Taluka	Deputy Tahsildar	Additional Census Charge Officer	As entrusted by the Concerned Tahsildar
26.	Jewargi Taluka	Deputy Tahsildar	Additional Census Charge Officer	As entrusted by the Concerned Tahsildar

Sl. No.	Administrative Unit	Designation	To be appointed as	Jurisdiction
27.	Sedam Taluka	Deputy Tahsildar	Additional Census Charge Officer	As entrusted by the Concerned Tahsildar
28.	Kurkunta Census Town	Tahsildar Sedam Taluk	Census Charge Officer Urban	Entire Census Town Area

Place: Gulbarga

Date:08.01.2010

PR-115

Principal Census Officer & Deputy Commissioner, Gulbarga District.

REVENUE DEPARTMENT

OFFICE OF THE PRINCIPAL CENSUS OFFICER AND DEPUTY COMMISSIONER, BIJAPUR

AMENDMENT NOTIFICATION

No.RB/CNS/CR-04/09-10, Dated:13th January, 2010

Sub: Appointment of census District/ additional/ Sub-Division/City/census Charge Officer-reg.

Ref:1) Govt. Notification No.RD/20/ETC/2009, Dated:02.12.2009.

2) This office Notification No.RB/CNS/CR/04/09-10, Dated:24.12.2009.

3) Director of census operations Karnataka Bangalore Circular No.3 No.CEN/18/KAR/2009, Dated:04.01.2010.

Under this office Notification referred above at Sl.No.2, Notification has been issued for appointment of District/ additional/Sub-Division/city/census Charge Officer/ Ten (10) Additional census charge officers (Rural) to provide assistance to the Tahsildar and census charge officer (Rural). But where as in circular No.3 (No.CEN/18/KAR/2009 Dated:04.01.2010) referred at Sl.No.3 has issued Instructions to appoint one Deputy Tahsildar/ Shirastedar to assist the Tahsildar and census Charge officer (Rural) Hence the following Amendment Notification is issued.

Only Five (5) Deputy Tahsildars have been appointed instead of Ten (10) as Additional census charge officers (Rural). To assist to the Thasildars and census charge officer (Rural).

Sl. No.	Name of the Deputy Tahsildar	Name of the Taluka
1.	Sri C.S. Kulkarni Dy. Tahsildar, Bableshwar	Bijapur
2.	Sri Suresh Chavalar Dy. Tahsildar Kolhar	B. Bagewadi
3.	Sri B.G. Agarkhed Dy. Tahsildar Talikoti	Muddebihal
4.	Sri C.T. Dhavalagi Dy. Tahsildar Chadachan	Indi
5.	Sri R.M. Turakanageri Dy. Tahsildar Almel	Sindagi

Rest five Deputy Tahsildars Shown in Notification Dated:24.12.2009 have be deleted from the said Notification.

R. Shantharaj

PR-116

Principal Census Officer & Deputy Commissioner, Bijapur.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ ಇವರ ನಡವಳಿಕೆಗಳು

ವಿಷಯ: ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇವರ ಅಮಲ್ಜಾರಿ ಪ್ರಕರಣ ಸಂಖ್ಯೆ: ಎಆರ್‌ಇ:ಯುಬಿಎಫ್: ಆರ್‌ಓ:1359:2005-06, ಎಆರ್‌ಇ:ಯುಬಿಎಫ್:ಆರ್‌ಓ:829:2006-07(ವ), (ವ)376:2006-07 ಸಂಬಂಧಪಟ್ಟಂತೆ ಸ್ಥಿರಾಸ್ತಿಯನ್ನು 1960ನೇ ಸಹಕಾರ ಸಂಘಗಳ ನಿಯಮಗಳ ನಿಯಮ 38(6)(ಎ) ರನ್ವಯ ಮಾರಾಟ ಸ್ಥಿರೀಕರಣಗೊಳಿಸುವ ಬಗ್ಗೆ.

ಉಲ್ಲೇಖ: 1) ದಾವಾ ಸಂಖ್ಯೆ: ಜೆಆರ್‌ಡಿ:ಯುಬಿಎಫ್:ಪ್ರಾ.ಹುಬ್ಬಳ್ಳಿ:1651:2005-06.

2) ಅಮಲ್ಜಾರಿ ಸಂಖ್ಯೆ:ಎಆರ್‌ಇ:ಯುಬಿಎಫ್:ಆರ್‌ಓ:1359:2005-06, ಎಆರ್‌ಇ:ಯುಬಿಎಫ್: ಆರ್‌ಓ: 829: 2006-07(ವ), (ವ)376:2006-07.

3) ಮಾರಾಟಾಧಿಕಾರಿಯವರ ವರದಿ ದಿನಾಂಕ:04.12.2009.

ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ. ಅವಾರ್ಡುದಾರ

ಶ್ರೀ ಶ್ರೀಪಾದ ದೇವರು ಹೆಗಡೆ, **ವಿರುದ್ಧ** ತೀರ್ಪುಬಾಕಿದಾರ

ಆಲಮನೆ, ಕಾನಗೋಡ, ತಾಲ್ಲೂಕು, ಶಿರಸಿ.

ಪ್ರಸ್ತಾವನೆ:

ಶ್ರೀ ಶ್ರೀಪಾದ ದೇವರು ಹೆಗಡೆ, ಆಲಮನೆ, ಕಾನಗೋಡ, ತಾಲ್ಲೂಕು ಶಿರಸಿ ಇವರು ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ, ಇದರ ಶಿರಸಿ ಉಪನಗರ ಶಾಖೆಯಿಂದ ದಿನಾಂಕ:17.07.2000 ರಂದು ರೂ.3,00,000-00 (ರೂ. ಮೂರು ಲಕ್ಷ ಮಾತ್ರ) ಗಳನ್ನು ಸ್ಥಿರಾಸ್ತಿ ಅಡಮಾನ ಮಾಡಿ ಸಾಲವಾಗಿ ಪಡೆದು ಬ್ಯಾಂಕಿನ ಸಾಲ ಮಂಜೂರಾತಿಯ ಷರತ್ತು ಮತ್ತು ನಿಯಮಗಳ ಪ್ರಕಾರ ಸಾಲವನ್ನು ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದ ಕಾರಣ ಸಾಲ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 41(1)(ಎ) ರನ್ವಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441) ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸ.ಪ. ಬ್ಯಾಂಕುಗಳ ಮಹಾ ಮಂಡಳ ನಿ., ಹುಬ್ಬಳ್ಳಿ, ಪ್ರಾಂತ ಹುಬ್ಬಳ್ಳಿ ಇವರ ನ್ಯಾಯಾಲಯದಿಂದ ಪಡೆದ ದಾವಾ ಸಂಖ್ಯೆ: ಜೆಆರ್‌ಡಿ:ಯುಬಿಎಫ್:ಪ್ರಾ.ಹುಬ್ಬಳ್ಳಿ:1651:2005-06 ಆದೇಶ ದನ್ವಯ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, 2004ರ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ ನಿಯಮ 13(1)ರ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು, ಕ.ರಾ.ಸ.ಪ. ಬ್ಯಾಂಕುಗಳ ಮಹಾ ಮಂಡಲ ನಿ., ಪ್ರಾಂತೀಯ ಕಛೇರಿ ಹುಬ್ಬಳ್ಳಿ ರವರಲ್ಲಿ ಮೂಲತಃ ಸಿಇಪಿ ಸಂಖ್ಯೆ:1359:2005-06 ರಂತೆ ದಾಖಲಾಗಿ ಮುಂದಿನ ವಸೂಲಿ ಕ್ರಮದ ಬಗ್ಗೆ ಅಮಲ್ಜಾರಿ ಅರ್ಜಿಯನ್ನು ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ವಹಿಸಲಾಗಿತ್ತು. ಸದರಿ ಮಾರಾಟಾಧಿಕಾರಿಯವರು ಅಂತಿಮವಾಗಿ ಅಮಲ್ಜಾರಿ ಕ್ರಮ ಕೈಗೊಂಡು ಸಾಲಕ್ಕೆ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ದಿನಾಂಕ:03.09.2009ರಂದು ಸಾರ್ವಜನಿಕ ಹರಾಜಿಗೆ ತೆಗೆದು, ಸದರಿ ದಿನ ನಡೆಸಿದ ಹರಾಜಿನಲ್ಲಿ ಎಂಟು ಜನ ಬಿಡ್‌ದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ರೂ.1,80,000/-(ರೂ. ಒಂದು ಲಕ್ಷ ಎಂಭತ್ತು ಸಾವಿರ ಮಾತ್ರ)ಗಳಿಗೆ ಬಿಡ್ಡು ಮಾಡಿದ್ದು ಅತಿ ಹೆಚ್ಚು ಬಿಡ್‌ದರರಾಗಿರುತ್ತಾರೆ.

ಡಿಕ್ರಿ ಆದೇಶ ಮತ್ತು ಅಮಲ್ಜಾರಿ ಅರ್ಜಿ ಅನ್ವಯ ಬಾಕಿದಾರನಿಂದ ಸದರಿ ಸ್ಥಿರಾಸ್ತಿ ಅಡವು ಮಾಡಿದ ಸಾಲದ ಖಾತೆಗೆ ಹರಾಜು ದಿನಾಂಕದ ವರೆಗೆ ಅಸಲು, ಬಡ್ಡಿ ಹಾಗೂ ಇತರೇ ಖರ್ಚು ಸೇರಿ ಒಟ್ಟೂ ರಖಂ ರೂ.2,32,462-30 ಬ್ಯಾಂಕಿಗೆ ಬಾಕಿ ಬರಬೇಕಾಗಿರುತ್ತದೆ. ರೂ.1,80,000-00ಗಳ ಅತಿ ಹೆಚ್ಚಿನ ಬಿಡ್ಡುದಾರರಾದ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ ರವರು ಬಿಡ್ಡಿನ ಮೊತ್ತದ ಶೇಕಡಾ 15ರ ಬಾಬ್ತು ರೂ.30,000-00 (ರೂ. ಮೂವತ್ತು ಸಾವಿರ ಮಾತ್ರ) ಗಳನ್ನು ಹರಾಜಿನ ಸ್ಥಳದಲ್ಲಿಯೇ ಬ್ಯಾಂಕಿನಲ್ಲಿ ವಸೂಲಾಧಿಕಾರಿಗಳ ಅಮಾನತ್ ಖಾತೆಗೆ ಪಾವತಿ ಮಾಡಿರುತ್ತಾರೆ. ಉಳಿಕೆ ಬಾಕಿ ಬಿಡ್ ಮೊತ್ತ ರೂ.1,50,000-00 (ರೂ.ಒಂದು ಲಕ್ಷ ಐವತ್ತು ಸಾವಿರ ಮಾತ್ರ) ಗಳನ್ನು ಮತ್ತು ಮುದ್ರಾಂಕ ಶುಲ್ಕ ರೂ.12,204-00 ಹಾಗೂ ನೋಂದಣಿ ಫೀ ರೂ.1,800-00, ಒಟ್ಟು ರೂ.1,64,004-00ಗಳನ್ನು ದಿನಾಂಕ:15.10.2009 ರಂದು ಬ್ಯಾಂಕಿನಲ್ಲಿ ವಸೂಲಾಧಿಕಾರಿಗಳ ಅಮಾನತ್ ಖಾತೆಗೆ ಜಮಾ ಮಾಡಿರುತ್ತಾರೆ.

ದಿನಾಂಕ:03.09.2009 ರಂದು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಿದ ಶಿರಸಿ ತಾಲ್ಲೂಕು, ಪುಟ್ಟನಮನೆ ಗ್ರಾಮದ ರೆವೆನ್ಯೂ ಸರ್ವೆ ನಂಬರ್-121 ಬ ಪ್ಲಾಟ್ ನಂಬರ್ 80, ಕ್ಷೇತ್ರ 0-01-13.5 ಸ್ಥಿರಾಸ್ತಿಯನ್ನು ತೀರ್ಪು ಬಾಕಿದಾರನಾದ ಶ್ರೀ ಶ್ರೀಪಾದ ದೇವರು ಹೆಗಡೆ ಇವರು ಸಾಲ ಪಡೆಯುವ ಸಂದರ್ಭದಲ್ಲಿ ಅಡವು ಮಾಡಿದಂತೆ ಆಸ್ತಿಯ ರೆಕಾರ್ಡ್ ಉತಾರ ಮೇಲೆ ಡಿಕ್ರಿದಾರಕ ಬ್ಯಾಂಕಿನ ಭೋಜಾ ಪ್ರಥಮವಾಗಿ ದಾಖಲಿಸಿದ್ದು ಇರುತ್ತದೆ. ಸದರಿ ಆಸ್ತಿಯನ್ನು ಚೇತನಾ ಸಹಕಾರಿ ಬ್ಯಾಂಕ್ ನಿ., ಶಿರಸಿ ರವರಿಗೆ ಬರತಕ್ಕ ಬಾಕಿ ರಖಂ ಬಗ್ಗೆ ಸದ್ರಿ ಬ್ಯಾಂಕಿನ ಮಾರಾಟಾಧಿಕಾರಿಗಳು ಕಬ್ಜಾ

ಜಪ್ತಿ ಮಾಡಿದಂತೆ ಆಸ್ತಿ ರೆಕಾರ್ಡಿನಲ್ಲಿ ಚೇತನಾ ಸಹಕಾರಿ ಬ್ಯಾಂಕಿನ ಜಪ್ತಿ ಭೋಜಾ ದಾಖಲಾಗಿದ್ದು ಇರುತ್ತದೆ. ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಹಾಗೂ ಚೇತನಾ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇವರು ತಮ್ಮೊಳಗೆ ಹೊಂದಾಣಿಕೆ ಮಾಡಿಕೊಂಡಂತೆ ಚೇತನಾ ಸಹಕಾರಿ ಬ್ಯಾಂಕ್ ನಿ., ಶಿರಸಿ ಇವರು ಪತ್ರ ಸಂಖ್ಯೆ:829/09-10 ದಿನಾಂಕ:24.11.2009 ರಂತೆ ಸದ್ರಿ ಸ್ಥಿರಾಸ್ತಿಯ ಮೇಲೆ ದಾಖಲಾದ ಜಪ್ತಿ ಭೋಜಾವನ್ನು ಕಡಿಮೆ ಮಾಡಿಕೊಡುವ ಬಗ್ಗೆ ಒಪ್ಪಿಗೆ ಪತ್ರ ಸಲ್ಲಿಸಿದ್ದು ಇರುತ್ತದೆ.

ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕಿನ ಮಾರಾಟಾಧಿಕಾರಿಯವರು ದಿನಾಂಕ:03.09.2009ರಂದು ನಡೆಸಿದ ಸಾರ್ವಜನಿಕ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ಹರಾಜು ಕ್ರಮವನ್ನು ನಡೆಸಿರುವುದಾಗಿ ಹಾಗೂ ಬ್ಯಾಂಕಿನ ಬಾಕಿದಾರರಾದ ಶ್ರೀ ಶ್ರೀಪಾದ ದೇವರು ಹೆಗಡೆ ಇವರ ಸ್ಥಿರಾಸ್ತಿಯನ್ನು ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ ರವರಿಗೆ ಮಾರಾಟ ಮಾಡಿರುವ ಆಸ್ತಿಯ ಹರಾಜನ್ನು ಖಾಯಂಗೊಳಿಸಬೇಕೆಂದು ಉಲ್ಲೇಖ (3)ರಂತೆ ಈ ಕಛೇರಿಗೆ ಸವಿಸ್ತಾರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:03.09.2009ರಂದು ನಡೆಸಿದ ಸ್ಥಿರಾಸ್ತಿ ಬಹಿರಂಗ ಹರಾಜಿನ ನಡವಳಿಕೆಯನ್ನು ಪರಿಶೀಲಿಸಿದಾಗ ಸದರಿ ಸ್ಥಿರಾಸ್ತಿ ಬಹಿರಂಗ ಹರಾಜಿನಲ್ಲಿ ಒಟ್ಟೂ 8 ಜನ ಬಿಡ್‌ದಾರರು ಭಾಗವಹಿಸಿದ್ದು, ಈ ಪೈಕಿ ಅತ್ಯಧಿಕ ಬಿಡ್ಡುದಾರರಾದ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ ಇವರಿಗೆ ರೂ.1,80,000-00 (ರೂ. ಒಂದು ಲಕ್ಷ ಎಂಭತ್ತು ಸಾವಿರ) ಗಳಿಗೆ ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದು ಬಂದಿರುತ್ತದೆ. ಬಹಿರಂಗ ಹರಾಜು ನಡೆದ 30 ದಿನಗಳೊಳಗೆ ಬಾಕಿದಾರರು ವಾದಿ ಬ್ಯಾಂಕಿಗೆ ಬರಬೇಕಾದ ಸಾಲವನ್ನು ಮರುಪಾವತಿ ಮಾಡದೇ ಇರುವುದರಿಂದ ಮತ್ತು ಈ ಬಗ್ಗೆ ಯಾರಿಂದಲೂ ಯಾವುದೇ ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ ದಿನಾಂಕ:03.09.2009 ರಂದು ನಡೆಸಲಾದ ಸ್ಥಿರಾಸ್ತಿ ಹರಾಜನ್ನು ಖಾಯಂಗೊಳಿಸಬಹುದೆಂದು ಮಾರಾಟಾಧಿಕಾರಿಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಮಾರಾಟಾಧಿಕಾರಿಯವರು ಕೈಗೊಂಡ ಕ್ರಮಗಳು ಕಾನೂನುಬದ್ಧವಾಗಿದೆ ಎಂದು ಕಂಡುಬಂದಿರುವುದರಿಂದ ಈ ಕೆಳಗಿನ ಸ್ಥಿರೀಕರಣದ ಆದೇಶ ಹೊರಡಿಸಲಾಗಿದೆ.

ಆದೇಶ

ಕ್ರಮ ಸಂಖ್ಯೆ: ಎಆರ್ 21/ಬ/ಸಿ.ಇ.ಪಿ.ನಂಬರ್ (ವ) 376/06-07/2009-10, ದಿನಾಂಕ:15ನೇ ಡಿಸೆಂಬರ್, 2009

ಶ್ರೀ ಎಸ್.ಬಿ. ಅಗೇರ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 1960 ನಿಯಮ 38(6)(ಎ) ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂಖ್ಯೆ:ಎಆರ್‌ಇ:ಯುಬಿಎಫ್:ಆರ್‌ಓ:1359:2005-06, ಎಆರ್‌ಇ:ಯುಬಿಎಫ್:ಆರ್‌ಓ:829:2006-07 (ವ), (ವ)376:2006-07ನ್ನು ಶ್ರೀ ಶ್ರೀಪಾದ ದೇವರು ಹೆಗಡೆ ಇವರಿಗೆ ಸೇರಿದ ಶೆಡ್ಯೂಲ್‌ನಲ್ಲಿ ಕಾಣಿಸಿದ ಸ್ಥಿರಾಸ್ತಿಯನ್ನು ದಿನಾಂಕ:03.09.2009 ರಂದು ವಾದಿ ಬ್ಯಾಂಕಿನ ಮಾರಾಟಾಧಿಕಾರಿಯವರು ಮಾಡಿದ ಬಹಿರಂಗ ಹರಾಜಿನಲ್ಲಿ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ಅತಿ ಹೆಚ್ಚಿನ ಬಿಡ್ಡುದಾರರಾಗಿದ್ದು, ಅತ್ಯಧಿಕ ಬಿಡ್ ರಖಂ ಆದ ರೂ.1,80,000-00 (ರೂ. ಒಂದು ಲಕ್ಷ ಎಂಭತ್ತು ಸಾವಿರ ಮಾತ್ರ) ಗಳನ್ನು ಪಡೆದು ಈ ಕೆಳಗೆ ಶೆಡ್ಯೂಲ್‌ನಲ್ಲಿ ಕಾಣಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಖಾಯಂಗೊಳಿಸಿ ಸ್ಥಿರೀಕರಿಸಿರುವುದಾಗಿ ಈ ಮೂಲಕ ಆದೇಶ ಮಾಡಿದೆ. ಅಲ್ಲದೇ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇದರ ಶಿರಸಿ ಉಪನಗರ ಶಾಖೆಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ ಇವರ ಅಮಾನತ ಖಾತೆಯಲ್ಲಿ ಜಮಾ ಇರುವ ಒಟ್ಟು ರಖಂ ರೂ.1,94,004-00 ಗಳಲ್ಲಿ ಸದರಿ ಸ್ಥಿರಾಸ್ತಿ ಅಡವು ಮಾಡಿದ ಬಾಕಿದಾರನ ಸಾಲದ ಖಾತೆಗಳಿಗೆ ರೂ.1,80,000-00 ಗಳನ್ನು ಜಮಾ ಪಡೆದುಕೊಳ್ಳಲು ಮತ್ತು ಉಳಿದ ರಖಂ ರೂ.14,004-00ಗಳಲ್ಲಿ ಮುದ್ರಾಂಕ ಶುಲ್ಕಕ್ಕೆ ರೂ.12,204-00 ಹಾಗೂ ನೋಂದಣಿ ಫೀ ರೂ.1,800-00 ಭರಣ ಮಾಡಲು ಸಹ ಸದರಿ ಬ್ಯಾಂಕಿನ ಶಿರಸಿ ಉಪನಗರ ಶಾಖೆಯ ಶಾಖಾ ವ್ಯವಸ್ಥಾಪಕರಿಗೆ ಈ ಮೂಲಕ ಆದೇಶ ನೀಡಲಾಗಿದೆ.

ಸ್ಥಿರಾಸ್ತಿಯ ವಿವರ

ಉತ್ತರ ಕನ್ನಡ ಜಿಲ್ಲಾ, ಶಿರಸಿ ತಾಲ್ಲೂಕು, ಪುಟ್ಟನಮನೆ ಗ್ರಾಮದಲ್ಲಿರುವ ಸ್ಥಿರಾಸ್ತಿ ರೆವೆನ್ಯೂ ಸರ್ವೆ ನಂಬರ್ 121 ಬ ಪ್ಲಾಟ್ ನಂಬರ್ 80, ಕ್ಷೇತ್ರ:0-01-13.5 ಇದರ ಚಕ್‌ಬಂದಿ ಈ ಕೆಳಗಿನಂತಿರುತ್ತದೆ.

ಉತ್ತರಕ್ಕೆ: ರೆವೆನ್ಯೂ ಸರ್ವೆ ನಂಬರ್ 121 ಬ/ ಪ್ಲಾಟ್ ನಂಬರ್ 6ರ ಗಡಿ

ದಕ್ಷಿಣಕ್ಕೆ: ರೆವೆನ್ಯೂ ಸರ್ವೆ ನಂಬರ್ 121 ಬ/ ಪ್ಲಾಟ್ ನಂಬರ್ 81ರ ಗಡಿ

ಪೂರ್ವಕ್ಕೆ : ಪ್ಲಾಟ್ ರಸ್ತೆ

ಪಶ್ಚಿಮಕ್ಕೆ: ರೆವೆನ್ಯೂ ಸರ್ವೆ ನಂಬರ್ 121 ಬ/ ಪ್ಲಾಟ್ ನಂಬರ್ 71 ಗಡಿ

ಮಾರಾಟದ ಮೊಬಲಗು: ರೂ.1,80,000/-

ಮಾರಾಟ ಮಾಡಿದ ದಿನಾಂಕ: 03.09.2009

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:15.12.2009 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ
ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ.

ನಮೂನೆ ಕ್ರಮಾಂಕ–10

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರನ್ವಯ ರಚಿತವಾದ ನಿಯಮ 38, ಉಪನಿಯಮ 7ರ ಪ್ರಕಾರ ಕೊಟ್ಟ ವಿಕ್ರಿ ಪ್ರಮಾಣ ಪತ್ರ

ನೋಂದಣಿ ಶುಲ್ಕದ ವಿವರ:

ಚಲನ ರಶೀದಿ ನಂಬರ್: 130695

ದಿನಾಂಕ: 01.01.2010

ರಖಂ : 1800=00

ಶಾಖೆ : ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶಿರಸಿ.

ದಾವಾ ಸಂಖ್ಯೆ: ಜೆಆರ್‌ಡಿ/ ಯುಬಿಎಫ್/ ಪ್ರಾ.ಹುಬ್ಬಳ್ಳಿ/1651/2005–06
ಅಮಲ್ಜಾರಿ ಸಂಖ್ಯೆ: ಎಆರ್‌ಇ/ಯುಬಿಎಫ್/ಆರ್.ಓ./1359/2005–06
ಎಆರ್‌ಇ/ಯುಬಿಎಫ್/ಆರ್.ಓ./829/2006–07(ವ)
(ವ) 376/2006–07

ಹೆಸರು: ಶ್ರೀ ಎಸ್.ಬಿ. ಆಗೇರ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ (ಉ.ಕ.)

ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ. ....ಡಿಕ್ರಿದಾರ

ವಿರುದ್ಧ

ಶ್ರೀ ಶ್ರೀಪಾದ ದೇವರು ಹೆಗಡೆ, ಆಲಮನೆ, ಕಾನಗೋಡ, ತಾ: ಶಿರಸಿ .... ತೀರ್ಪುಬಾಕಿದಾರ

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,

ಉತ್ತರ ಕನ್ನಡ ಜಿಲ್ಲಾ ಶಿರಸಿ ತಾಲ್ಲೂಕು, ಶಿರಸಿ ಗ್ರಾಮದ ರಹವಾಸಿ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ಉತ್ತರ ಕನ್ನಡ ಜಿಲ್ಲಾ, ಶಿರಸಿ ತಾಲ್ಲೂಕು, ಆಲಮನೆ, ಕಾನಗೋಡ ಗ್ರಾಮದ ನಿವಾಸಿ ಶ್ರೀ ಶ್ರೀಪಾದ ದೇವರು ಹೆಗಡೆ, ಇವರಿಂದ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇದರ ಶಿರಸಿ ಉಪನಗರ ಶಾಖೆಗೆ ಸಂದಾಯವಾಗತಕ್ಕ ಬಾಕಿ ವಸೂಲಿ ಬಗ್ಗೆ ಈ ಕಾರ್ಯಾಲಯದಲ್ಲಿ ದಾಖಲು ಪಡಿಸಿದ ಅಮಲ್ಜಾರಿ ಪ್ರಕರಣ ಸಂಖ್ಯೆ: ಎಆರ್‌ಇ: ಯುಬಿಎಫ್:ಆರ್‌ಓ:1359:2005–06, ಎಆರ್‌ಇ:ಯುಬಿಎಫ್:ಆರ್‌ಓ:829:2006–07 (ವ), (ವ)376:2006–07ನೇದರ ಅಮಲ ಬಜಾವಣೆಯಲ್ಲಿ ಈ ಕೆಳಗೆ ಅನುಬಂಧದಲ್ಲಿ ಕಾಣಿಸಿದ ತೀರ್ಪು ಬಾಕಿದಾರನು ಸಾಲಕ್ಕೆ ಒತ್ತೆ ನೀಡಿದ ಸ್ಥಿರಾಸ್ತಿಯನ್ನು ಅಧಿಕಾರ ಹೊಂದಿದ ಮಾರಾಟಾಧಿಕಾರಿ, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಕೇಂದ್ರ ಕಛೇರಿ, ಶಿರಸಿ ಇವರು ನಡೆಸಿದ ಜಾಹೀರ ಲಿಲಾವಿನಲ್ಲಿ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ಖರೀದಿಸಿ, ಖರೀದಿ ರಖಂ ರೂ.1,80,000/– (ರೂ. ಒಂದು ಲಕ್ಷ ಎಂಭತ್ತು ಸಾವಿರ ಮಾತ್ರ) ವನ್ನು ಪಾವತಿ ಮಾಡಿರುತ್ತಾರೆ, ಮತ್ತು ಸದ್ರಿ ವಿಕ್ರಿಯು ನನ್ನಿಂದ ದಿನಾಂಕ:15.12.2009 ರಂದು ಖಾಯಂ ಮಾಡಲ್ಪಟ್ಟಿರುತ್ತದೆ.

ಸ್ಥಿರಾಸ್ತಿಗಳ ಅನುಬಂಧ:

ನೋಂದಣಿ ಜಿಲ್ಲಾ:	ಉತ್ತರ ಕನ್ನಡ
ತಾಲ್ಲೂಕು :	ಶಿರಸಿ
ಗ್ರಾಮ :	ಪುಟ್ಟನಮನೆ

ಸ್ಥಿರಾಸ್ತಿಗಳ ವರ್ಣನೆ

ಉತ್ತರಕ್ಕೆ	: ರೆವೆನ್ಯೂ ಸರ್ವೆ ನಂಬರ್ 121 ಬ, ಪ್ಲಾಟ್ ನಂ.6 ರ ಗಡಿ
ದಕ್ಷಿಣಕ್ಕೆ	: ರೆವೆನ್ಯೂ ಸರ್ವೆ ನಂಬರ್ 121ಬ, ಪ್ಲಾಟ್ ನಂ.81ರ ಗಡಿ
ಪೂರ್ವಕ್ಕೆ	: ಪ್ಲಾಟ್ ರಸ್ತೆ
ಪಶ್ಚಿಮಕ್ಕೆ	: ರೆವೆನ್ಯೂ ಸರ್ವೆ ನಂಬರ್ 121ಬ, ಪ್ಲಾಟ್ ನಂ.71ರ ಗಡಿ
ರೆವೆನ್ಯೂ ಸರ್ವೆ ನಂಬರ್	: 121ಬ, ಪ್ಲಾಟ್ ನಂ.80
ಕ್ಷೇತ್ರ	: 0–01–13.5

ವಿಕ್ರಿ ಕಿಮ್ಮತ್ತು ಅಂತೂ ರೂ.1,80,000/– (ರೂ. ಒಂದು ಲಕ್ಷ ಎಂಭತ್ತು ಸಾವಿರ ಮಾತ್ರ)

ಮಾರಾಟದ ದಿನಾಂಕ:03.09.2009

ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ಇಂದು ದಿನಾಂಕ:11.01.2010 ರಂದು ಕೊಡಲ್ಪಟ್ಟಿತು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ
ಸ್ಥಳ: ಶಿರಸಿ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ (ಉ.ಕ.)

ಯಥಾನಕಲು:

ಇದರ ಯಥಾ ನಕಲುಗಳನ್ನು ಅಭಿನಂದನೆಗಳೊಂದಿಗೆ (1) ಹಿರಿಯ ಉಪನೋಂದಣಾಧಿಕಾರಿಗಳು, ಶಿರಸಿ ರವರಿಗೆ ಹಾಗೂ (2) ಮಾನ್ಯ ತಹಸೀಲ್ದಾರರು ಶಿರಸಿ ತಾಲ್ಲೂಕು, ಶಿರಿಸಿ ರವರಿಗೆ ವಿಕ್ರಿ ಪ್ರಮಾಣ ಪತ್ರದಲ್ಲಿ ನಮೂದಿಸಿದ ಸ್ಥಿರಾಸ್ತಿಗಳ ಕುರಿತು ಸಂಬಂಧಿಸಿದ ದಾಖಲೆಗಳಲ್ಲಿ ಅವಶ್ಯಕ ಬದಲಾವಣೆ ಆಗುವಂತೆ ವ್ಯವಸ್ಥೆ ಮಾಡುವ ಬಗ್ಗೆ ಕೋರಿದೆ.

ಸ್ಥಳ: ಶಿರಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ
ದಿನಾಂಕ:11.01.2010 ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ (ಉ.ಕ.)

ಸಹಕಾರ ಇಲಾಖೆ

ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ, ಉಪವಿಭಾಗ, ಶಿರಸಿ ಇವರ ನ್ಯಾಯಾಲಯದಲ್ಲಿ

ಫಾರ್ಮ್ ನಂ.11

38ನೇ ಯ ರೂಲಿನ (7) ಕಲಂ

ಸ್ಥಿರ ಸ್ವತ್ತುಗಳನ್ನು ಕೊಂಡದ್ದಕ್ಕೆ ಪ್ರಕಟಣೆ

ದಾವಾ ಸಂಖ್ಯೆ: ಜೆಆರ್‌ಡಿ/ಯುಬಿಎಫ್/ಪ್ರಾ.ಹುಬ್ಬಳ್ಳಿ/1651/2005–06

ಅಮಲ್ಜಾರಿ ಸಂಖ್ಯೆ: ಎಆರ್‌ಇ/ ಯುಬಿಎಫ್/ಆರ್.ಓ./1359/2005–06

ಎಆರ್‌ಇ/ಯುಬಿಎಫ್/ಆರ್.ಓ./829/2006–07(ವ)

(ವ) 376/2006–07

ಉತ್ತರ ಕನ್ನಡ ಜಿಲ್ಲಾ, ಶಿರಸಿ ತಾಲ್ಲೂಕು, ಶಿರಸಿ ಗ್ರಾಮದ ನಿವಾಸಿ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ಈ ಕೆಳಗೆ ತೋರಿಸಿದ ಶ್ರೀ ಶ್ರೀಪಾದ ದೇವರು ಹೆಗಡೆ, ಆಲಮನೆ, ಕಾನಗೋಡ, ತಾಲ್ಲೂಕು: ಶಿರಸಿ ಇವರಿಗೆ ಸೇರಿದ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಯನ್ನು ಬಹಿರಂಗ ಹರಾಜಿನಲ್ಲಿ 2009ನೇ ಇಸವಿ ಸೆಪ್ಟೆಂಬರ್, ತಿಂಗಳ 03ನೇ ತಾರೀಖಿನಂದು ಕ್ರಯಕ್ಕೆ ಕೊಂಡಿರುತ್ತಾರಾಗಿಯೂ ಮತ್ತು ದರಖಾಸ್ತು ರಖಂ ರೂ.1,80,000/– (ರೂಪಾಯಿ ಒಂದು ಲಕ್ಷ ಎಂಭತ್ತು ಸಾವಿರ ಮಾತ್ರ) ವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದರಾಗಿಯೂ ಈ ಮೂಲಕ ಎಲ್ಲಾ ಜನರಿಗೆ ಬಹಿರಂಗವಾಗಿ ತಿಳಿಸೋಣವಾಗುತ್ತದೆ. ಆದ ಪ್ರಯುಕ್ತ ಸದರಿ ಸ್ಥಿರಾಸ್ತಿಯಲ್ಲಿರುವ ತೀರ್ಪು ಬಾಕಿದಾರ ಶ್ರೀ ಶ್ರೀಪಾದ ದೇವರು, ಹೆಗಡೆ, ಆಲಮನೆ, ಕಾನಗೋಡ, ತಾಲ್ಲೂಕು: ಶಿರಸಿ ಇವರ ಸದರಿ ಹಕ್ಕು ವ ಪ್ರಯೋಜನಗಳಿಗೆ ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ, ಕೆ.ಎಚ್.ಬಿ. ಕಾಲೋನಿ, ಶಿರಸಿ ಇವರು ಉತ್ತರಾಧಿಕಾರಿಗಳಾಗಿದ್ದಾರೆ, ಎಂಬುದಾಗಿ ಈ ಮೂಲಕ ದೃಢಪಡಿಸೋಣವಾಗುತ್ತದೆ.

ತಾಲ್ಲೂಕು	**ಗ್ರಾಮ**	**ರೆವೆನ್ಯೂ ಸರ್ವೆ ನಂಬರ್**	**ಕ್ಷೇತ್ರ**	**ಖಾತೆದಾರನ ಹೆಸರು**
ಶಿರಸಿ	ಪುಟ್ಟನಮನೆ	121 ಬ ಪ್ಲಾಟ ನಂ.80	0–01–13.5	ಶ್ರೀ ಶ್ಯಾಮಸುಂದರ ಚಿದಂಬರ ಹೆಗಡೆ

ಸ್ಥಳ: ಶಿರಸಿ

ದಿನಾಂಕ:11.01.2010

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ.

ಮಾನ್ಯ ತಹಸೀಲ್ದಾರ ಶಿರಸಿ ರವರಿಗೆ,

ಮಾರಾಟ ಮಾಡಲ್ಪಟ್ಟ ಸ್ಥಿರಾಸ್ತಿಯನ್ನು, ಸ್ಥಿರಾಸ್ತಿ ಇರುವ ಗ್ರಾಮದಲ್ಲಿಯೂ, ಜಿಲ್ಲಾ ಗೆಜೆಟ್‌ನಲ್ಲಿಯೂ ಈ ಇಸ್ತಿಹಾರವನ್ನು ಪ್ರಕಟಿಸಲು ಕೋರಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಶಿರಸಿ ಉಪವಿಭಾಗ, ಶಿರಸಿ.

ಪಿ.ಆರ್.123

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಅಭಿಯಂತರರು(ವಿ), ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ. ಗುಲ್ಬರ್ಗಾ

ಪ್ರಕಟಣೆ

ಸಂಖ್ಯೆ: ಎಲ್‌ಸಿ610/ಕಾನಿಅ(ವಿ)/ಬೃಕಾವಿ/ಗು/ಸಕಾನಿಅ(ವಿ)/2008–09/2972–74, ದಿನಾಂಕ:19ನೇ ಜನವರಿ, 2010

ಕ.ವಿ.ಪ್ರ.ನಿ.ನಿ.ಯು 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಪ್ರಕರಣದ 67ರ ಅನ್ವಯ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಯಮದ ಪ್ರಕರಣದ 67(2)(ಸಿ) ರ ಅನ್ವಯ ಈ ಮೂಲಕ ಯೋಜನೆಗಳನ್ನು ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ರೀತಿ ಇವೆ.

1) ಯೋಜನೆಯ ಹೆಸರು: ಔರಾದ ತಾ: ಡೊಂಗ್ರಗಾಂವ ಕ್ರಾಸದಲ್ಲಿ 110/33–11 ಕೆ.ವ್ಹಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಮತ್ತು 110 ಕೆ.ವ್ಹಿ. ಸಿಂಗಲ್ ಮಾರ್ಗ, ಡಬಲ್ ಮಾರ್ಗ ಗೋಪುರಗಳ ಮೇಲೆ ಲಿಂಕ್ಸ್ ಕಂಡಕ್ಟರ್ ಉಪಯೋಗಿಸಿ ವಿದ್ಯುತ್ ಮಾರ್ಗ 18.895 ಕಿ.ಮೀ.ಗಳ ದೂರ 110/33–11ಕೆ.ವ್ಹಿ. ಸಂತಪುರ ಕೇಂದ್ರದಿಂದ ಉದ್ದೇಶಿಸಿ 110/33–11 ಕೆ.ವ್ಹಿ. ಉಪಕೇಂದ್ರಕ್ಕೆ ಮಾರ್ಗ ನಿರ್ಮಿಸುವುದು.

2) ಯೋಜನೆಯ ಪ್ರಮುಖ ಲಕ್ಷಣಗಳು: ಔರಾದ ತಾ: ಡೊಂಗ್ರಗಾಂವ ಹೋಬಳಿ ಹಾಗೂ ಅಕ್ಕ–ಪಕ್ಕದ ಗ್ರಾಮಗಳಿಗೆ ಒಳ್ಳೆಯ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು ಹಾಗೂ ಹೆಚ್ಚುವರಿ ವಿದ್ಯುತ್ ಹೊರೆಯನ್ನು 110/33–11 ಕೆ.ವ್ಹಿ. ಸಂತಪುರ ಕೇಂದ್ರದ ಮೇಲೆ ಕಡಿಮೆ ಮಾಡುವುದು.

3) 110 ಕೆ.ವಿ. ಮಾರ್ಗ ಹಾದು ಹೋಗುವ ಹಳ್ಳಿಗಳು ಮತ್ತು ಪ್ರದೇಶಗಳು: ಸಂತಪುರ, ಚಟನಳತಾಂಡಾ, ಮಸಕಲತಾಂಡಾ, ಮನಕಲ, ಕಪಿಕೇರಿ, ರಾಮಚಂದ್ರತಾಂಡಾ, ಮುಗನಾಳ, ಬೊರಾಳ, ಕಿಡಿಕೇರಿತಾಂಡಾ, ಜಮಲಪುರ, ವಾಡಿಬಸವಣ್ಣತಾಂಡಾ, ಗಣೇಶಪುರ, ಏಕೆಂಬಾ, ಕರಕ್ಯಳ ಹಾಗೂ ಡೊಂಗ್ರಾಗಾಂವ.

4) ಅಂದಾಜು ವೆಚ್ಚ: ರೂ.1052.00 ಲಕ್ಷಣಗಳು.

5) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ (III)ರ (ಕೇಂದ್ರಿಯ ಕಾಯಿದೆ 1885ರ 13) ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ನಿಗಮದ ಗಮನಕ್ಕೆ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗೆ ಈ ಕೆಳ ಸಹಿದಾರರ ಕಛೇರಿಗೆ ಕಳುಹಿಸಬಹುದು.

ಕಾರ್ಯನಿರ್ವಾಹಕ ಅಭಿಯಂತರರು(ವಿ),
ಪಿಡಿ.29 ಬೃ.ಕಾ.ವಿಭಾಗ, ಕ.ವಿ.ಪ್ರ.ನಿ.ನಿ. ಗುಲ್ಬರ್ಗಾ.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/586/ಡಿಟಿಸಿಆರ್/1999–2000 ದಿನಾಂಕ:22ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಸಂಪ್ಯ,
ಪುತ್ತೂರು.

ಆರೋಪಿಗಳು:

1) ಹರೀಶ್, ಬಿನ್: ರತ್ನ ಪೂಜಾರಿ, ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲ್ಲೂಕು.
2) ಶ್ರೀನಿವಾಸ, ಬಿನ್:ವೆಂಕಪ್ಪ ಪೂಜಾರಿ ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲೂಕು.

ವಾಹನ ಮಾಲೀಕರು:

ಶ್ರೀ.ಸ್ಟ್ಯಾನಿ ಥೋಮಸ್,
ಬಿನ್: ಅಬ್ರಹಾಂ ಥೋಮಸ್, ಪರೆಕಳ ಹೌಸ್, ರೇಖ್ಯಾ ಪೋಸ್ಟ್, ಬೆಳ್ತಂಗಡಿ ತಾಲೂಕು ಇವರ ಜಿ.ಪಿ.ಎ.ದಾರರಾದ ಶ್ರೀ.ಪಿ.ಸುರೇಶ್ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ಪೆರಾಜೆ ವಿಲೇಜ್, ನೇರಳಕಟ್ಟೆ, ಬಂಟ್ವಾಳ ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28–05–2000 ರಂದು ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ಅಜಲಡ್ಕ ಎಂಬಲ್ಲಿ ಪುತ್ತೂರು ಕಡೆಯಿಂದ ಪಾಣಾಜೆ ಕಡೆಗೆ ಪಲ್ಲಡ್ಕ ದೇವಸ್ಯ ರಸ್ತೆಯಿಂದಾಗಿ ಕಾರು ಒಂದರಲ್ಲಿ ಕೇರಳ ರಾಜ್ಯಕ್ಕೆ ಅಕ್ರಮ ಮದ್ಯ ಸಾಗಾಟ ಮಾಡುತ್ತಿದ್ದಾರೆಂದು ದೊರೆತ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಪಂಚರನ್ನು ಕೂಡಿಕೊಂಡು ತಮ್ಮ ಇಲಾಖಾ ಜೀಪಿನೊಂದಿಗೆ ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ಉಪ್ಪಳಿಗೆ ಎಂಬಲ್ಲಿ ಪುತ್ತೂರು ಪಾಣಾಜೆ ಸಾರ್ವಜನಿಕ ರಸ್ತೆಯ ಬದಿಯಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ಪುತ್ತೂರು ಕಡೆಯಿಂದ ಒಂದು ಬಿಳಿ ಬಣ್ಣದ ಅಂಬಾಸಿಡರ್ ಕಾರು ಸಂಖ್ಯೆ:ಕೆಎ–21–1426 ಬರುವುದನ್ನು ಕಂಡ ಸಿಬ್ಬಂದಿಯವರು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ಕಾರಿನ ಚಾಲಕ ಸಿಬ್ಬಂದಿಯವರು ಕೊಟ್ಟ ಸೂಚನೆಯನ್ನು ಉಲ್ಲಂಘಿಸಿ ಅತೀ ವೇಗವಾಗಿ ಪಾಣಾಜೆ ಕಡೆಗೆ ಚಲಾಯಿಸಿ ಉಪ್ಪಳಿಗೆಯಿಂದ ಅಜಲಡ್ಕ ರಸ್ತೆಗೆ ಕಾರನ್ನು ಚಲಾಯಿಸಿಕೊಂಡು ಹೋದನು. ತದನಂತರ ಫಿರ್ಯಾದುದಾರರು ಹಾಗೂ ಸಿಬ್ಬಂದಿಯವರು ತಮ್ಮ ಇಲಾಖಾ ಜೀಪಿನಲ್ಲಿ ಸದರಿ ಕಾರನ್ನು ಬೆನ್ನಟ್ಟಿ ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ಅಜಲಡ್ಕ ಎಂಬಲ್ಲಿ ಕಾರನ್ನು ಓವರ್‌ಟೇಕ್ ಮಾಡಿ ತಡೆದು ನಿಲ್ಲಿಸಿದಾಗ, ಕಾರಿನಲ್ಲಿದ್ದ ಚಾಲಕ ಹಾಗೂ ಇನ್ನೊಬ್ಬ ಕಾರಿನಿಂದ ಇಳಿದು ಹತ್ತಿರದ ಗುಡ್ಡದ ಕಡೆಗೆ ಓಡಿದಾಗ, ಅವರನ್ನು ಬೆನ್ನಟ್ಟಿ ಹಿಡಿದು ಆತನ ಹೆಸರು ಮತ್ತು ವಿಳಾಸವನ್ನು ಕೇಳಿದಾಗ ಹರೀಶ್, ಬಿನ್: ರತ್ನ ಪೂಜಾರಿ, ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲೂಕು ಮತ್ತು ಪರಾರಿಯಾದ ಚಾಲಕನ ಹೆಸರು ಶ್ರೀನಿವಾಸ, ಬಿನ್:ವೆಂಕಪ್ಪ ಪೂಜಾರಿ ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲೂಕು ಎಂದು ತಿಳಿಸಿದನು. ಸದರಿ ಕಾರನ್ನು ಪರಿಶೀಲಿಸಿದಾಗ, ಸದರಿ ಕಾರಿನ ಹಿಂದಿನ ಬಾಗಿಲನ್ನು ಪಂಚರ ಸಮಕ್ಷಮ ತೆರೆದು ನೋಡಿದಾಗ, ಕಾರಿನ ಹಿಂದಿನ ಸೀಟಿನಲ್ಲಿ ಮತ್ತು ಡಿಕ್ಕಿಯಲ್ಲಿ ಮದ್ಯ ತುಂಬಿರುವ ರಟ್ಟಿನ ಪೆಟ್ಟಿಗೆಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ಪ್ರಶ್ನಿಸಿದಾಗ, ಈ ಬಗ್ಗೆ ಹರೀಶ್‌ರವರಲ್ಲಿ ಮದ್ಯಕ್ಕೆ ಸಂಬಂಧಪಟ್ಟ ದಾಖಲಾತಿ ಇದೆ ಎಂದು ಹಾಗೂ ಸದರಿ ಮದ್ಯವನ್ನು ಅಕ್ರಮವಾಗಿ ಕರ್ನಾಟಕದಿಂದ ಕೇರಳಕ್ಕೆ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಆದುದರಿಂದ ಇದು ಅಕ್ರಮ ಮದ್ಯವೆಂದು ಖಚಿತಪಡಿಸಿಕೊಂಡು ಸದರಿ ಮದ್ಯವನ್ನು ಪರಿಶೀಲಿಸಿದಾಗ, 750 ಎಂ.ಎಲ್.ನ 12 ಸೀಸೆಗಳಂತೆ ಒಟ್ಟು 14 ಪೆಟ್ಟಿಗೆಗಳು, 375 ಎಂ.ಎಲ್.ನ 24 ಸೀಸೆಗಳಂತೆ ಒಟ್ಟು 14 ಪೆಟ್ಟಿಗೆಗಳು ಮತ್ತು 180 ಎಂ.ಎಲ್.ನ 48 ಸೀಸೆಗಳಂತೆ ಒಟ್ಟು 5 ಪೆಟ್ಟಿಗೆಗಳಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲನ್ನು ಅಂಟಿಸಿರುತ್ತಾರೆ. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ 750 ಎಂ.ಎಲ್.ನ ಒಂದು, 375 ಎಂ.ಎಲ್.ನ ಒಂದು ಮತ್ತು 180 ಎಂ.ಎಲ್.ನ ಒಂದು, ಒಟ್ಟು 3 ಮದ್ಯದ ಬಾಟಲ್‌ಗಳನ್ನು ತೆಗೆದು, ಅದರ ಮುಚ್ಚಳಕ್ಕೆ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಎಸ್.ಹೆಚ್.ಓ. ಅರಗು ಸೀಲ್ ಮಾಡಿ, ಪಂಚರು ಸಹಿ

ಮಾಡಿರುವ ಚೀಟಿಯನ್ನು ಅಂಟಿಸಿ ಹಾಗೂ ಕ್ರಮ ಸಂಖ್ಯೆಯನ್ನು ಗುರುತು ಮಾಡಲಾಯಿತು. ನಂತರ ಸದರಿ ಕಾರನ್ನು ಪರಿಶೀಲಿಸಿದಾಗ, ಇದು ಅಂಬಾಸಿಡರ್ ಕಾರು ಆಗಿದ್ದು, ಇದರ ನೋಂದಣಿ ಸಂ: ಕೆಎ–21–1426 ಟೂರಿಸ್ಟ್ ಟ್ಯಾಕ್ಸಿಯಾಗಿದ್ದು, ಇದರಲ್ಲಿ ವಾಹನಕ್ಕೆ ಸಂಬಂಧಪಟ್ಟ ಆರ್.ಸಿ. ಪುಸ್ತಕ ದೊರೆತ್ತಿದ್ದು, ಆರ್.ಸಿ. ಪುಸ್ತಕಕ್ಕೆ ಅನುಗುಣವಾಗಿ ವಾಹನದ ಮಾಲೀಕ ಶ್ರೀ.ಸ್ಟ್ಯಾನಿ ಥೋಮಸ್, ಬಿನ್: ಅಬ್ರಹಾಂ ಥೋಮಸ್, ಪರೆಕಳ ಹೌಸ್, ರೇಖ್ಯಾ ಪೋಸ್ಟ್, ಬೆಳ್ತಂಗಡಿ ತಾಲೂಕು ಆಗಿರುತ್ತದೆ. ಇದು ಅಕ್ರಮ ಮದ್ಯ ಸಾಗಾಟವಾಗಿರುವುದರಿಂದ, ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಅಕ್ರಮ ಮದ್ಯ ಹಾಗೂ ಅದರ ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು ಹಾಗೂ ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಅಧಿನಿಯಮ ಕಲಂ 32(1), 34, 43ಎ ರೀತ್ಯಾ ಅಪರಾದ ಹಾಗೂ ಶಿಕ್ಷರ್ಹವಾಗಿರುವುದರಿಂದ, ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ: 29/2000 ದಿ:28–5–2000 ರಂತೆ ಪ್ರಕರಣವನ್ನು ನೋಂದಾಯಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಪ್ರಾಧಿಕಾರದ ಆದೇಶಾನುಸಾರ ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ಉಪ ವಲಯ, ಪುತ್ತೂರು ಇವರಿಗೆ ತಕ್ಷೀರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ ಸೊತ್ತುಗಳನ್ನು ಹಸ್ತಾಂತರಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರಿಸಿದ ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ಉಪ ವಲಯ, ಪುತ್ತೂರು ಇವರ ತನಿಖಾ ವರದಿ ಸಂ: ಸಿಆರ್.ನಂ.44/2000 ದಿ:10–10–2000 ರ ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಸದರಿ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಮಾದರಿ ಬಾಟಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಸಹಾಯಕ ರಾಸಾಯನಿಕ ವಿಶ್ಲೇಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ವರದಿ ಸಂ: ಇ–952–3/2000–01 ದಿ: 5–8–2000 ರಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42.80% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವು ರಾಸಾಯನಿಕ ವಿಶ್ಲೇಷಕರ ವರದಿಯ ಪ್ರಕಾರ ಮಾನವನ ಸೇವನೆಗೆ ಯೋಗ್ಯವಾಗಿದೆ ಎಂದು ದೃಢೀಕರಣ ಪತ್ರ ನೀಡಿರುವುದರಿಂದ, ಸದರಿ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರುರವರ ಮುಟ್ಟುಗೋಲು ಆದೇಶ ಸಂಖ್ಯೆ: ಎಸ್‌ಡಿಕೆ/586/ಡಿಟಿಸಿಆರ್/1999–2000 ದಿ:27–10–2000 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ 295–200 ಲೀಟರ್ ಒರಿಜಿನಲ್ ಚಾಯ್ಸ್ ವಿಸ್ಕಿ ಮದ್ಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಸ್ಯಾಂಪಲ್‌ಗಳನ್ನು ಹೊರತುಪಡಿಸಿ, ಉಳಿದ 285–200 ಲೀಟರ್ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ಸಮಕ್ಷಮ ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಆದೇಶಿಸಿರುತ್ತಾರೆ. ಸದರಿ ಆದೇಶದಂತೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ಪತ್ರ ಸಂಖ್ಯೆ ದಿ:13–11–2000 ರಂದು ಮೊಕದ್ದಮೆಗೆ ಸಂಬಂಧಪಟ್ಟ ಮದ್ಯವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಿ, ಈ ಪ್ರಾಧಿಕಾರದ ಸ್ಥಿರೀಕರಣ ಆದೇಶ ದಿ:6–12–2000 ರಂತೆ ಹರಾಜಿನಲ್ಲಿ ಬಂದ ಮದ್ಯದ ಮೌಲ್ಯವನ್ನು ಸರಕಾರಕ್ಕೆ ಜಮೆ ಮಾಡಿರುತ್ತಾರೆ.

ವಾಹನದ ನೋಂದಣಿ ಮಾಲೀಕರಾದ ಶ್ರೀ.ಸ್ಟ್ಯಾನಿ ಥೋಮಸ್, ಬಿನ್: ಅಬ್ರಹಾಂ ಥೋಮಸ್, ಪರೆಕಳ ಹೌಸ್, ರೇಖ್ಯಾ ಪೋಸ್ಟ್, ಬೆಳ್ತಂಗಡಿ ತಾಲೂಕು ಇವರ ಜಿ.ಪಿ.ಎ.ದಾರರಾದ ಶ್ರೀ.ಪಿ.ಸುರೇಶ್ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ಪೆರಾಜೆ ವಿಲೇಜ್, ನೇರಳಕಟ್ಟೆ, ಬಂಟ್ವಾಳ ತಾಲೂಕು ಇವರು ತನ್ನ ವಕೀಲರ ಮೂಲಕ ದಿ:12–6–2000 ರಂದು ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರುರವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ/586/ಡಿಟಿಸಿಆರ್ /1999–2000 ದಿ:27–7–2000 ರ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಕೋರಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ಸದರಿ ಆದೇಶದಿಂದ ಭಾದಿತರಾದ ಅರ್ಜಿದಾರರು ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸೆಷನ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ಸಂಖ್ಯೆ: 123/2000 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಇ ಪ್ರಕಾರ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ಮೂರನೇ ಹೆಚ್ಚುವರಿ ನ್ಯಾಯಾಧೀಶರು ಸದರಿ ಮೇಲ್ಮನವಿಯನ್ನು ದಿ:8–8–2000 ರಂದು ಎತ್ತಿಹಿಡಿದು, ಈ ಪ್ರಾದಿಕಾರವು ದಿ:27–7–2000 ರಂದು ನೀಡಿರುವ ಆದೇಶವನ್ನು ತಳ್ಳಿ ಹಾಕಿ ಅಧಿಕೃತ ಅಧಿಕಾರಿಯವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಅಂಬಾಸಿಡರ್ ಕಾರನ್ನು ಅರ್ಜಿದಾರರು ರೂ.1,00,000/– ಮೌಲ್ಯದ ಇಂಡೆಮ್ನಿಟಿ ಬಾಂಡ್ ಹಾಗೂ ಇಬ್ಬರ ಸಾಲ್ವೆಂಟ್ ಶ್ಯೂರಿಟಿಯನ್ನು ಮತ್ತು ಕೆಲವು ಷರತ್ತುಗಳಿಗೆ ಬದ್ದರಾದಲ್ಲಿ, ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ಅರ್ಜಿದಾರರು ಮಾನ್ಯ ಸತ್ರ ನ್ಯಾಯಾಲಯದ ಆದೇಶದ ಪ್ರಕಾರ ಈ ಪ್ರಾಧಿಕಾರಕ್ಕೆ ರೂ.1,00,000/– ಮೌಲ್ಯದ ಇಂಡೆಮ್ನಿಟಿ ಬಾಂಡ್ ಹಾಗೂ ಇಬ್ಬರು ಸಾಲ್ವೆಂಟ್ ಶ್ಯೂರಿಟಿಯನ್ನು ಸಲ್ಲಿಸಿರುವುದರಿಂದ, ತಕ್ಷೀರಿನಲ್ಲಿ ಅಂಬಾಸಿಡರ್ ಕಾರನ್ನು ಅರ್ಜಿದಾರರ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ದಿ:24–8–2000 ರಂದು ಆದೇಶ ನೀಡಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದರಿಂದ, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 28–05–2000 ರಂದು ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ನಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ.ಎನ್.ನಾರ್ಣಪ್ಪ ನಾಯ್ಕ್, ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ದಿ:22–12–2004 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ದಿ: 19–2–2000 ರಿಂದ ದಿ:16–7–2003 ರವರೆಗೆ ಪುತ್ತೂರು ಉಪ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು, ತಕ್ಷೀರಿಗೆ ಸಂಬಂಧಪಟ್ಟ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಪೊಲೀಸ್ ಉಪ ನಿರೀಕ್ಷಕರಿಂದ ಹಸ್ತಾಂತರ ಪಡೆದುಕೊಂಡಿರುತ್ತೇನೆ. ಮದ್ಯದಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ತನ್ನ ರಕ್ಷಕರ ಮೂಲಕ ದಿ:29–5–2000 ರಂದು ಕಳುಹಿಸಿರುತ್ತೇನೆ. ರಾಸಾಯನಿಕ ವಿಶ್ಲೇಷಣೆ ವರದಿಯನ್ನು ದಿ:7–8–2000 ರಂದು ಪಡೆದುಕೊಂಡಿರುತ್ತೇನೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ಇದರ ಮಾಲಿಕತ್ವವನ್ನು ತಿಳಿದುಕೊಳ್ಳಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ದಿ:17–8–2000 ರಂದು ಪತ್ರ ಬರೆದಿದ್ದು, ಅವರಿಂದ ದಿ:28–8–2000 ರಂದು ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಈ ಪ್ರಾಧಿಕಾರದ ಆದೇಶಾನುಸಾರ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕವಾಗಿ ಅವರ ಜಿ.ಪಿ.ಎ.ದಾರರಾದ ಸುರೇಶ್ ಪೂಜಾರಿರವರಿಗೆ ದಿ:29–8–2000 ರಂದು ಬಿಡುಗಡೆಗೊಳಿಸಿರುತ್ತೇನೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಈ ಪ್ರಾಧಿಕಾರದ ಅನುಸಾರ ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಿರುತ್ತೇನೆ. ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಗಳ ಜೊತೆಗೆ ವಾಹನ ಮಾಲಿಕರನ್ನು ಸೇರಿಸಿ, ತನಿಖೆಯನ್ನು ಮುಗಿಸಿ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–1 ಎಂದು, ಮಹಜರನ್ನು ನಿಶಾನೆ ಪಿ–2 ಎಂದು, ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ–3 ಎಂದು ಹಾಗೂ ತನಿಖಾ ವರದಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಸಂಬಂಧಿಸಿ ಉತ್ತರಿಸುತ್ತಾ, ವಾಹನ ಮಾಲೀಕರು ಈ ತಕ್ಷೀರಿನಲ್ಲಿ ಭಾಗಿಯಾಗಿದ್ದಾರೆಂದು ಯಾವುದೇ ಆಧಾರಗಳು ಇಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ತನಿಖಾಧಿಕಾರಿಯವರು ಸಲ್ಲಿಸಿದ ಹೇಳಿಕೆಗಳು ತಾವು ದಾಖಲಿಸಿದ ತಕ್ಷೀರಿಗೆ ಒಂದಕ್ಕೊಂದು ತಾಳೆಯಾಗಿದ್ದು, ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 2

ಶ್ರೀ.ಟಿ.ಬಿ.ರಾಜಣ್ಣ, ಪೊಲೀಸ್ ನಿರೀಕ್ಷಕರು, ಸರಸ್ವತಿಪುರಂ ಪೊಲೀಸ್ ಠಾಣೆ, ಮೈಸೂರು ಇವರು ಪ್ರಕರಣದ ಫಿರಾದುದಾರರಾಗಿದ್ದು, ಇವರು 2000 ನೇ ಸಾಲಿನಲ್ಲಿ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ತಾನು ದಿ:28–05–2000 ರಂದು ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ಅಜಲಡ್ಕ ಎಂಬಲ್ಲಿ ಪುತ್ತೂರು ಕಡೆಯಿಂದ ಪಾಣಾಜೆ ಕಡೆಗೆ ಪಲ್ಲಡ್ಕ ದೇವಸ್ಯ ರಸ್ತೆಯಿಂದಾಗಿ ಕಾರು ಒಂದರಲ್ಲಿ ಕೇರಳ ರಾಜ್ಯಕ್ಕೆ ಅಕ್ರಮ ಮದ್ಯ ಸಾಗಾಟ ಮಾಡುತ್ತಿದ್ದಾರೆಂದು ದೊರೆತ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಪಂಚರನ್ನು ಕೂಡಿಕೊಂಡು ತಮ್ಮ ಇಲಾಖಾ ಜೀಪಿನೊಂದಿಗೆ ಪುತ್ತೂರು ತಾಲೂಕು ಒಳಮೊಗು ಗ್ರಾಮದ ಉಪ್ಪಳಿಗೆ ಎಂಬಲ್ಲಿ ಪುತ್ತೂರು ಪಾಣಾಜೆ ಸಾರ್ವಜನಿಕ ರಸ್ತೆಯ ಬದಿಯಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ಪುತ್ತೂರು ಕಡೆಯಿಂದ ಒಂದು ಬಿಳಿ ಬಣ್ಣದ ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ಬರುವುದನ್ನು ಕಂಡ ಸಿಬ್ಬಂದಿಯವರು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ಕಾರಿನ ಚಾಲಕ ಸಿಬ್ಬಂದಿಯವರು ಕೊಟ್ಟ ಸೂಚನೆಯನ್ನು ಉಲ್ಲಂಘಿಸಿ ಅತೀ ವೇಗವಾಗಿ ಪಾಣಾಜೆ ಕಡೆಗೆ ಚಲಾಯಿಸಿ ಉಪ್ಪಳಿಗೆಯಿಂದ ಅಜಲಡ್ಕ ರಸ್ತೆಗೆ ಕಾರನ್ನು ಚಲಾಯಿಸಿಕೊಂಡು ಹೋದನು. ತದನಂತರ ಫಿರ್ಯಾದುದಾರರು ಹಾಗೂ ಸಿಬ್ಬಂದಿಯವರು ತಮ್ಮ ಇಲಾಖಾ ಜೀಪಿನಲ್ಲಿ ಸದರಿ ಕಾರನ್ನು ಬೆನ್ನಟ್ಟಿ ಪುತ್ತೂರು ತಾಲೂಕು ಒಳಮೊಗ್ರು ಗ್ರಾಮದ ಅಜಲಡ್ಕ ಎಂಬಲ್ಲಿ ಕಾರನ್ನು ಓವರ್‌ಟೇಕ್ ಮಾಡಿ ತಡೆದು ನಿಲ್ಲಿಸಿದಾಗ, ಕಾರಿನಲ್ಲಿದ್ದ ಚಾಲಕ ಹಾಗೂ ಇನ್ನೊಬ್ಬ ಕಾರಿನಿಂದ ಇಳಿದು ಹತ್ತಿರದ ಗುಡ್ಡದ ಕಡೆಗೆ ಓಡಿದಾಗ, ಅವರನ್ನು ಬೆನ್ನಟ್ಟಿ ವಿಚಾರಿಸಿದಾಗ, ಆತನ ಹೆಸರು ಮತ್ತು ವಿಳಾಸವನ್ನು ಕೇಳಿದಾಗ ಹರೀಶ್, ಬಿನ್: ರತ್ನ ಪೂಜಾರಿ, ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲೂಕು ಮತ್ತು ಪರಾರಿಯಾದ ಚಾಲಕನ ಹೆಸರು ಶ್ರೀನಿವಾಸ, ಬಿನ್:ವೆಂಕಪ್ಪ ಪೂಜಾರಿ ಪೆರಾಜೆ ಮನೆ, ಪೆರಾಜೆ ಗ್ರಾಮ, ನೇರಳಕಟ್ಟೆ, ಬಂಟ್ವಾಳ ತಾಲೂಕು ಎಂದು ತಿಳಿಸಿದನು. ನಂತರ ಸದರಿ ಕಾರಿನ ಹಿಂದಿನ ಬಾಗಿಲನ್ನು ಪಂಚರ ಸಮಕ್ಷಮ ತೆರೆದು ನೋಡಿದಾಗ, ಕಾರಿನ ಹಿಂದಿನ ಸೀಟಿನಲ್ಲಿ ಮತ್ತು ಡಿಕ್ಕಿಯಲ್ಲಿ ಮದ್ಯ ತುಂಬಿರುವ ರಟ್ಟಿನ ಪೆಟ್ಟಿಗೆಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ಪ್ರಶ್ನಿಸಿದಾಗ, ಈ ಬಗ್ಗೆ ಹರೀಶ್‌ರವರಲ್ಲಿ ಮದ್ಯಕ್ಕೆ ಸಂಬಂಧಪಟ್ಟ ದಾಖಲಾತಿ ಇದೆಯೇ ಎಂದು ಹಾಗೂ ಸದರಿ ಮದ್ಯವನ್ನು ಅಕ್ರಮವಾಗಿ ಕರ್ನಾಟಕದಿಂದ ಕೇರಳಕ್ಕೆ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಆದುದರಿಂದ ಇದು ಅಕ್ರಮ ಮದ್ಯವೆಂದು ಖಚಿತಪಡಿಸಿಕೊಂಡು ಸದರಿ ಮದ್ಯವನ್ನು ಪರಿಶೀಲಿಸಿದಾಗ, 750 ಎಂ.ಎಲ್.ನ 12 ಸೀಸೆಗಳಂತೆ ಒಟ್ಟು 14

ಪೆಟ್ಟಿಗೆಗಳು, 375 ಎಂ.ಎಲ್.ನ 24 ಸೀಸೆಗಳಂತೆ ಒಟ್ಟು 14 ಪೆಟ್ಟಿಗೆಗಳು ಮತ್ತು 180 ಎಂ.ಎಲ್.ನ 48 ಸೀಸೆಗಳಂತೆ ಒಟ್ಟು 5 ಪೆಟ್ಟಿಗೆಗಳಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲನ್ನು ಅಂಟಿಸಿರುತ್ತಾರೆ. ಸದರಿ ಮದ್ಯದ ಬಾಟಲ್‌ಗಳಿಂದ ಮಾದರಿಗಾಗಿ ತೆಗೆದು, ಅದಕ್ಕೆ ಎಸ್.ಹೆಚ್.ಓ. ಅರಗಿನಿಂದ ಸೀಲ್ ಮಾಡಿ ಪಂಚರ ಸಹಿಯಿರುವ ಚೀಟಿಯನ್ನು ಅಂಟಿಸಲಾಯಿತು. ನಂತರ ಸದರಿ ಕಾರನ್ನು ಪರಿಶೀಲಿಸಿದಾಗ, ಇದು ಅಂಬಾಸಿಡರ್ ಕಾರು ಆಗಿದ್ದು, ಇದರ ನೋಂದಣಿ ಸಂ: ಕೆಎ–21–1426 ಟೂರಿಸ್ಟ್ ಟ್ಯಾಕ್ಸಿಯಾಗಿದ್ದು, ಇದರಲ್ಲಿ ವಾಹನಕ್ಕೆ ಸಂಬಂಧಪಟ್ಟ ಆರ್.ಸಿ. ಪುಸ್ತಕ ದೊರೆತ್ತಿದ್ದು, ಆರ್.ಸಿ. ಪುಸ್ತಕಕ್ಕೆ ಅನುಗುಣವಾಗಿ ವಾಹನದ ಮಾಲೀಕ ಶ್ರೀ.ಸ್ಟ್ಯಾನಿ ಥೋಮಸ್, ಬಿನ್: ಅಬ್ರಹಾಂ ಥೋಮಸ್, ಪರೆಕಳ ಹೌಸ್, ರೇಖ್ಯಾ ಪೋಸ್ಟ್, ಬೆಳ್ತಂಗಡಿ ತಾಲೂಕು ಆಗಿರುತ್ತದೆ. ನಂತರ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಸೊತ್ತುಗಳನ್ನು ಹಾಗೂ ಆರೋಪಿಯನ್ನು ಠಾಣೆಗೆ ತಂದು, ಆರೋಪಿಯ ವಿರುದ್ಧ ತಕ್ಷೀರು ದಾಖಲಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಪ್ರಾಧಿಕಾರದ ಆದೇಶಾನುಸಾರ ಅಬಕಾರಿ ನಿರೀಕ್ಷಕರು ಪುತ್ತೂರು ವಲಯ, ಪುತ್ತೂರು ಇವರಿಗೆ ತಕ್ಷೀರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ ಸೊತ್ತುಗಳನ್ನು ಹಸ್ತಾಂತರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಕರ್ನಾಟಕ ಅಬಕಾರಿ ಕಾಯಿದೆ ಅನುಸಾರ ಸರ್ಚ್ ಮೆಮೊ ತಯಾರಿಸಲಿಲ್ಲ. ಮಹಜರಿಗೆ ಇಬ್ಬರು ಪಂಚರನ್ನು ಸಹಿ ಮಾಡಿರುತ್ತಾರೆ. ಪ್ರತಿಯೊಂದು ಬಾಟ್ಲಿಯಿಂದ ಮಾದರಿಗಾಗಿ ಮದ್ಯವನ್ನು ಪ್ರತ್ಯೇಕಿಸಲಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತಾವು ಠಾಣೆಯಲ್ಲೇ ತಯಾರಿಸಿದ್ದೇವೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಾ.ಸಾ: 3

ಶ್ರೀ.ಗಂಗಾಧರ ಗೌಡ, ಅಬಕಾರಿ ರಕ್ಷಕ, ಪುತ್ತೂರು ಜಾರಿ ಮತ್ತು ತನಿಖೆ, ಪುತ್ತೂರು ಇವರು ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದು, ಇವರು ದಿ:17–10–2007 ರಂದು ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ತಕ್ಷೀರಿಗೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ದಿ: 29–5–2000 ರಂದು ಅಬಕಾರಿ ಉಪ ನಿರೀಕ್ಷಕರಿಂದ ಪಡೆದುಕೊಂಡು ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ. ದಿ: 7–8–2000 ರಂದು ರಾಸಾಯನಿಕ ತಜ್ಞರಿಂದ ಮಾದರಿ ಸೀಸೆಗಳ ವರದಿಯನ್ನು ಅಬಕಾರಿ ಉಪ ನಿರೀಕ್ಷಕರಿಗೆ ತಲುಪಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಾನು ಮದ್ಯದ ಮಾದರಿಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಸಾಕ್ಷಿದಾರರು ನೀಡಿರುವ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಸಂಬಂಧಿಸಿ ಮಹಜರಿಗೆ ಒಂದಕ್ಕೊಂದು ಪೂರಕವಾಗಿದ್ದು, ಅದಲ್ಲದೆ ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಅಕ್ರಮವಾಗಿ ಮದ್ಯ ದಾಸ್ತಾನು ಹೊಂದಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ,ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ಮತ್ತು ಪ್ರತಿರಕ್ಷೆ ಸಾಕ್ಷಿಗಳನ್ನು ಹಾಜರುಪಡಿಸಲು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳನ್ನು ಅರ್ಜಿದಾರರು ಹಾಗೂ ಅವರ ಪರ ವಕೀಲರು ಸ್ವೀಕರಿಸಿದರೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜರಾಗಿರುವುದಿಲ್ಲ. ವಾಹನದ ಮಾಲೀಕರಿಗೆ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತನ್ನ ನಿರಪರಾಧವನ್ನು ಸಾಬೀತುಪಡಿಸಲು ಯಾವುದೇ ಆಸಕ್ತಿ ತೋರಿರುವುದಿಲ್ಲ. ಆದುದರಿಂದ ಅರ್ಜಿದಾರರು ಸಾಕ್ಷ್ಯಾಧಾರಗಳನ್ನು ನೀಡಲು ಹಾಜರಾಗದಿರುವುದನ್ನು ಗಮನಿಸಿದಾಗ, ವಾಹನದ ಮಾಲೀಕರೇ ಸ್ವತ: ಆರೋಪಿಗಳೊಂದಿಗೆ ಕೂಡಿಕೊಂಡು ಅಕ್ರಮ ಮದ್ಯ ಸಾಗಾಟ ಮಾಡಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ ಹಾಗೂ ವಾಹನದ ಮಾಲೀಕರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43 ಬಿ ಪ್ರಕಾರ ನೋಟೀಸನ್ನು ದಿ: 3–4–2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿ, ತನಿಖಾಧಿಕಾರಿಗಳ ಮೂಲಕ ಜಾರಿಗೊಳಿಸಲಾಗಿದ್ದು, ಅದಕ್ಕೆ ಉತ್ತರವನ್ನು ನೀಡಿರುವುದಿಲ್ಲ. ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ವಾಹನವನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ. ಆದುದರಿಂದ ಅವರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/586/ಡಿಟಿಸಿಆರ್/1999–2000 ದಿನಾಂಕ:22ನೇ ಅಕ್ಟೋಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ: 29/2000 ದಿ:28–5–2000 ರಲ್ಲಿ

ಜಪ್ತುಪಡಿಸಿರುವ ವಾಹನ ಅಂಬಾಸಿಡರ್ ಕಾರು ಸಂಖ್ಯೆ: ಕೆಎ–21–1426 ನ್ನು ಈ ಪ್ರಾಧಿಕಾರದ ಆದೇಶದ ಸಂಖ್ಯೆ: ಎಸ್‌ಡಿಕೆ/586/ಡಿಟಿಸಿಆರ್/1999–2000 ದಿ: 24–8–2000 ರಲ್ಲಿ ವಾಹನದ ಆರ್.ಸಿ. ಮಾಲೀಕರಾದ ಶ್ರೀ.ಸ್ಟ್ಯಾನಿ ಥೋಮಸ್, ಬಿನ್: ಅಬ್ರಹಾಂ ಥೋಮಸ್, ಪರೆಕಳ ಹೌಸ್, ರೇಖ್ಯಾ ಪೋಸ್ಟ್, ಬೆಳ್ತಂಗಡಿ ತಾಲೂಕು ಇವರ ಜಿ.ಪಿ.ಎ.ದಾರರಾದ ಶ್ರೀ.ಪಿ.ಸುರೇಶ್ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ಪೆರಾಜೆ ವಿಲೇಜ್, ನೇರಳಕಟ್ಟೆ, ಬಂಟ್ವಾಳ ತಾಲೂಕು ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಆದೇಶವನ್ನು ರದ್ದುಗೊಳಿಸಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ವಾಹನವನ್ನು ಈ ಆದೇಶದ 30 ದಿವಸದೊಳಗೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ಕಚೇರಿಯಲ್ಲಿ ಹಾಜರುಪಡಿಸಲು ಆದೇಶಿಸಿದೆ. ವಾಹನದ ಮಾಲೀಕರು ಸದ್ರಿ ವಾಹನವನ್ನು ಸಕಾಲದಲ್ಲಿ ಇಲಾಖೆಯ ಸುಪರ್ಧಿಗೆ ಒಪ್ಪಿಸದೆ ಇದ್ದಲ್ಲಿ, ಮುಟ್ಟುಗೋಲು ವಾಹನವನ್ನು ಜಪ್ತುಪಡಿಸಲು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರಿಗೆ ಅಧಿಕಾರ ನೀಡಿದೆ ಹಾಗೂ ಇದರ ಮೌಲ್ಯಕ್ಕೆ ಅನುಗುಣವಾಗಿ ವಾಹನ ಮಾಲೀಕರು ನೀಡಿರುವ ಇಂಡೆಮ್ನಿಟಿ ಬಾಂಡ್‌ನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ ಹಾಗೂ ಜಾಮೀನುದಾರರಾದ ಶ್ರೀ.ಪರಮೇಶ್ವರ ನಾಯ್ಕ್, ಬಿನ್:ನಾರಾಯಣ ನಾಯ್ಕ್, ಅಳಂಬುಡ, ಪೆರಾಜೆ ಗ್ರಾಮ, ನೇರಲಕಟ್ಟೆ, ಬಂಟ್ವಾಳ ತಾಲೂಕು ಮತ್ತು ಶ್ರೀ.ವೆಂಕಪ್ಪ ಪೂಜಾರಿ, ಬಿನ್: ತನಿಯ ಪೂಜಾರಿ, ಪೆರಾಜೆ ಗ್ರಾಮ, ನೇರಲಕಟ್ಟೆ, ಬಂಟ್ವಾಳ ತಾಲೂಕು ಇವರ ಜಮೀನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಮುಂದಿನ ಕಾನೂನು ಕ್ರಮ ಜರುಗಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:22–10–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.–1: ಶ್ರೀ.ಎನ್.ನಾರ್ಣಪ್ಪ ನಾಯ್ಕ್, ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು.
ಪ್ರಾ.ಸಾ.–2:ಶ್ರೀ.ಟಿ.ಬಿ.ರಾಜಣ್ಣ, ಪೊಲೀಸ್ ನಿರೀಕ್ಷಕರು, ಸರಸ್ವತಿಪುರಂ ಪೊಲೀಸ್ ಠಾಣೆ, ಮೈಸೂರು
ಪ್ರಾ.ಸಾ.–3: ಶ್ರೀ.ಗಂಗಾಧರ ಗೌಡ, ಅಬಕಾರಿ ರಕ್ಷಕ, ಪುತ್ತೂರು ಜಾರಿ ಮತ್ತು ತನಿಖೆ, ಪುತ್ತೂರು.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1	:	ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–2	:	ಮಹಜರಿನ ಪ್ರತಿ.
ನಿಶಾನೆ ಪಿ–3	:	ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–4	:	ತನಿಖಾ ವರದಿ

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:–

–ಇಲ್ಲ–

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

–ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1183

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/421/ಡಿಟಿಸಿಆರ್/2004–05, ದಿನಾಂಕ:27ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	ಆರೋಪಿ:
ಅಬಕಾರಿ ಉಪ ನಿರೀಕ್ಷಕರು (1) ಅಬಕಾರಿ ಗುಪ್ತ ವಾರ್ತದಳ, ಮಂಗಳೂರು.	ಐವನ್ ಡಿಸೋಜ, ಬಿನ್:ಇಸಾಕ್ ಡಿಸೋಜ, ಸೋಮನಾಥ ಉಳಿಯ, ಮುನ್ನೂರು ಗ್ರಾಮ ಮತ್ತು ಅಂಚೆ, ಮಂಗಳೂರು ತಾಲೂಕು **ವಾಹನದ ಮಾಲೀಕರು** ಶ್ರೀಮತಿ.ಸವಿತಾ, ಬಿನ್:ಜೋಕಿಂ ಸಾಂತ್ ರಾಣಿಪುರ ವಿಲ್ಲಾ,ಮುನ್ನೂರು ಅಂಚೆ, ವಯಾ ಪೆರ್ಮನ್ನೂರು, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(1), ಗುಪ್ತ ವಾರ್ತ ದಳ,ಮಂಗಳೂರು ಇವರು ದಿನಾಂಕ: 8–5–2005 ರಂದು ಬೆಳಿಗ್ಗೆ 10–30 ಗಂಟೆ ಸಮಯಕ್ಕೆ ಮಂಗಳೂರು ತಾಲೂಕು ಮುನ್ನೂರು ಗ್ರಾಮದ ಸೋಮನಾಥ ಉಳಿಯ ಎಂಬಲ್ಲಿ ಅಬಕಾರಿ ದಾಳಿ ಬಗ್ಗೆ ಗಸ್ತು ಪಹರೆ ನಡೆಸುತ್ತಿದ್ದ ಸಂದರ್ಭದಲ್ಲಿ ಸೋಮನಾಥ ಉಳಿಯದಿಂದ ಮುಖ್ಯ ರಸ್ತೆಯ ಸೇತುವೆಯ ಬಳಿ ಒಂದು ಹೊಂಡಾ ಆಕ್ಟಿವಾ ಸ್ಕೂಟರ್ ನೊಂದಣಿ ಸಂ:KA-19-Q-9113 ರಲ್ಲಿ ಚಾಲಕನು ಕಾಲಿಡುವ ಜಾಗದಲ್ಲಿ 10 ಲೀ.ನಷ್ಟು ಕಳ್ಳಭಟ್ಟಿ ಸಾರಾಯಿ ತುಂಬಿರುವ ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಯಾನನ್ನು ಇಟ್ಟುಕೊಂಡು ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ , ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧವಾಗಿದ್ದು ಹಾಗೂ 34,38(ಎ)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ ಕಳ್ಳಭಟ್ಟಿ ಸಾರಾಯಿ ಮತ್ತು ಕಳ್ಳಭಟ್ಟಿ ಸಾರಾಯಿ ಸಾಗಾಟಕ್ಕೆ ಬಳಸಿದ ವಾಹನ ಹೊಂಡಾ ಆಕ್ಟಿವಾ ಸ್ಕೂಟರ್ ನೊಂದಣಿ ಸಂ:KA-19-Q-9113ನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಸ್ಥಳದಲ್ಲಿಯೇ ಮಹಜರು ತಯಾರಿಸಿ, ಆರೋಪಿಯಾದ ಐವನ್ ಡಿಸೋಜ, ಬಿನ್: ಇಸಾಕ್ ಡಿಸೋಜ, ಸೋಮನಾಥ ಉಳಿಯ, ಮುನ್ನೂರು ಗ್ರಾಮ ಮತ್ತು ಅಂಚೆ, ಮಂಗಳೂರು ತಾಲ್ಲೂಕು ಇವರ ವಿರುದ್ದ ತಕ್ಷೀರು ಸಂಖ್ಯೆ:13/2004–05 ದಿ:08–05–2005ರಂದು ಮೊಕದ್ದಮೆಯನ್ನು ದಾಖಲಿಸಿ,ಈ ಕೆಳಕಂಡ ಸೊತ್ತುಗಳನ್ನು ವಶಪಡಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ನಕಲನ್ನು, ಸೊತ್ತು ಪಟ್ಟಿಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಕಳ್ಳಭಟ್ಟಿ ಹಾಗೂ ವಾಹನವನ್ನು ಪ್ರಕರಣದಲ್ಲಿ ಅಂತಿಮ ವರದಿ ಸಲ್ಲಿಸುವ ತನಕ ಇಲಾಖೆಯ ವಶದಲ್ಲಿಟ್ಟುಕೊಳ್ಳಲು ಅನುಮತಿಯನ್ನು ಕೋರಿದ ಮೇರೆಗೆ ದಿ:9–5–2005 ರಂದು ಪ್ರಾಧಿಕಾರದಿಂದ ಅನುಮತಿಸಲಾಗಿರುತ್ತದೆ.

1) ಹೊಂಡಾ ಆಕ್ಟಿವಾ ಸ್ಕೂಟರ್ ನೊಂದಣಿ ಸಂ:KA-19-Q-9113

2) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 10 ಲೀ ಕಳ್ಳಭಟ್ಟಿ ಸಾರಾಯಿ.

ವಾಹನದ ನೊಂದಾಣಿ ಮಾಲಕಿಯಾದ ಶ್ರೀಮತಿ.ಸವಿತಾ, ಬಿನ್:ಜೋಕಿಂ ಸಾಂತ್ ರಾಣಿಪುರ ವಿಲ್ಲಾ,ಮುನ್ನೂರು ಅಂಚೆ, ವಯಾ ಪೆರ್ಮನ್ನೂರು,ಮಂಗಳೂರು ಇವರು ಈ ಪ್ರಾಧಿಕಾರಕ್ಕೆ ದಿ:18–5–2005ರಂದು ವಾಹನದ ಆರ್.ಸಿ ಪುಸ್ತಕದ ಪ್ರತಿ ಮತ್ತು ಇತರ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದಕ ಜಿಲ್ಲೆ ಮಂಗಳೂರು ಇವರ ಪ್ರಾಧಿಕಾರದ ದಿ:17–8–2005ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮೌಲ್ಯಕ್ಕೆ ಸಮಾನವಾದ ರೂ.18,200/– ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಹಾಗೂ ಇತರೆ ಷರತ್ತುಗಳ ಆಧಾರದ ಮೇಲೆ ವಾಹನವನ್ನು ನೊಂದಾಣಿ ಮಾಲೀಕರ ಮಧ್ಯಂತರ ಸುಪರ್ದಿಗೆ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಸದ್ರಿ ಅದೇಶದಂತೆ ವಾಹನದ ಮಾಲೀಕರು ರೂ.18,200/– ಮೌಲ್ಯದ ಬ್ಯಾಂಕ್ ಗ್ಯಾರೆಂಟಿ ಪತ್ರವನ್ನು ವಿಜಯ ಬ್ಯಾಂಕ್, ಉಳ್ಳಾಲ ಶಾಖೆ, ಉಳ್ಳಾಲ ಇಲ್ಲಿಂದ ಬ್ಯಾಂಕ್ ಗ್ಯಾರೆಂಟಿ ಸಂ:250005, ದಿನಾಂಕ:27–6–2005ರ ಪ್ರಕಾರ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ಬ್ಯಾಂಕ್ ಗ್ಯಾರೆಂಟಿಯ ಮಾನ್ಯತೆ ಅವಧಿಯು ದಿನಾಂಕ:17–8–2010ರ ತನಕ ಊರ್ಜಿತದಲ್ಲಿರುತ್ತದೆ.ವಾಹನವನ್ನು ದಿ:6–6–2005 ರಂದು ವಾಹನದ ಮಾಲೀಕರಾದ ಶ್ರೀಮತಿ.ಸವಿತಾ, ಬಿನ್:ಜೋಕಿಂ ಸಾಂತ್, ರಾಣಿಪುರ ವಿಲ್ಲಾ, ಮುನ್ನೂರು ಅಂಚೆ, ವಯಾ ಪೆರ್ಮನ್ನೂರು,ಮಂಗಳೂರು ಇವರು ತಮ್ಮ ಮಧ್ಯಂತರ ಸುಪರ್ದಿಗೆ ಪಡೆದುಕೊಂಡಿರುತ್ತಾರೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1), ಇಐಬಿ, ದಕ ಮತ್ತು ಉಡುಪಿ ಜಿಲ್ಲೆ ಮಂಗಳೂರು ಇವರು ದಿ:28–2–2005ರಂದು ಸಲ್ಲಿಸಿದ್ದ ತನಿಖಾ ವರದಿ ಸಂ: ಇಐಬಿ/ಅಸಇ(1)/ಸಿಆರ್ಎಂ:13:04–05 ಇದರೊಂದಿಗೆ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮಾದರಿಗಳ ವಿಶ್ಲೇಷಣಾ ವರದಿ ಸಂ:243/2005ದಿ:30–6–2005 ರಲ್ಲಿ ಕಳ್ಳಭಟ್ಟಿ ಸಾರಾಯಿಯಲ್ಲಿ ಮದ್ಯಸಾರ ಪ್ರಮಾಣ 24.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಮತ್ತು ವಶಪಡಿಸಿಕೊಂಡ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ದ.ಕ ಇವರಿಂದ ಪಡೆದು ಪ್ರತಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸಿದ್ದು,ಸದ್ರಿ ಬಿ ವರದಿಯ ಪ್ರಕಾರ ಶ್ರೀಮತಿ.ಸವಿತಾ, ಬಿನ್:ಜೋಕಿಂ ಸಾಂತ್, ರಾಣಿಪುರ ವಿಲ್ಲಾ, ಮುನ್ನೂರು ಅಂಚೆ, ವಯಾ ಪೆರ್ಮನ್ನೂರು, ಮಂಗಳೂರು ಇವರು ಸದ್ರಿ ವಾಹನದ ನೊಂದಣಿ

ಮಾಲಕಿಯಾಗಿರುವುದಾಗಿ ದೃಡೀಕೃತವಾಗಿರುತ್ತದೆ. ಸದ್ರಿ ತನಿಖಾ ವರದಿಯಲ್ಲಿ ಜಪ್ತು ಪಡಿಸಿಕೊಳ್ಳಲಾದ ವಾಹನದಲ್ಲಿ ಆರೋಪಿತರು ಮಾನವನ ಆರೋಗ್ಯಕ್ಕೆ ಹಾನಿಯಾಗುವಂತಹ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡಲು ಬಳಸಿರುವುದರಿಂದ ಸದ್ರಿ ವಾಹನ ಸಮೇತ ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಕಳ್ಳಭಟ್ಟಿ ಸಾರಾಯಿಯನ್ನು ನಾಶಪಡಿಸಲು ಹಾಗೂ ವಾಹನವನ್ನು ವಿಲೇ ಮಾಡುವರೇ ಅದೇಶಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ. ಮತ್ತು ಉಡುಪಿ ಜಿಲ್ಲೆ ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂ: ಎಸ್‌ಡಿಕೆ:421:ಡಿಟಿಸಿಆರ್:2004–05, ದಿ:24–1–2006ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಹೊರತುಪಡಿಸಿ, ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಳ್ಳಲಾದ ಕಳ್ಳಭಟ್ಟಿ ಸಾರಾಯಿಯನ್ನು ಅಬಕಾರಿ ಉಪ ಅಧೀಕ್ಷಕರು,ಮಂಗಳೂರು ಉಪ ವಿಭಾಗ,ಮಂಗಳೂರು ಇವರ ಸಮಕ್ಷಮದಲ್ಲಿ ನಾಶಪಡಿಸಲು ಹಾಗೂ ಖಾಲಿ ಕ್ಯಾನನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿಗೊಳಿಸಲು ಆದೇಶಿಸಲಾಗಿರುತ್ತದೆ.

ವಾಹನದ ನೊಂದಾಣಿ ಮಾಲಕಿಯಾದ ಶ್ರೀಮತಿ.ಸವಿತಾ, ಬಿನ್:ಜೋಕಿಂ ಸಾಂತ್, ರಾಣಿಪುರ ವಿಲ್ಲಾ, ಮುನ್ನೂರು ಅಂಚೆ, ವಯಾ ಪೆರ್ಮನ್ನೂರು, ಮಂಗಳೂರು ಇವರಿಗೆ ಹಾಗೂ ಪ್ರಕರಣದ ಅರೋಪಿತ ವ್ಯಕ್ತಿಗೆ ಅಂದಿನ ಪ್ರಾಧಿಕಾರದಿಂದ ದಿ:9–12–2005ರಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಂತೆ ಕಾರಣ ಕೇಳಿ ನೋಟಿಸನ್ನು ನೊಂದಾಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸು ವಾಹನದ ಮಾಲೀಕರಿಗೆ ಹಾಗೂ ಅರೋಪಿತ ವ್ಯಕ್ತಿಗೆ ದಿ:14–12–2005 ರಂದು ಜ್ಯಾರಿಯಾಗಿದ್ದು, ವಾಹನದ ನೊಂದಾಣಿ ಮಾಲಕಿಯಾದ ಶ್ರೀಮತಿ. ಸವಿತಾ, ಬಿನ್:ಜೋಕಿಂ ಸಾಂತ್ ಇವರು ದಿ:6–1–2006ರಂದು ಉತ್ತರಿಸುತ್ತಾ ಅಪರಾಧವನ್ನು ಅಲ್ಲಗಳೆದು ವಾಹನವನ್ನು ಅವರ ಸುಪರ್ದಿಗೆ ಬಿಡುಗಡೆಗೊಳಿಸುವಂತೆ ಪ್ರಾದಿಕಾರಕ್ಕೆ ವಿನಂತಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ಫಿಯಾರ್ದುದಾರರಾದ ಶ್ರೀ.ಬಿ.ದಯಾನಂದ,ಅಬಕಾರಿ ಉಪ ನಿರೀಕ್ಷಕರು,ಗುಪ್ತ ವಾರ್ತದಳ,ಮಂಗಳೂರು ಮತ್ತು ತನಿಖಾಧಿಕಾರಿಗಳಾದ ಶ್ರೀ.ಡಿ.ನಾರಾಯಣ ಮಣಿಯಾಣಿ ಅಬಕಾರಿ ಉಪ ನಿರೀಕ್ಷಕರು ಇವರು ಪ್ರಾಸಿಕ್ಯೂಶನ್ ಸಾಕ್ಷಿಗಳಾಗಿ ಈ ಪ್ರಾದಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆಗಾಗಿ ಹಲವಾರು ಬಾರಿ ಕಾಲವಕಾಶ ನೀಡಲಾಗಿದ್ದರೂ, ವಾಹನದ ಮಾಲೀಕರು ಪ್ರಾದಿಕಾರದ ಮುಂದೆ ಹಾಜರಾಗದೇ ಇರುವುದರಿಂದ ರಕ್ಷಣಾ ಸಾಕ್ಷಿ ಇಲ್ಲವೆಂದು ಪರಿಗಣಿಸಿ ರಕ್ಷಣಾ ಪರ ವಕೀಲರ ವಾದ ವಿವಾದಗಳನ್ನು ಆಲಿಸಿ, ಸಾಕ್ಷಿಗಳು ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಿ, ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾದಾಂಶಗಳು

1. ದಿನಾಂಕ:8–5–2005ರಂದು ಹೊಂಡಾ ಆಕ್ಟಿವಾ ಸ್ಕೂಟರ್ ನೊಂದಣಿ ಸಂ:KA-19-Q-9113ರಲ್ಲಿ ಅಕ್ರಮವಾಗಿ ಒಂದು ಕ್ಯಾನಿನಲ್ಲಿ 10 ಲೀ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಕಳ್ಳಭಟ್ಟಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣತ್ಮಾಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ.ನಾರಾಯಣ ಡಿ.ಮಣಿಯಾಣಿ,ಅಬಕಾರಿ ಉಪ ನಿರೀಕ್ಷಕರು ,ಜ್ಯಾರಿ ಮತ್ತು ತನಿಖೆ, ಕಾರ್ಕಳ ಇವರು ದಿನಾಂಕ: 13–12–2005 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ನಾನು ಈ ಹಿಂದೆ ಇಐಬಿ,ದ.ಕ ಮತ್ತು ಉಡುಪಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸಿದ್ದು , ದಿನಾಂಕ:26–5–2005 ರಿಂದ 1–6–2006ರ ತನಕ ಇದ್ದ ಸಂದರ್ಭದಲ್ಲಿ ಹಿಂದಿನ ಅಬಕಾರಿ ಉಪ ನಿರೀಕ್ಷಕರಾದ ಶ್ರೀ.ದಯಾನಂದ ಇವರು ಈ ಪ್ರಕರಣದ ಕಡತವನ್ನು ದಿ:26–5–2007ರಂದು ಹಸ್ತಾಂತರಿಸಿರುತ್ತಾರೆ.ಸದ್ರಿ ಪ್ರಕರಣದಲ್ಲಿ ತನಿಖೆ ನಡೆಸಲಾಗಿ ವಶಪಡಿಸಿಕೊಂಡ 10 ಲೀ ಕಳ್ಳಭಟ್ಟಿ ಸಾರಾಯಿ ಮತ್ತು ದ್ವಿಚಕ್ರ ವಾಹನ ಸಂ:KA-19-Q-9113 ಮತ್ತು 180 ಎಂಎಲ್‌ನ ಒಂದು ಮಾದರಿ ಸೀಸೆಯನ್ನು ಹಸ್ತಾಂತರ ಪಡೆದುಕೊಂಡಿರುತ್ತೇನೆ. ಮಾದರಿ ಸೀಸೆಯನ್ನು ರಾಸಾಯನಿಕ ಪರೀಕ್ಷೆಗಾಗಿ ಅಬಕಾರಿ ರಕ್ಷಕರಾದ ಶ್ರೀ.ಸಾಯಿ ಪ್ರಸಾದ್ ಇವರ ಮೂಲಕ ಕಳುಹಿಸಿ ವಿಶ್ಲೇಷಿಸಿದ ಮಾದರಿ ಸೀಸೆ ಹಾಗೂ ವರದಿಯನ್ನು ಸ್ವೀಕರಿಸಿರುತ್ತೇನೆ. ರಾಸಾಯನಿಕ ತಜ್ಞರು ನೀಡಿದ ವರದಿಯ ಮೂಲ

ಪ್ರತಿಯನ್ನು ಮಾನ್ಯ ಜೆ.ಎಂ.ಎಫ್ ಸಿ ನ್ಯಾಯಾಲಯಕ್ಕೆ ಸಲ್ಲಿಸಿ, ಅದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದ್ರಿ ಪ್ರತಿಯನ್ನು ಎದುರುದಾರರ ವಕೀಲರ ಅಕ್ಷೇಪಣೆ ಮೇರೆಗೆ ಸೂಚಿಸಲಾಯಿತು. ವಾಹನದ ಮಾಲೀಕತ್ವದ ಬಗ್ಗೆ ಸಾರಿಗೆ ಇಲಾಖೆ ಇವರಿಂದ ದಿ:29-9-2005ರಂದು ವರದಿಯನ್ನು ಪಡೆದುಕೊಂಡಿರುತ್ತೇನೆ. ಸದ್ರಿ ವರದಿಯಂತೆ ವಾಹನದ ನೊಂದಣಿ ಮಾಲೀಕರು ಶ್ರೀಮತಿ ಸವಿತಾ ಎಂದು ತಿಳಿದುಬಂತು. ದಿ:22-8-2005ರಂದು ಅಧಿಕೃತ ಅಧಿಕಾರಿಗಳಿಗೆ ಒಂದು ವರದಿಯನ್ನು ಸಲ್ಲಿಸಿ ಪ್ರಕರಣದ ಸೊತ್ತುಗಳಾದ ಕಳ್ಳಭಟ್ಟಿ ಸಾರಾಯಿ ಹಾಗೂ ಸ್ಕೂಟರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಎದುರುದಾರರ ವಕೀಲರ ಪಾಟೀ ಸವಾಲಿಗೆ ಪ್ರಾಸಿಕ್ಯೂಶನ್ ಸಾಕ್ಷಿದಾರರು ಉತ್ತರಿಸುತ್ತಾ ಕಡತವನ್ನು ಹಸ್ತಾಂತರಿಸಿದ ಬಗ್ಗೆ ಸ್ವೀಕೃತಿ ನೀಡಿರುತ್ತೇನೆ. ಪ್ರಕರಣದಲ್ಲಿ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ನನಗೆ ಗೊತ್ತಿಲ್ಲ,ನನ್ನ ವಿಚಾರಣೆ ಸಂದರ್ಭದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಿಲ್ಲ. ಕಡತವನ್ನು ಪರಿಶೀಲಿಸಿದಾಗ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದು ಗೊತ್ತಾಯಿತು. ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರಿಂದ ರಾಸಾಯನಿಕ ತಜ್ಞರ ವರದಿಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರಬಹುದೆಂದು ಅನಿಸಿಕೆ. ನಿಶಾನೆ ಪಿ-1ನ್ನು ನಾನೇ ದೃಡೀಕರಿಸಿರುತ್ತೇನೆ. ನಿಶಾನೆ ಪಿ-1 ಮೂಲ ಪ್ರತಿಯ ದೃಡೀಕರಣ ಪ್ರತಿ ಅಲ್ಲ ಎಂದರೆ ಸರಿಯಲ್ಲ. ಆ ರೀತಿ ದೃಡೀಕೃತ ನಕಲನ್ನು ತಯಾರಿಸುವ ಹಾಗೂ ಅದನ್ನು ದೃಡೀಕರಿಸುವ ಅಧಿಕಾರ ನನಗಿಲ್ಲ ಎಂದರೆ ಸರಿಯಲ್ಲ, ಪ್ರಕರಣದ ಕಡತವನ್ನು ನಾನು ದಯಾನಂದ ಅ.ಉ.ನಿ ಇವರಿಂದ ಪಡೆದುಕೊಂಡಿಲ್ಲ ಹಾಗೂ ಯಾವುದೇ ತನಿಖೆಯನ್ನು ಈ ಪ್ರಕರಣದಲ್ಲಿ ಮಾಡಿದ್ದಿಲ್ಲವೆಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಪ್ರಾ.ಸ-2:

ಶ್ರೀ.ಬಿ.ದಯಾನಂದ ಅಬಕಾರಿ ನಿರೀಕ್ಷಕರು,ಅಬಕಾರಿ ಉಪ ಅಯುಕ್ತರ ಕಚೇರಿ,ದ.ಕ ಜಿಲ್ಲೆ ಮಂಗಳೂರು ಇವರು ದಿ:24-9-2008ರಂದು ಸಾಕ್ಷಿ ನೀಡುತ್ತಾ, ನಾನು 1999ರಿಂದ 2005 ರವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ ಗುಪ್ತ ವಾರ್ತಾದಳ ಮಂಗಳೂರು ವಿಭಾಗ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ:8-5-2005ರಂದು ಬೆಳಿಗ್ಗೆ ಸುಮಾರು 10-30 ಗಂಟೆ ಸಮಯಕ್ಕೆ ಮಂಗಳೂರು ತಾಲೂಕು ಮುನ್ನೂರು ಗ್ರಾಮದ ಸೋಮನಾಥ ಉಳಿಯ ಎಂಬಲ್ಲಿ ಅಬಕಾರಿ ಧಾಳಿ ಬಗ್ಗೆ ಗಸ್ತು ಕಾರ್ಯ ನಡೆಸುತ್ತಿದ್ದ ಸಮಯದಲ್ಲಿ ಸೋಮನಾಥ ಉಳಿಯದಿಂದ ಮುಖ್ಯ ರಸ್ತೆಗೆ ಹೋಗುವ ಸೇತುವೆ ಬಳಿಯಲ್ಲಿ ಒಂದು ಹೊಂಡಾ ಆಕ್ಟಿವಾ ಸ್ಕೂಟರ್ ಸಂ: KA-19-Q-9113 ಇದರಲ್ಲಿ ಒಬ್ಬ ಅಸಾಮಿ ಕುಳಿತು ಬರುತ್ತಿದ್ದು,ಸದ್ರಿ ಸ್ಕೂಟರಿನ ಅಸಾಮಿಯನ್ನು ತಡೆದು ನಿಲ್ಲಿಸಿ,ವಿಚಾರಿಸಲಾಗಿ ಸ್ಕೂಟರಿನಲ್ಲಿ ಸವಾರನ ಕಾಲು ಇಡುವ ಜಾಗದಲ್ಲಿ ಸುಮಾರು 10 ಲೀ ಗಾತ್ರದ ಕಳ್ಳಭಟ್ಟಿ ತುಂಬಿರುವ ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಯಾನನ್ನು ಇಟ್ಟುಕೊಂಡಿರುವುದು ಕಂಡುಬಂತು. ಈ ಬಗ್ಗೆ ಸ್ಥಳೀಯ ಸಾಕ್ಷಿದಾರರನ್ನು ಕೇಳಲಾಗಿ ಯಾರೂ ಸಾಕ್ಷಿ ಹೇಳಲು ಮುಂದೆ ಬಾರದ ಕಾರಣ ಇಲಾಖಾ ಸಿಬ್ಬಂಧಿಗಳನ್ನೇ ಸಾಕ್ಷಿದಾರರನ್ನಾಗಿ ಇಟ್ಟುಕೊಂಡು ನ್ಯಾಯಾಲಯದಿಂದ ವಾರೆಂಟನ್ನು ಪಡೆಯಲು ಕಾಲಾವಕಾಶವಿಲ್ಲದ ಕಾರಣ ಸರ್ಚ್ ಮೆಮೋ ತಯಾರಿಸಿ ಸದ್ರಿ ಸ್ಕೂಟರನ್ನು ಶೋಧಿಸಲಾಯಿತು. ಕ್ಯಾನಿನ ಮುಚ್ಚಳವನ್ನು ತೆರೆದು ನೋಡಲಾಗಿ ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಕಂಡುಬಂತು. ಸದ್ರಿ ಸಾರಾಯಿ ಸಾಗಾಣಿಕೆಗೆ ಯಾವುದಾದರೂ ದಾಖಲೆ ಪತ್ರಗಳು ಇದೆಯೋ ಎಂದು ಕೇಳಲಾಗಿ ಅದು ಯಾವುದು ಇಲ್ಲವೆಂದು ಅರೋಪಿತ ವ್ಯಕ್ತಿ ತಿಳಿಸಿದನು. ಇದು ಅಕ್ರಮ ಕಳ್ಳಭಟ್ಟಿ ಸಾರಾಯಿ ಎಂದು ಪರಿಗಣಿಸಿ ,ಸದ್ರಿ ಕ್ಯಾನ್ ನಿಂದ 180 ಎಂಎಲ್‌ನ ಒಂದು ಸೀಸೆ ಕಳ್ಳಭಟ್ಟಿ ಸಾರಾಯಿಯನ್ನು ಪ್ರತ್ಯೇಕಿಸಿ ,ಸದ್ರಿ ಬಾಟಲಿ ಮತ್ತು ಕ್ಯಾನಿಗೆ ಮುಚ್ಚಳ ಹಾಕಿ , ಬಟ್ಟೆದಾರ ಕಟ್ಟಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ಸ್ಕೂಟರಿನಲ್ಲಿ ಕುಳಿತುಕೊಂಡ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಐವನ್ ಡಿಸೋಜ, ಬಿನ್:ಇಸಾಕ್ ಡಿಸೋಜ,ಪ್ರಾಯ ಸುಮಾರು 32 ವರ್ಷ ,ಸೋಮನಾಥ ಉಳಿಯ,ಮುನ್ನೂರು ಗ್ರಾಮ, ಮಂಗಳೂರು ತಾಲೂಕು ಎಂದು ತಿಳಿಸಿದನು. ಸದ್ರಿ ಸ್ಕೂಟರಿನ ದಾಖಲಾತಿಗಳನ್ನು ಕೇಳಲಾಗಿ ಯಾವುದು ತನ್ನಲ್ಲಿ ಇಲ್ಲವೆಂದು ತಿಳಿಸಿದನು. ಸ್ಕೂಟರು ಹಳದಿ ಬಣ್ಣದಿಂದ ಕೂಡಿದ್ದು,ಹಿಂದೆ ಮತ್ತು ಮುಂಭಾಗದಲ್ಲಿ ನೊಂದಣಿ ಸಂಖ್ಯೆಯನ್ನು ಬರೆದಿರುತ್ತಾರೆ. ಸ್ಕೂಟರಿನಲ್ಲಿ ಬಿಡಿ ಬಾಗಗಳು ಹಾಗೂ ಹೆಚ್ಚುವರಿ ಚಕ್ರವಿರುವುದಿಲ್ಲ. ಈ ರೀತಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಮಾಡುವುದು ಅಬಕಾರಿ ಕಾನೂನಿಗೆ ವಿರುದ್ಧ ಎಂದು ಸದ್ರಿ ವ್ಯಕ್ತಿಗೆ ತಿಳಿಸಿ ,ಸದ್ರಿ ಅರೋಪಿಯನ್ನು ಕಳ್ಳಭಟ್ಟಿ ಸಾರಾಯಿ ಮತ್ತು ವಾಹನದೊಂದಿಗೆ ದಸ್ತಗಿರಿ ಮಾಡಲಾಯಿತು.ಸದ್ರಿ ಮಹಜರನ್ನು ಬೆಳಿಗ್ಗೆ 10-30 ರಿಂದ 11-30ರವರೆಗೆ ತಯಾರಿಸಿ, ಸೀಲಿನ ನಮೂನೆಯನ್ನು ತಯಾರಿಸಿ ವಿಳಾಸದ ಚೀಟಿಯನ್ನು ಕ್ಯಾನಿಗೆ ಮತ್ತು ಬಾಟಲಿಗೆ ಅಂಟಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಎದುರುದಾರರ ವಕೀಲರ ಪಾಟೀ ಸವಾಲಿಗೆ ಪ್ರಾಸಿಕ್ಯೂಶನ್ ಸಾಕ್ಷಿದಾರರು ಉತ್ತರಿಸುತ್ತಾ ಈ ತಕ್ಷೀರಿನ ಬಗ್ಗೆ ಖಚಿತ ವರ್ತಮಾನ ನನಗೆ ಬಂದಿರುತ್ತದೆ. ಸದ್ರಿ ತಕ್ಷೀರು ವರ್ತಮಾನವು ಸಾಧಾರಣ ಬೆಳಿಗ್ಗೆ 10-25ಕ್ಕೆ ಬಂದಿರುತ್ತದೆ. ಪ್ರಕರಣ ನಡೆದ ಸ್ಥಳವು ನಮ್ಮ ಕಛೇರಿಯಿಂದ ಸುಮಾರು 10 ಕಿ.ಮಿ. ದೂರದಲ್ಲಿ ಇರುತ್ತದೆ. ನಮ್ಮೊಂದಿಗೆ ಅಬಕಾರಿ ರಕ್ಷಕರಾದ ಶ್ರೀ.ಪುರುಷೋತ್ತಮ ಮತ್ತು ಶ್ರೀ.ಪ್ರಕಾಶ ಕುಮಾರ್ ಇವರು ಇದ್ದರು, ನಾವು ಇಲಾಖಾ ವಾಹನವಾದ ಜೀಪು ಸಂ:KA-01-G-2065 ರಲ್ಲಿ ಹೋಗಿದ್ದು,ಚಾಲಕ ಶ್ರೀ.ರಘುರಾಮ ಆಗಿರುತ್ತಾರೆ. ತಕ್ಷೀರು ಸ್ಥಳಕ್ಕೆ ತಲುಪುವ ದಾರಿಯಲ್ಲಿ ತಕ್ಷೀರಿಗೆ ಒಳಪಟ್ಟಿರುವ

ವಾಹನ ಮಾತ್ರ ಬಂದಿರುತ್ತದೆ.ವಾಹನವನ್ನು ನಿಲ್ಲಿಸಲು ನಾನೇ ಸೂಚನೆ ನೀಡಿದ್ದು, ಸೂಚನೆ ನೀಡಿದ ತಕ್ಷಣ ವಾಹನದ ಚಾಲಕನು ವಾಹನವನ್ನು ನಿಲ್ಲಿಸಿರುತ್ತಾನೆ. ಸದ್ರಿ ತಕ್ಷೀರು ಸ್ಥಳದ ದಾರಿಯಲ್ಲಿ ಜನರು ಹೋಗಿಬರುವುದು ಇರುತ್ತದೆ. ಬೇರೆ ಅಂಗಡಿ ಮನೆಗಳು ಯಾವುದೇ ಇರುವುದಿಲ್ಲ. ದಾರಿಯಲ್ಲಿ ಹೋಗಿ ಬರುವ ಜನರನ್ನು ಸಾಕ್ಷಿದಾರರನ್ನಾಗಿ ಕೇಳಿದಾಗ ಯಾರೂ ಬರಲು ಒಪ್ಪಲಿಲ್ಲ. ತಕ್ಷೀರು ಮಹಜರಿನಲ್ಲಿ ಸ್ಥಳದ ಚೆಕ್ ಬಂಧಿಯನ್ನು ನಾನು ನಮೂದಿಸಿರುವುದಿಲ್ಲ. ತಕ್ಷೀರು ಸ್ಥಳದ ಮಹಜರನ್ನು ಅಬಕಾರಿ ರಕ್ಷಕರಾದ ಶ್ರೀ. ಪುರುಷೋತ್ತಮ ರವರು ಬರೆದಿರುತ್ತಾರೆ. ಸದ್ರಿ ದ್ವಿಚಕ್ರವನ್ನು ತಡೆದು ಪರಿಶೀಲಿಸಿದಾಗ ವಾಹನದಲ್ಲಿ ಯಾವುದೇ ದಾಖಲೆ ಪತ್ರಗಳಿರುವುದಿಲ್ಲ. ತಕ್ಷೀರಿಗೆ ಒಳಗೊಂಡಿರುವ ವಾಹನದ ಮಾಲೀಕರಿಂದ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ಜಪ್ತು ವಾಹನದಿಂದ ಯಾವುದೇ ಅಕ್ರಮ ಸಾರಾಯಿ ವಶಪಡಿಸಿ ಕೊಳ್ಳಲಾಗಿರುವುದಿಲ್ಲ ಎಂಬುವುದು ಸರಿಯಲ್ಲ. ವಶಪಡಿಸಿಕೊಂಡಿರುವ 10 ಲೀ ಸಾಮರ್ಥ್ಯದ ಕ್ಯಾನನ್ನು ಸ್ಕೂಟರಿನ ಕಾಲಿಡುವ ಜಾಗದಲ್ಲಿ ಇಡಲು ಸಾಧ್ಯವಿಲ್ಲ ಎಂಬುವುದು ಸರಿಯಲ್ಲ, ನಾವು ತಯಾರಿಸಿದ ಮಹಜರು ಕಛೇರಿಯಲ್ಲಿ ತಯಾರಿಸಿರುವುದು ಎಂಬುದು ಸರಿಯಲ್ಲ,ತಕ್ಷೀರು ಸ್ಥಳಕ್ಕೆ ಹೋಗದೇ ಇರುವುದರಿಂದ ಪಂಚ ಸಾಕ್ಷರ ಸಹಿಯನ್ನು ಪಡೆಯಲಾಗಿರುವುದಿಲ್ಲ ಎಂದು ಹೇಳುವುದು ಸರಿಯಲ್ಲ,ನಾನು ಆರ್.ಸಿ ಮಾಲೀಕರ ಮೇಲೆ ದ್ವೇಷದಿಂದ ಈ ತಕ್ಷೀರು ದಾಖಲಿಸಿರುವುದು ಎಂದರೆ ಸರಿಯಲ್ಲ, ಇಲಾಖಾ ಮೇಲಾಧಿಕಾರಿಗಳಿಗೆ ತೃಪ್ತಿಪಡಿಸುವ ಉದ್ದೇಶದಿಂದ ಈ ತಕ್ಷೀರು ದಾಖಲಿಸಲಾಗಿದೆ ಎಂಬುವುದು ಸರಿಯಲ್ಲ,ಜಪ್ತುಪಡಿಸಿರುವ ವಾಹನಕ್ಕೂ, ವಶಪಡಿಸಿಕೊಳ್ಳಲಾಗಿರುವ ಕಳ್ಳಭಟ್ಟಿ ಸಾರಾಯಿಗೂ ಯಾವುದೇ ಸಂಬಂಧವಿಲ್ಲ ವೆಂದರೆ ಸರಿಯಲ್ಲ ಎಂದು ಪಾಟಿ ಸವಾಲಿಗೆ ಉತ್ತರ ನೀಡಿರುತ್ತಾರೆ.

ಪ್ರಕರಣದಲ್ಲಿ ವಾಹನದ ಅರ್.ಸಿ ಮಾಲೀಕರಿಗೆ ರಕ್ಷಣಾ ಸಾಕ್ಷಿಗೆ ಹಾಜರಾಗುವಂತೆ ದಿ:14–1–2009, 18–2–2009, 20–5–2009, 8–7–2009 ಮತ್ತು 22–7–2009 ರಂದು ಹಾಜರಾತಿ ಸೂಚನಾ ಪತ್ರ ನೀಡಲಾಗಿದ್ದರೂ,ಸದ್ರಿಯವರು ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಲು ಮುಂದೆ ಬಂದಿರುವುದಿಲ್ಲ. ತದನಂತರದಲ್ಲಿ ದಿ:2–9–2009ರಂದು ನೀಡಿದ ನೋಟಿಸಿನನ್ವಯ ದಿ:20–10–2009ರಂದು ಪ್ರಾಧಿಕಾರದ ಮುಂದೆ ಲಿಖಿತ ಅರ್ಜಿಯೊಂದನ್ನು ನೀಡಿ ಪ್ರಕರಣದಲ್ಲಿ ತನ್ನ ರಕ್ಷಣಾ ಸಾಕ್ಷಿ ಯಾವುದು ಇಲ್ಲವೆಂದು ತಿಳಿಸಿ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ತನ್ನ ಅಭ್ಯಂತರವಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಪ್ರಾಧಿಕಾರವು ಮುಂದಕ್ಕೆ ಹೊರಡಿಸಿರುವ ಆದೇಶವನ್ನು ಪಾಲಿಸಲು ನಾನು ಬದ್ಧಳಿರುತ್ತೇನೆ ಎಂದು ತಿಳಿಸಿರುತ್ತಾರೆ. ಕಾರಣ ಪ್ರಕರಣದಲ್ಲಿ ರಕ್ಷಣಾ ಸಾಕ್ಷಿ ಇಲ್ಲವೆಂದು ಪರಿಗಣಿಸಲಾಯಿತು.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ–1 ಮತ್ತು ಪ್ರಾ.ಸ–2 ರವರ ಸಾಕ್ಷಿ ವಿಚಾರಣೆಯನ್ನು ನಡೆಸಲಾಗಿದ್ದು ರಕ್ಷಣಾ ಸಾಕ್ಷಿ ಹಾಜರಾಗದೇ ಇರುವುದರ ಬಗ್ಗೆ ರಕ್ಷಣಾ ಪರ ವಕೀಲರ ವಾದವನ್ನು ಆಲಿಸಿ ಮತ್ತು ಪ್ರಕರಣದ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿ:8–5–2005ರಂದು ಜಪ್ತು ಪಡಿಸಿರುವ ಹೊಂಡಾ ಆಕ್ಟಿವಾ ಸ್ಕೂಟರ್ ಸಂ:KA-19-Q-9113 ನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ಮಾಡಲು ಬಳಸಿ ಕೊಳ್ಳಲಾಗಿದ್ದು, ಪ್ರಕರಣದಲ್ಲಿ ಪತ್ತೆಹಚ್ಚಿದ ಸೊತ್ತುಗಳು ಕಳ್ಳಭಟ್ಟಿ ಸಾರಾಯಿಯೆಂದು ವಿಶ್ಲೇಷಣಾ ವರದಿಯಿಂದ ಸಾಬೀತಾಗಿರುವುದರಿಂದ, ಹೊಂಡಾ ಆಕ್ಟಿವಾ ಸ್ಕೂಟರ್ ಸಂ:KA-19-Q-9113ನ್ನು ಅಕ್ರಮ ಕಳ್ಳಭಟ್ಟಿ ಸಾಗಾಣಿಕೆಗೆ ಬಳಸಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆ ಯಾಗಿರುತ್ತದೆ. ವಾಹನ ಮಾಲೀಕರು ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಉತ್ತರಿಸುತ್ತ ಅಪರಾಧವನ್ನು ಅಲ್ಲಗಳೆದಿರುವುದೇ ಹೊರತು ಸದ್ರಿ ದ್ವಿಚಕ್ರ ವಾಹನವನ್ನು ಆರೋಪಿ ಐವನ್ ಡಿಸೋಜ ಇವರ ಉಪಯೋಗಕ್ಕಾಗಿ ನೀಡಿರುವ ಕುರಿತು ಯಾವುದೇ ಸಮಂಜಸ ಸಾಕ್ಷದಾರಗಳನ್ನು ಒದಗಿಸಿರುವುದಿಲ್ಲ ಹಾಗೂ ತನ್ನ ನಿರಾಪರಾಧಿತ್ವವನ್ನು ಸಾಬೀತು ಪಡಿಸುವ ಯಾವುದೇ ಅಂಶಗಳನ್ನು ದಾಖಲೆಗಳ ಮೂಲಕ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗೂ ಈ ಪ್ರಾಧಿಕಾರದಿಂದ ಅವರಿಗೆ ರಕ್ಷಣ ಸಾಕ್ಷಿ ನಡೆಸಲು ಅವಕಾಶ ನೀಡಲಾಗಿಯೂ, ಅವರು ರಕ್ಷಣಾ ವಿಚಾರಣೆಗೆ ಈ ಪ್ರಾಧಿಕಾರದ ಮುಂದೆ ಹಾಜರಾಗಲು ಮುಂದಾಗಿರುವುದಿಲ್ಲ.

ಕಾರಣ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯಾಧಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಲು ಹಲವಾರು ಬಾರಿ ನೋಟಿಸು ನೀಡಲಾಗಿದ್ದರೂ, ಸದ್ರಿಯವರು ಹಾಜರಾಗಿ ರಕ್ಷಣಾ ಸಾಕ್ಷಿ ನೀಡಿ ತನ್ನ ನಿರುಪರಾಧಿತ್ವವನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಮತ್ತು ತದನಂತರದಲ್ಲಿ ವಾಹನದ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ತನ್ನ ನಿರಾಕ್ಷೇಪಣೆಯನ್ನು ಲಿಖಿತವಾಗಿ ಪ್ರಾಧಿಕಾರದಲ್ಲಿ ಸಲ್ಲಿಸಿರುವುದರಿಂದ, ಸದ್ರಿ ವಾಹನವನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಸ್ಕೂಟರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಹೊಂಡಾ ಆಕ್ಟಿವಾ ಸ್ಕೂಟರ್ ಸಂ:KA-19-Q-9113 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ಉಪ ನಿರೀಕ್ಷಕರು(1), ಗುಪ್ತ ವಾರ್ತದಳ, ಮಂಗಳೂರು ವಿಭಾಗ ಇವರ ತಕ್ಷೀರು ಸಂ:13/2004–05 ದಿ:8–5–2005 ರಲ್ಲಿ ಜಪ್ತು ಪಡಿಸಿರುವ ಹೊಂಡಾ ಆಕ್ಟಿವಾ ಸ್ಕೂಟರ್ ಸಂ:KA-19-Q-9113 (ಚಾಸೀಸ್ ನಂ:ME4JF085M28136231 ಮತ್ತು ಇಂಜಿನ್ ನಂ:JF08E0141445) ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:17–8–2005ರಂದು ವಾಹನ ಬಿಡುಗಡೆಗೊಳಿಸಿ ತಾತ್ಕಾಲಿಕವಾಗಿ ಮದ್ಯಂತರ ಬಿಡುಗಡೆ ಅದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಅರ್.ಸಿ ಮಾಲೀಕರು ಸದ್ರಿ ಮದ್ಯಂತರ ಬಿಡುಗಡೆ ಹೊಂದಿರುವ ಹೊಂಡಾ ಆಕ್ಟಿವಾ ಸ್ಕೂಟರ್ ಸಂ: KA-19-Q-9113 ನ್ನು ಈ ಆದೇಶದ 30 ದಿನಗಳೊಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ದಕ್ಷಿಣ ವಲಯ –1I ಇವರ ಮೂಲಕ ಇಲಾಖಾ ವಶಕ್ಕೆ ಒಪ್ಪಿಸಲು ಆದೇಶಿಸಿದೆ.ಅಬಕಾರಿ ಉಪ ನಿರೀಕ್ಷಕರು(1),ಮಂಗಳೂರು ದಕ್ಷಿಣ ವಲಯ–II ಇವರು,ಸದ್ರಿ ಮುಟ್ಟುಗೋಲು ವಾಹನವನ್ನು ಆರ್.ಸಿ ಮಾಲೀಕರಿಂದ ಇಲಾಖಾ ವಶಕ್ಕೆ ಪಡೆದು ಅವರ ಸುಪರ್ದಿಯಲ್ಲಿ ಇರಿಸಿಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ವಾಹನವನ್ನು ಆರ್.ಸಿ ಮಾಲಿಕರು ಈ ಆದೇಶ ಹೊರಡಿಸಿದ 30 ದಿವಸಗಳೊಳಗೆ ಸರ್ಕಾರಕ್ಕೆ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ದಕ್ಷಿಣ ವಲಯ–II ಇವರಲ್ಲಿ ಒಪ್ಪಿಸಲು ವಿಫಲರಾದ್ದಲ್ಲಿ, ಅವರು ಈ ಪ್ರಾಧಿಕಾರಕ್ಕೆ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರೆಂಟಿ ಮೊತ್ತ ರೂ.18,200/– ನ್ನು ಸರ್ಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿ ಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27–10–2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ–1 : ಶ್ರೀ .ಬಿ ದಯಾನಂದ,ಅಬಕಾರಿ ನಿರೀಕ್ಷಕರು,
ಅಬಕಾರಿ ಉಪ ಆಯುಕ್ತರ ಕಛೇರಿ, ದ.ಕ ಜಿಲ್ಲೆ, ಮಂಗಳೂರು

ಪ್ರಾ.ಸಾ–2: ಶ್ರೀ.ನಾರಾಯಣ ಡಿ.ಮಾನ್ಯ,
ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಕಾರ್ಕಳ

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ–I : ರಾಸಾಯನಿಕ ವಿಶ್ಲೇಷಣಾ ವರದಿ ಪ್ರತಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

–ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1184

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/129/ಡಿಟಿಸಿಆರ್/2008–09, ದಿನಾಂಕ:20ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ವಿಟ್ಲ ಪೊಲೀಸ್ ಠಾಣೆ, ವಿಟ್ಲ.

ಆರೋಪಿಗಳು ಹಾಗೂ ವಾಹನ ಮಾಲೀಕರು

ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:07–10–2008 ರಂದು ದೂರವಾಣಿ ಮೂಲಕ ದೊರೆತ ಖಚಿತ ವರ್ತಮಾನದ ಮೇರೆಗೆ, ಫಿರ್ಯಾದುದಾರರು ತನ್ನ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಬಂಟ್ವಾಳ ತಾಲೂಕು ಕೊಲ್ನಾಡು ಗ್ರಾಮದ ನೂಜಿಬೈಲು ಜಂಕ್ಷನ್ ಬಳಿ ಒಂದು ಟಾಟಾ ಸಫಾರಿ ವಾಹನವನ್ನು ರಸ್ತೆಯ ಬದಿಯಲ್ಲೇ ಬಿಟ್ಟು, ಆರೋಪಿಗಳು ಪರಾರಿಯಾಗಿರುತ್ತಾರೆ. ಇದು ಅಕ್ರಮ ಕಳ್ಳ ಸಾಗಾಟದ ವಾಹನ ಆಗಿರಬಹುದೆಂದು ಸಂಶಯದ ಮೇರೆಗೆ ಟಾಟಾ ಸಫಾರಿಯನ್ನು ಪರಿಶೀಲಿಸಿದಾಗ, ಇದು ಮೆರೂನ್ ಬಣ್ಣದ ವಾಹನವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎಲ್–10–ಎಸ್–3040 ಆಗಿದ್ದು, ವಾಹನದ ವಿಂಡೋಗಳಿಗೆ ಕಪ್ಪು ಗಾಜು ಮುಚ್ಚಿರುವುದರಿಂದ ಹಾಗೂ ವಾಹನದಲ್ಲಿ ಚಾಲಕ ಹಾಗೂ ಸಂಬಂಧಪಟ್ಟ ವ್ಯಕ್ತಿಗಳು ಯಾರೂ ಇಲ್ಲದಿದ್ದ ಕಾರಣ ವಾಹನದ ಮುಂದಿನ ಬಾಗಿಲನ್ನು ತೆರೆದು ಪರಿಶೀಲಿಸಿದಾಗ, ಅದರ ಮಧ್ಯದ ಹಾಗೂ ಹಿಂದಿನ ಸೀಟಿನ ಕೆಳಗಡೆ ಬಿಳಿ ಕ್ಯಾನುಗಳನ್ನು ಇರಿಸಿದ್ದು, ಅದರಿಂದ ಒಂದನ್ನು ಕೆಳಗಿಳಿಸಿ ನೋಡಿದಾಗ, 35 ಲೀಟರ್ ತುಂಬಿದ ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಸ್ಪಿರಿಟ್ ಇರುವುದು ಕಂಡು ಬಂತು. ನಂತರ ಇತರ ಎಲ್ಲಾ ಕ್ಯಾನುಗಳನ್ನು ಪರಿಶೀಲಿಸಿದಾಗ, ಒಟ್ಟು 35 ಲೀಟರ್ ಗಾತ್ರದ ೧೫ ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಸುಮಾರು 525 ಲೀಟರ್ ಸ್ಪಿರಿಟ್ ಇರುವುದು ಕಂಡು ಬಂತು. ಈ ಮದ್ಯಸಾರವನ್ನು ಅಕ್ರಮವಾಗಿ ಯಾವುದೇ ಪರವಾನಿಗೆಯಿಲ್ಲದೆ ಕರ್ನಾಟಕದಿಂದ ಕೇರಳ ರಾಜ್ಯಕ್ಕೆ ಮದ್ಯ ತಯಾರಿಸಲು ಸಾಗಾಟ ಮಾಡಿರುವುದು ದೃಢಪಟ್ಟಿರುವುದರಿಂದ, ಮದ್ಯಸಾರ ಹಾಗೂ ಸಾಗಾಟಕ್ಕೆ ಬಳಸಿದ ಟಾಟಾ ಸಫಾರಿ ಕಾರನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಮದ್ಯಸಾರದಿಂದ ಮಾದರಿಯಾಗಿ 750 ಎಂ.ಎಲ್.ನ 15 ಮದ್ಯಸಾರದ ಬಾಟಲ್‌ಗಳನ್ನು ತೆಗೆದು ಅದಕ್ಕೆ ಮಾದರಿ ಸೀಲ್ ಹಾಗೂ ಇಲಾಖಾ ಸೀಲ್‌ನಿಂದ ಹಾಗೂ ಬಾಟಲ್‌ಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ಹೊಲಿದು ಎಸ್.ಹೆಚ್.ಒ. ಸೀಲ್ ಮಾಡಿ ಪಂಚರ ಸಮಕ್ಷಮ ಅಂಟಿಸಲಾಯಿತು. ಮಹಜರನ್ನು ಸ್ಥಳದಲ್ಲಿಯೇ ಬರೆದು ಹಾಗೂ ಮಹಜರ್‌ನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಓಡಿ ಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 157/2008 ದಿ:7–10–2008 ರಂತೆ ಪ್ರಕರಣವನ್ನು ನೋಂದಾಯಿಸಿ ಘನ ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿಯನ್ನು ಒಪ್ಪಿಸಿ, ಮುಂದಿನ ತನಿಖೆಯ ಬಗ್ಗೆ ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/129/ಡಿಟಿಸಿಆರ್/2008–09 ದಿ:12–11–2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಮದ್ಯಸಾರ ಹಾಗೂ ಟಾಟಾ ಸಫಾರಿ ಕಾರನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:4–3–2009 ರಂದು ಹಸ್ತಾಂತರಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ /19/2008–09 ದಿ: 20–6–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರದ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ: ಇ–48–15 ದಿ:13–2–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರದ ಪ್ರಮಾಣ ಶೇ.95 ಇರುವುದಾಗಿ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಮದ್ಯಸಾರವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯೊಂದಿಗೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ವರದಿ ಸಂ: 97/2008–09 ದಿ:30–6–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಸಿ ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ಅಧೀಕ್ಷಕರು ಹಾಗೂ ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರವನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/129/ಡಿಟಿಸಿಆರ್/2008–09 ದಿ:8–7–2009 ರ ಆದೇಶದಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13–7–2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶವಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ ಸಿಆರ್‌ಎಂ/2004 ದಿ:12–9–2005

ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:30–7–2009 ರಂದು ಸದರಿ ಸುತ್ತೋಲೆ ಅನುಸಾರ ಮುಟ್ಟುಗೋಲು ಹಾಕಿಕೊಳ್ಳಲಾದ 525 ಲೀಟರ್ ಮದ್ಯಸಾರವನ್ನು ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ/19/2008–09 ದಿ:8–9–2009 ರ ವರದಿಯಲ್ಲಿ,ತಕ್ಷೀರಿನಲ್ಲಿ ವಶಪಡಿಸಿಕೊಂಡ ಟಾಟಾ ಸಫಾರಿ ಕಾರು ಸಂ: ಕೆಎಲ್–10–ಎಸ್–3040 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿಗಳು, ಮಲಪುರಂ ರೀಜನ್ ಕೇರಳ ರಾಜ್ಯ ಇವರಿಗೆ ಪತ್ರ ಬರೆಯಲಾಗಿದ್ದು, ಇದುವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲ. ಅಲ್ಲದೆ ಸದರಿ ವಾಹನವನ್ನು ವಶಪಡಿಸಿಕೊಂಡು ಈಗಾಗಲೇ ಒಂದು ವರ್ಷ ಕಳೆದರೂ ವಾಹನದ ಮಾಲೀಕತ್ವವನ್ನು ಪ್ರಶ್ನಿಸಿ ವಾಹನದ ವಾರಸುದಾರರು ಯಾರೂ ಮುಂದೆ ಬಂದಿರುವುದಿಲ್ಲ ಹಾಗೂ ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿರುವುದರಿಂದ, ಸದರಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಟಾಟಾ ಸಫಾರಿ ಕಾರು ಸಂ: ಕೆಎಲ್–10–ಎಸ್–3040 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾದಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:07–10–2008 ರಂದು ಟಾಟಾ ಸಫಾರಿ ಕಾರು ಸಂ: ಕೆಎಲ್–10–ಎಸ್–3040 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಉಮೇಶ್ ಉಪ್ಪಳಿಗೆ, ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ದಿ:14–10–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:17–4–08 ರಿಂದ ವಿಟ್ಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತನಗೆ ದಿ:7–10–2008 ರಂದು ಬಂಟ್ವಾಳ ತಾಲೂಕು ಕೊಳ್ನಾಡು ಗ್ರಾಮದ ಸಾಲೆತ್ತೂರು ಪರಿಸರದಲ್ಲಿ ಸಂಚರಿಸುತ್ತಿರುವಾಗ, ದೂರವಾಣಿ ಮುಖಾಂತರ ದೊರೆತ ಖಚಿತ ವರ್ತಮಾನದಂತೆ ನೂಜಿಬೈಲು ಜಂಕ್ಷನ್ ಬಳಿ ಟಾಟಾ ಸಫಾರಿ ಕಾರನ್ನು ಯಾರೋ ಬಿಟ್ಟು ಹೋಗಿರುತ್ತಾರೆ ಹಾಗೂ ಅದರಲ್ಲಿ ಏನೋ ಅಕ್ರಮ ಸೊತ್ತುಗಳು ಇರಬೇಕೆಂಬ ದೊರೆತ ವರ್ತಮಾನದ ಮೇರೆಗೆ ತನ್ನ ಸಿಬ್ಬಂದಿ ಸಮೇತ ಸದರಿ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದಾಗ, ಅದು ಟಾಟಾ ಸಫಾರಿ ನಿರ್ಮಿತ ಕೆಎಲ್–10–ಎಸ್–3040 ಮೆರೂನ್ ಬಣ್ಣದ ವಾಹನವಾಗಿದ್ದು, ಅದರ ಮುಂದಿನ ಬಾಗಿಲನ್ನು ತೆರೆದು ನೋಡಲಾಗಿ, ಮದ್ಯ ಹಾಗೂ ಹಿಂದಿನ ಸೀಟಿನ ಕೆಳಗಡೆ 35 ಗಾತ್ರದ ಒಟ್ಟು 15 ಪ್ಲಾಸ್ಟಿಕ್ ಕ್ಯಾನುಗಳನ್ನು ಇರಿಸಲಾಗಿದ್ದು,ಅವುಗಳಲ್ಲಿ ಸ್ಪಿರಿಟ್ ಇರುವುದು ಕಂಡು ಬಂತು. ಸಾಗಾಟದ ಬಗ್ಗೆ ರಹದಾರಿ ಪತ್ರ ಇದೆಯೇ ಎಂದು ವಾಹನವನ್ನು ಪರಿಶೀಲಿಸಲಾಗಿ, ಯಾವುದೇ ದೊರಕದ ಕಾರಣ ಇದು ಅಕ್ರಮ ಸ್ಪಿರಿಟ್ ಸಾಗಾಟವೆಂದು ಸ್ಥಳಕ್ಕೆ ಬರಮಾಡಿಕೊಂಡ ಪಂಚರ ಸಮಕ್ಷಮ ಪರಿಶೀಲಿಸಿ, ಇದರಲ್ಲಿ ಒಟ್ಟು 525 ಲೀಟರ್ ಮದ್ಯಸಾರ ಇರುವುದು ಕಂಡು ಬಂತು. ಸದರಿ ಮದ್ಯಸಾರದಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಬಾಟಲ್‌ಗಳನ್ನು ತೆಗೆದು ಅದಕ್ಕೆ ಬಟ್ಟೆ ದಾರ ಸುತ್ತಿ, ಎಸ್.ಹೆಚ್.ಒ. ಸೀಲ್ ಮಾಡಿ, ಮಾದರಿ ಸೀಸೆಗಳಿಗೂ ಹಾಗೂ ಪ್ಲಾಸ್ಟಿಕ್ ಕ್ಯಾನುಗಳಿಗೆ ಕ್ರಮ ಸಂಖ್ಯೆಯನ್ನು ನಮೂದಿಸಿ ಮಹಜರನ್ನು ಸ್ಥಳದಲ್ಲಿಯೇ ಬರೆದು, ಇದು ಅಕ್ರಮ ಕಳ್ಳ ಸಾಗಾಟವಾಗಿರುವುದರಿಂದ, ಓಡಿ ಹೋದ ಆರೋಪಿಗಳ ವಿರುದ್ದ ತಕ್ಷೀರು ಸಂ: 157/2008 ರಂತೆ ನೋಂದಾಯಿಸಿ ಈ ಪ್ರಾಧಿಕಾರದ ಆದೇಶದ ಅನುಸಾರ ತಕ್ಷೀರಿನಲ್ಲಿ ವಪಡಿಸಿಕೊಂಡ ಸೊತ್ತುಗಳನ್ನು ಬಂಟ್ವಾಳ ವಲಯ ಇವರಿಗೆ ದಿ:4–3–2009 ರಂದು ಹಸ್ತಾಂತರಿಸಿರುತ್ತೇನೆ. ಸ್ಥಳದಲ್ಲಿಯೇ ತಯಾರಿಸಿದ ಮಹಜರನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು, ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ–2 ಎಂದು,ಅದರಲ್ಲಿರುವ ತನ್ನ

ಸಹಿಯನ್ನು ನಿಶಾನೆ ಪಿ–2ಎ ಎಂದು ಮತ್ತು ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–3 ಎಂದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಕಮಲಾಕ್ಷ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:14–10–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ನಾನು ದಿ:19–9–2008 ರಿಂದ ಅಬಕಾರಿ ನಿರೀಕ್ಷಕರಾಗಿ ಬಂಟ್ವಾಳ ವಲಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ತಕ್ಷೀರಿಗೆ ಸಂಬಂಧಪಟ್ಟ ಸೊತ್ತುಗಳನ್ನು ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರಿಂದ ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳಲ್ಲಿ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಕೂಡಾ ಪಡೆದುಕೊಂಡಿರುತ್ತೇನೆ. ಪ್ರಕರಣದ ಮುಂದಿನ ತನಿಖೆಯನ್ನು ಕೈಗೊಂಡು ಬಿ ವರದಿಗಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಲಪುರಂ, ಕೇರಳ ಇವರಿಗೆ ದಿ:20–6–2009 ರಂದು ಪತ್ರ ಬರೆದಿರುತ್ತೇನೆ. ಸದರಿಯವರಿಂದ ಇದುವರೆಗೂ ಯಾವುದೇ ವರದಿ ಬಂದಿರುವುದಿಲ್ಲ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿ:20–6–2009 ರಂದು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತೇನೆ. ಪ್ರಕರಣದಲ್ಲಿ ಜಪ್ತುಪಡಿಸಿದ ವಾಹನದ ಮಾಲೀಕತ್ವವನ್ನು ಕೋರಿ ಯಾರೊಬ್ಬರೂ ಮುಂದೆ ಬಾರದಿರುವುದರಿಂದ, ಸದರಿ ವಾಹನಕ್ಕೆ ಯಾವುದೇ ಬೇಡಿಕೆ ಇಲ್ಲವೆಂದು ಹಾಗೂ ವಾಹನದ ಬಿ ವರದಿಯು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಬರದೇ ಇರುವುದರಿಂದ ವಾಹನದ ಮಾಲೀಕರ ಬಗ್ಗೆ ವಿವರ ಪಡೆಯಲು ಸಾಧ್ಯವಾಗದೆ ಇರುವುದರಿಂದ ಹಾಗೂ ಪ್ರಕರಣ ದಾಖಲಿಸಿ ಈಗಾಗಲೇ ಒಂದು ವರ್ಷ ಕಳೆದಿದ್ದು, ವಾಹನವನ್ನು ಅದೇ ರೀತಿಯಲ್ಲಿ ಇಟ್ಟುಕೊಂಡಲ್ಲಿ, ವಾಹನದ ಸ್ಥಿತಿಗತಿ ಕ್ಷೀಣವಾಗಿ ಸರಕಾರಕ್ಕೆ ನಷ್ಟ ಉಂಟಾಗುವ ದೆಸೆಯಿಂದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ:8–9–2009 ರಂದು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಾಧಿಕಾರದ ಆದೇಶಾನುಸಾರ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರವನ್ನು ದಿ:30–7–2009 ರಂದು ಪಂಚರ ಹಾಗೂ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ ಇವರ ಸಮಕ್ಷಮ ನಾಶಪಡಿಸಲಾಗಿರುತ್ತದೆ. ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಶಾನೆ ಪಿ–4 ಎಂದು, ಈ ಪ್ರಾಧಿಕಾರಕ್ಕೆ ದಿ:20–6–2009 ರಂದು ಸಲ್ಲಿಸಿದ ವರದಿಯನ್ನು ನಿಶಾನೆ ಪಿ–5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–5ಎ ಎಂದು ಮತ್ತು ದಿ: 8–9–2009 ರಂದು ಸಲ್ಲಿಸಿದ ಪ್ರಸ್ತಾವನೆಯನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–6ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:07–10–2008 ರಂದು ಜಪ್ತುಪಡಿಸಿಕೊಂಡಿರುವ ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ರಲ್ಲಿ ಅಕ್ರಮವಾಗಿ 525 ಲೀಟರ್ ಮದ್ಯಸಾರವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ,ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಮತ್ತು ಪತ್ತೆಯಾಗದಿರುವ ಆರೋಪಿತರು ಮತ್ತು ವಾಹನದ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು ಸದರಿ ವಾಹನದಲ್ಲಿ ಅವರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರವನ್ನು ಸಾಗಿಸಿರುವುದು ಘಟನೆಯಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ,ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 525 ಲೀಟರ್ ಮದ್ಯಸಾರವನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯಸಾರ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ರ ವಾಹನವನ್ನು ಕರ್ನಾಟಕ

ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಮತ್ತು ತನಿಖಾಧಿಕಾರಿಯವರ ಕಚೇರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲಿ, ಪರಾರಿಯಾದ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಲಪುರಂ ರೀಜನ್, ಕೇರಳ ಇವರನ್ನು ದಿ:20–6–2009 ರಂದು ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಪತ್ರ ಬರೆಯಲಾಗಿದ್ದು, ಇದುವರೆಗೂ ಅವರಿಂದ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ಆದುದರಿಂದ ತನಿಖಾಧಿಕಾರಿಯವರ ತನಿಖಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾಹನದ ಮಾಲೀಕರು ಹಾಗೂ ಆರೋಪಿಗಳು ಅಕ್ರಮವಾಗಿ ಮದ್ಯಸಾರವನ್ನು ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದುದರಿಂದ ಅಕ್ರಮ ಮದ್ಯಸಾರ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಟಾಟಾ ಸಫಾರಿ ಕಾರನ್ನು ಈಗಾಗಲೇ ಒಂದು ವರ್ಷ ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಮದ್ಯಸಾರ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/129/ಡಿಟಿಸಿಆರ್/2008–09, ದಿನಾಂಕ:20ನೇ ಅಕ್ಟೋಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ,ವಿಟ್ಲ ಇವರ ತಕ್ಷೀರು ಸಂ:157/2008 ದಿ:7–10–2008 ರಲ್ಲಿ ಜಪ್ತುಪಡಿಸಿರುವ ಟಾಟಾ ಸಫಾರಿ ಕಾರು ಸಂಖ್ಯೆ: ಕೆಎಲ್–10–ಎಸ್–3040 ನ್ನು(ಚಾಸೀಸ್ ನಂಬರು 403212 ಎಡಬ್ಲ್ಯೂರ್ಝಡ್‌ಎನ್ 00214 ಮತ್ತು ಇಂಜಿನ್ ನಂಬರು ಎಡಬ್ಲ್ಯೂರ್ಝಡ್ 700714) ನಿಯಮ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20–10–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಉಮೇಶ್ ಉಪ್ಪಳಿಗೆ, ಪೊಲೀಸ್ ಉಪ ನಿರೀಕ್ಷಕರು,ವಿಟ್ಲ ಪೊಲೀಸ್ ಠಾಣೆ, ವಿಟ್ಲ.

ಪ್ರಾ.ಸಾ–2: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರು

ನಿಶಾನೆ ಪಿ–1ಅ : ಮಹಜರಿನಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ–2 : ಸೊತ್ತುಗಳ ಪಟ್ಟಿ.

ನಿಶಾನೆ ಪಿ–2ಅ : ಸೊತ್ತುಗಳ ಪಟ್ಟಿಯಲ್ಲಿ ಫಿರ್ಯಾದುದಾರರ ಸಹಿ.

ನಿಶಾನೆ ಪಿ–3 : ಪ್ರಥಮ ಮಾಹಿತಿ ವರದಿ.

ನಿಶಾನೆ ಪಿ–3ಅ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–4 : ರಾಸಾಯನಿಕ ವಿಶ್ಲೇಷಕರ ವರದಿ

ನಿಶಾನೆ ಪಿ–5 : ತನಿಖಾ ವರದಿ

ನಿಶಾನೆ ಪಿ–5ಎ : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ–6 : ತನಿಖಾ ವರದಿ

ನಿಶಾನೆ ಪಿ–6ಎ : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ

ಪಿ.ಆರ್.1185 ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/342/ಡಿಟಿಸಿಆರ್/2007–08, ದಿನಾಂಕ:30ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿಗಳು:**
ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಕಡಬ, ಪುತ್ತೂರು.	1) ಚಂದ್ರಶೇಖರ, ಬಿನ್: ಶೀನಪ್ಪ ಗೌಡ, ಆರ್ಲಮೆ ಹೌಸ್, ಕುಟ್ರುಪ್ಪಾಡಿ ಗ್ರಾಮ, ಪುತ್ತೂರು ತಾಲೂಕು. 2) ಪುರುಷೋತ್ತಮ, ಬಿನ್:ಚಿಕ್ಕಣ್ಣ ಗೌಡ, ವಾಸ:ಪಣಿಮಜಲು ಮನೆ, ಕಡಬ ಗ್ರಾಮ, ಪುತ್ತೂರು ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:05–03–2008 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ, ಫಿರ್ಯಾದುದಾರರು ಠಾಣಾ ಸಿಬ್ಬಂದಿಯವರಾದ ಪಿ.ಸಿ.380 ಜಯರಾಮ, ಪಿ.ಸಿ.1093 ಕೃಷ್ಣಪ್ಪ, ಪಿ.ಸಿ.884 ಗಿರೀಶ್, ಪಿ.ಸಿ.816 ಶ್ರೀಧರ, ಪಿ.ಸಿ.1797 ಕರುಣಾಕರ ಇವರು ಪುತ್ತೂರು ತಾಲೂಕು ಕುಟ್ರುಪ್ಪಾಡಿ ಗ್ರಾಮದ ಹೊಸ್ಮಠ ಎಂಬಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ಒಂದು ಮೋಟಾರು ಸೈಕಲ್ ಬರುತ್ತಿದ್ದು, ಅದರಲ್ಲಿ ಇಬ್ಬರು ವ್ಯಕ್ತಿಗಳ ಪೈಕಿ ಹಿಂಬದಿಯಲ್ಲಿ ಕುಳಿತ್ತಿದ್ದ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಗೋಣಿ ಚೀಲದಲ್ಲಿ ರಟ್ಟಿನ ಪೆಟ್ಟಿಗೆಯಲ್ಲಿ ಮದ್ಯದ ಬಾಟಲ್‌ಗಳನ್ನು ಹಿಡಿದುಕೊಂಡು ಸಾಗಾಟ ಮಾಡುತ್ತಿದ್ದು, ಈ ಬಗ್ಗೆ ವಿಚಾರಿಸಿದಾಗ, ತನ್ನ ಬಳಿ ಯಾವುದೇ ರಹದಾರಿ ಪತ್ರ ಅಥವಾ ಮದ್ಯಕ್ಕೆ ಸಂಬಂಧಪಟ್ಟ ಬಿಲ್ಲುಗಳು ಇರುವುದಿಲ್ಲವೆಂದು ತಿಳಿಸಿರುವ ಮೇರೆಗೆ ಚಾಲಕನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಪುರುಷೋತ್ತಮ, ಬಿನ್:ಚಿಕ್ಕಣ್ಣ ಗೌಡ, ವಾಸ:ಪಣಿಮಜಲು ಮನೆ, ಕಡಬ ಗ್ರಾಮ, ಪುತ್ತೂರು ತಾಲೂಕು ಮತ್ತು ಇನ್ನೊಬ್ಬ ವ್ಯಕ್ತಿಯ ಹೆಸರು ಚಂದ್ರಶೇಖರ, ಬಿನ್: ಶೀನಪ್ಪ ಗೌಡ, ಆರ್ಲಮೆ ಹೌಸ್, ಕುಟ್ರುಪ್ಪಾಡಿ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿರುತ್ತಾರೆ. ಸದರಿ ಮದ್ಯದ ಬಾಟಲ್‌ಗಳನ್ನು ಚಂದ್ರಶೇಖರ್‌ರವರ ಹೊಸ್ಮಠ ಎಂಬಲ್ಲಿರುವ ಹೊಟೇಲ್‌ನಲ್ಲಿ ಮಾರಾಟ ಮಾಡಲೆಂದು ಕೊಂಡೊಯ್ಯುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಪರಿಶೀಲಿಸಿದಾಗ, ಒಂದು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್.ನ ಚೇರ್‌ಮ್ಯಾನ್ ಫೈನ್ ವಿಸ್ಕಿ ಎಂದು ಲೇಬಲ್ ಅಂಟಿಸಿರುವ ಒಟ್ಟು 48 ಸೀಸೆಗಳಂತೆ 8–640 ಲೀಟರ್ ಮದ್ಯ, ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ ಎರಡು ಸೀಸೆಗಳನ್ನು ತೆಗೆದು, ಅವುಗಳಿಗೆ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಅರಗಿನಿಂದ ಎಸ್.ಹೆಚ್.ಓ ಸೀಲ್ ಮಾಡಲಾಯಿತು ಮತ್ತು ಅದಕ್ಕೆ ಪಂಚರ ಸಹಿಯಿರುವ ಚೀಟಿಯನ್ನು ಅಂಟಿಸಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಮೋಟಾರು ಸೈಕಲ್ ಸಂಖ್ಯೆ: ಕೆಎ–21–ಜೆ–2134 ಆಗಿರುತ್ತದೆ. ಆದುದರಿಂದ ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 11,14,15, 32 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದರಿ ಅಪರಾಧವನ್ನು ಆರೋಪಿಗಳಿಗೆ ತಿಳಿಸಿ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ಮಹಜರಿನಲ್ಲಿ ಪಂಚರ ಸಹಿಯನ್ನು ಪಡೆದುಕೊಂಡು ಹಾಗೂ ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಅಕ್ರಮ 8–640 ಲೀಟರ್ ಮದ್ಯ ಹಾಗೂ ಮೋಟಾರು ಸೈಕಲನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಕಡಬ ಪೊಲೀಸ್ ಠಾಣೆಗೆ ತಂದು ಫಿರ್ಯಾದುದಾರರ ವಶಕ್ಕೆ ಒಪ್ಪಿಸಿದ್ದು, ಫಿರ್ಯಾದುದಾರರು ಸದರಿ ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ: 30/2008

ದಿ:5–3–2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಈ ಪ್ರಾಧಿಕಾರದ ದಿ:25–3–2008 ರ ಆದೇಶಾನುಸಾರ ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಅಬಕಾರಿ ಉಪ ನಿರೀಕ್ಷಕರು(ನಂ.2), ಪುತ್ತೂರು ವಲಯ, ಪುತ್ತೂರು ಇವರಿಗೆ ದಿ:5–4–2008 ರಂದು ಹಸ್ತಾಂತರಿಸಿರುತ್ತಾರೆ.

ತನಿಖೆಯನ್ನು ಮುಂದುವರಿಸಿದ ಅಬಕಾರಿ ಉಪ ನಿರೀಕ್ಷಕರು(ನಂ.2), ಪುತ್ತೂರು ವಲಯ, ಪುತ್ತೂರು ಇವರ ವರದಿ ಸಂಖ್ಯೆ: 1/2008–09 ದಿ:23–6–2008 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಪತ್ರ ಸಂಖ್ಯೆ: ಇ–145–2 ದಿ:2–5–2008 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42–2 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಸದರಿ ತನಿಖಾ ವರದಿಯನ್ನು ಆಧರಿಸಿ ಈ ಪ್ರಾಧಿಕಾರದ ಆದೇಶ ಸಂಖ್ಯೆ:ಎಸ್‌ಡಿಕೆ/ 342/ಡಿಟಿಸಿಆರ್/2007–08 ದಿ:23–9–2008 ರ ಆದೇಶದಲ್ಲಿ, ಸದರಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ವಾಹನದ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ, ಉಳಿದ 180 ಎಂ.ಎಲ್.ನ 48 ಸೀಸೆಗಳಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದು ಉಳಿದ 180 ಎಂ.ಎಲ್.ನ 46 ಮದ್ಯ ತುಂಬಿದ ಸೀಸೆಗಳನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ಸಮಕ್ಷಮ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ರ ಆರ್.ಸಿ. ಮಾಲೀಕರಾದ ಶ್ರೀ.ಅಬೂಬಕ್ಕರ್ ಸಿದ್ದಿಕ್, ಬಿನ್:ಎ.ಎಸ್.ಯೂಸುಫ್, ಕುಂತೂರು ಮನೆ ಮತ್ತು ಗ್ರಾಮ, ದರ್ಭೆ ಪೋಸ್ಟ್, ಪುತ್ತೂರು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:4–4–2008 ರಂದು ಅರ್ಜಿ ಸಲ್ಲಿಸಿ, ಸದರಿ ವಾಹನವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು, ಈ ಬಗ್ಗೆ ವಾಹನಕ್ಕೆ ಸಂಬಂಧಪಟ್ಟ ಆರ್.ಸಿ. ಪುಸ್ತಕವನ್ನು ಹಾಜರುಪಡಿಸಿರುತ್ತಾರೆ.

ಸದರಿ ಆರ್.ಸಿ. ಮಾಲೀಕರ ಅರ್ಜಿಯನ್ನು ಪರಿಷ್ಕರಿಸಿ, ವಾಹನದ ಮೌಲ್ಯವನ್ನು ದೃಢೀಕರಿಸುವ ಸಲುವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಗೆ ದಿ:12–5–2008 ಮತ್ತು ದಿ:28–5–2008 ರಂದು ಪತ್ರ ಬರೆಯಲಾಗಿದ್ದು, ಸದರಿ ಪತ್ರಕ್ಕೆ ಅನುಗುಣವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರು ವಾಹನದ ಈಗಿನ ಮೌಲ್ಯ ರೂ.30,000/– ಗಳಾಗಬಹುದೆಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಸದರಿ ಪತ್ರಕ್ಕೆ ಅನುಗುಣವಾಗಿ ವಾಹನ ಮಾಲೀಕರಿಗೆ ಈ ಪ್ರಾಧಿಕಾರದಿಂದ ದಿ:15–10–2008 ರಂದು ನೋಟೀಸು ನೀಡಲಾಗಿದ್ದು, ಸದರಿ ನೋಟೀಸಿನಲ್ಲಿ ವಾಹನದ ಮೌಲ್ಯಮಾಪನ ಮೊತ್ತ ರೂ.30,000/–ಕ್ಕೆ ಸಮನಾದ ಬ್ಯಾಂಕ್ ಗ್ಯಾರಂಟಿಯನ್ನು ಯಾವುದೇ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್ ಶಾಖೆಯಿಂದ ಈ ಪ್ರಾಧಿಕಾರದ ಪರ ಪಡೆದು 15 ದಿವಸದೊಳಗೆ ಒಪ್ಪಿಸಲು ಆದೇಶಿಸಿದೆ. ಸದರಿ ನೋಟೀಸನ್ನು ಆರ್.ಸಿ.ಮಾಲೀಕರಾದ ಶ್ರೀ.ಅಬೂಬಕ್ಕರ್ ಸಿದ್ದಿಕ್ ಇವರು ಸ್ವೀಕರಿಸಿದ್ದು, ಇದಕ್ಕೆ ಉತ್ತರವಾಗಿ ತನಗೆ ಬ್ಯಾಂಕ್ ಗ್ಯಾರಂಟಿ ನೀಡಲು ಅಸಾಧ್ಯವಾಗಿರುತ್ತದೆಂದು ಅವರ ಪರ ವಕೀಲರ ಮುಖಾಂತರ ದಿ:28–3–2009 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ವಾಹನದ ಆರ್.ಸಿ. ಮಾಲೀಕರಾದ ಶ್ರೀ.ಅಬೂಬಕ್ಕರ್ ಸಿದ್ದಿಕ್ ಇವರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಆದರೆ ಆರ್.ಸಿ. ಮಾಲೀಕರು ಈ ಬಗ್ಗೆ ಯಾವುದೇ ಉತ್ತರವನ್ನು ನೀಡದೆ, ಬೇರೆ ಯಾರೊಬ್ಬರೂ ಅವರ ಪರವಾಗಿ ನಕಲಿ ಸಹಿ ಮಾಡಿ ಉತ್ತರವನ್ನು ದಿ:13–5–2008 ರಂದು ಈ ಪ್ರಾಧಿಕಾರಕ್ಕೆ ನೀಡಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾದಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಹಾಜರಾತಿ ನೋಟೀಸುಗಳನ್ನು ಹಾಗೂ ರಕ್ಷಣಾ ಪರ ವಾಹನ ಮಾಲೀಕರಿಗೆ ಹಾಗೂ ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:05–03–2008 ರಂದು ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಮಹಜರು ಸಾಕ್ಷಿದಾರರಾದ ಶ್ರೀ.ಮುತ್ತಪ್ಪ ಗೌಡ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಸುಬ್ರಹ್ಮಣ್ಯ ಪೊಲೀಸ್ ಠಾಣೆ ಇವರು ದಿ:6-10-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು 2000 ನೇ ಸಾಲಿನಿಂದ 2008 ರ ಮಾರ್ಚ್‌ವರೆಗೆ ಕಡಬ ಠಾಣೆಯಲ್ಲಿ ಮುಖ್ಯ ಆರಕ್ಷಕರಾಗಿ ಕೆಲಸ ಮಾಡಿರುತ್ತೇನೆ. ತಾನು ದಿ:5-3-2008 ರಂದು ಪೊಲೀಸ್ ಉಪ ನಿರೀಕ್ಷಕರ ಆದೇಶದಂತೆ ತಮ್ಮ 5 ಮಂದಿ ಆರಕ್ಷಕ ಸಿಬ್ಬಂದಿಯವರೊಂದಿಗೆ ಸಾಯಂಕಾಲ ಸುಮಾರು 7-00 ಗಂಟೆ ಸಮಯಕ್ಕೆ ಪುತ್ತೂರು ತಾಲೂಕು ಕುಟ್ರುಪ್ಪಾಡಿ ಗ್ರಾಮದ ಹೊಸ್ಮಠ ಎಂಬಲ್ಲಿ ಕಡಬ ಕಡೆಯಿಂದ ಬರುತ್ತಿದ್ದ ಮೋಟಾರು ಸೈಕಲ್ ಸಂಖ್ಯೆ: ಕೆಎ-21-ಜೆ-2134 ಬರುತ್ತಿರುವುದನ್ನು ಕಂಡು, ಅದರಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಹಿಂದಿನ ಸವಾರನ ಕೈಯಲ್ಲಿ ರಟ್ಟಿನ ಪೆಟ್ಟಿಗೆಗಳಿದ್ದು, ಅದರಲ್ಲಿ 180 ಎಂ.ಎಲ್.ನ 48 ಸೀಸೆಗಳಲ್ಲಿ ಚೇರ್‌ಮೆನ್ ವಿಸ್ಕಿ ಎಂಬ ಲೇಬಲ್‌ಗಳ ಮದ್ಯ ತುಂಬಿರುವುದು ಕಂಡು ಬಂತು. ಆತನು ಯಾವುದೇ ಪರವಾನಿಗೆ ಅಥವಾ ಬಿಲ್ಲುಗಳನ್ನು ಹಾಜರುಪಡಿಸದಿರುವ ಕಾರಣಕ್ಕೆ, ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಪುರುಷೋತ್ತಮ ಎಂದು ಮತ್ತು ಸಹ ಸವಾರನ ಹೆಸರು ಚಂದ್ರಶೇಖರ್ ಎಂದು ತಿಳಿಸಿದನು. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ ಎರಡು ಬಾಟ್ಲಿಗಳನ್ನು ತೆಗೆದು, ಅದಕ್ಕೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಮೊಹರು ಮಾಡಿ, ನಂತರ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಅದನ್ನು ನಿಶಾನೆ ಪಿ-1 ಎಂದು, ಅದರಲ್ಲಿ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ನಂತರ ಆರೋಪಿಗಳನ್ನು ಮತ್ತು ಸೊತ್ತುಗಳನ್ನು ಠಾಣೆಗೆ ತಂದು ಮುಂದಿನ ಕ್ರಮಕ್ಕಾಗಿ ಪೊಲೀಸ್ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತೇನೆ. ಪೊಲೀಸ್ ಉಪ ನಿರೀಕ್ಷಕರಿಗೆ ನೀಡಿದ ವರದಿಯನ್ನು ನಿಶಾನೆ ಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ಸೊತ್ತುಗಳನ್ನು ತಾನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ:2

ಶ್ರೀ.ಯು.ಬಿ.ನಂದ ಕುಮಾರ್, ಪೊಲೀಸ್ ಉಪ ನಿರೀಕ್ಷಕರು, ಕಡಬ ಪೊಲೀಸ್ ಠಾಣೆ, ಕಡಬ ಇವರು ದಿ:6-10-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡುತ್ತಾ, ತಾನು ದಿ:5-3-2008 ರಂದು ರಾತ್ರಿ 9-00 ಗಂಟೆಗೆ ಕರ್ತವ್ಯದಲ್ಲಿ ಠಾಣೆಯಲ್ಲಿದ್ದಾಗ, ತನಗೆ ದೂರು ಬಂದ ಪ್ರಯುಕ್ತ ತನ್ನ ಮುಖ್ಯ ಆರಕ್ಷಕರವರ ಮೂಲಕ ಕಳುಹಿಸಲಾಗಿದ್ದು, ಅವರು ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ಮೋಟಾರು ಸೈಕಲನ್ನು ಮತ್ತು ಮದ್ಯವನ್ನು ಹಾಗೂ ಆರೋಪಿಗಳನ್ನು ದಸ್ತಗಿರಿ ಮಾಡಿ ನಿಶಾನೆ ಪಿ-1 ಮತ್ತು ನಿಶಾನೆ ಪಿ-2 ನ್ನು ತನಗೆ ಹಸ್ತಾಂತರಿಸಿದ್ದು, ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 30/2008 ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-3ಎ ಎಂದು ಗುರುತಿಸಲಾಯಿತು. ಆರೋಪಿಗಳನ್ನು ವಿಚಾರಿಸಿ, ಮರುದಿನ ರಿಮಾಂಡ್ ವರದಿಯೊಂದಿಗೆ ಪುತ್ತೂರು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಶಪಡಿಸಿಕೊಂಡ ಸೊತ್ತುಗಳನ್ನು ಈ ಪ್ರಾಧಿಕಾರದ ಆದೇಶಾನುಸಾರ ಪುತ್ತೂರು ಇವರಿಗೆ ಹಸ್ತಾಂತರಿಸಿರುತ್ತೇನೆ. ಈ ಪ್ರಾಧಿಕಾರಕ್ಕೆ ಸಲ್ಲಿಸಿರುವ ವರದಿಯನ್ನು ನಿಶಾನೆ ಪಿ-4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-4ಎ ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಗೋಪಿ ಮಾಥ್ಯೂ, ಕೃಷ್ಣಪ್ಪ, ಹರೀಶ, ಕರುಣಾಕರ, ಜಯರಾಮ.ಕೆ.ಟಿ ಇವರ ಹೇಳಿಕೆಗಳನ್ನು ಪಡೆದು ದಾಖಲಿಸಿರುತ್ತೇನೆ. ವಶಪಡಿಸಿಕೊಂಡ ಮಾದರಿ ಬಾಟಲ್‌ಗಳನ್ನು ರಾಸಾಯನಿಕ ವಿಶ್ಲೇಷಕರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅವರಿಗೆ ಬರೆದ ಪತ್ರವನ್ನು ನಿಶಾನೆ ಪಿ-5 ಎಂದು, ಅದರಲ್ಲಿ ತನ್ನ ಸಹಿಯನ್ನು ನಿಶಾನೆ ಪಿ-5ಎ ಎಂದು ಮತ್ತು ತಯಾರಿಸಿದ ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ-6 ಎಂದು, ಅದರಲ್ಲಿ ತನ್ನ ಸಹಿಯನ್ನು ನಿಶಾನೆ ಪಿ-6ಎ ಎಂದು, ಮಾದರಿ ಮೊಹರು ಸೀಲ್‌ನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ-8 ಎಂದು ಗುರುತಿಸಲಾಯಿತು. ನಂತರ ತಕ್ಷೀರು ಸಮಯದಲ್ಲಿ ಪತ್ತೆ ಹಚ್ಚಿದ ಎರಡು ಜನ ಆರೋಪಿಗಳ ವಿರುದ್ಧ ಜೆ.ಎಂ.ಎಫ್.ಸಿ. ನ್ಯಾಯಾಲಯ, ಪುತ್ತೂರು ಇವರಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಆದುದರಿಂದ ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಕೇಳಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ.:3

ಶ್ರೀಮತಿ.ಸುನೀತ, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:13–10–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು ಪುತ್ತೂರು ವಲಯ ಕಚೇರಿಯಲ್ಲಿ ಸುಮಾರು 4 ವರ್ಷಗಳಿಂದ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಇವರ ತಕ್ಷೀರು ಸಂಖ್ಯೆ: 30/2008 ಕ್ಕೆ ಸಂಬಂಧಿಸಿದ ಸೊತ್ತುಗಳನ್ನು ದಿ:5–4–2008 ರಂದು ಪಡೆದಿರುತ್ತೇನೆ ಹಾಗೂ ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:23–6–2008 ರಂದು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–9 ಎಂದು ಗುರುತಿಸಲಾಯಿತು. ತಕ್ಷೀರಿಗೆ ಸಂಬಂಧಿಸಿದ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸುವ ಬಗ್ಗೆ ಸಹಾಯಕ ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ ದಿ:2–5–2008 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42.5 ಇರುವುದಾಗಿ ದೃಢೀಕರಣ ಪತ್ರ ನೀಡಿದ್ದು, ಸದರಿ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಾಧಿಕಾರದ ಆದೇಶ ದಿ:23–9–08 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಿ ಆದೇಶ ನೀಡಿರುತ್ತಾರೆ. ಈ ಪ್ರಾಧಿಕಾರದ ನೋಟೀಸು ಸಂಖ್ಯೆ ದಿ:15–10–2008 ರಲ್ಲಿ ಅರ್ಜಿದಾರರಿಂದ ರೂ.30,000/– ಬ್ಯಾಂಕ್ ಗ್ಯಾರಂಟಿಯನ್ನು ಪಡೆದು ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿದ್ದು, ಈ ಬಗ್ಗೆ ವಾಹನದ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಮತ್ತು ದಸ್ತಗಿರಿಯಾದ ಆರೋಪಿಯಾಗಲಿ ತಮ್ಮ ಕಚೇರಿಯ ಮುಂದೆ ಯಾವುದೇ ಅಧಿಕೃತ ದಾಖಲಾತಿಗಳೊಂದಿಗೆ ವಾಹನದ ಬಿಡುಗಡೆಗಾಗಿ ಅರ್ಜಿ ಮತ್ತು ಈ ಪ್ರಾಧಿಕಾರದ ನೋಟೀಸಿಗೆ ಅನುಸಾರ ಯಾವುದೇ ಬ್ಯಾಂಕ್ ಗ್ಯಾರಂಟಿಯನ್ನು ನೀಡಿರುವುದಿಲ್ಲ. ಅದುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಳ್ಳಲಾದ ಮೋಟಾರು ಬೈಕನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿಗೊಳಿಸಬೇಕೆಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಫಿರ್ಯಾದುದಾರರು, ಮಹಜರು ಸಾಕ್ಷಿದಾರರು ಹಾಗೂ ತನಿಖಾಧಿಕಾರಿಯವರು ಸಲ್ಲಿಸಿರುವ ಹೇಳಿಕೆಗಳು ಪ್ರಕರಣದ ಮಹಜರಿನಲ್ಲಿ ನಮೂದಿಸಿದ ಅಂಶಗಳಿಗೆ ಒಂದಕ್ಕೊಂದು ಪೂರಕವಾಗಿದ್ದು, ಇದರಲ್ಲಿ ವಾಹನದ ಮಾಲೀಕರಾಗಲಿ ಅಥವಾ ಆರೋಪಿಗಳಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:05–03–2008 ರಂದು ಜಪ್ತುಪಡಿಸಿಕೊಂಡಿರುವ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ರಲ್ಲಿ ಅಕ್ರಮವಾಗಿ 8–640 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ,ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸುಗಳನ್ನು ಹಾಗೂ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ಸದರಿ ನೋಟೀಸುಗಳು ಸ್ವೀಕೃತಿಯಾಗಿದ್ದರೂ, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರು ಈ ಪ್ರಾಧಿಕಾರದ ಮುಂದೆ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ಹಾಗೂ ಹಾಜರಾತಿ ನೋಟೀಸಿಗೆ ಅನುಗುಣವಾಗಿ ಈ ಪ್ರಾಧಿಕಾರದ ಮುಂದೆ ತನ್ನ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣಕ್ಕೆ ಮತ್ತು ಆರೋಪಿಗಳು ಸದರಿ ಮದ್ಯವನ್ನು ತನ್ನ ಹೊಟೇಲ್‌ನಲ್ಲಿ ಮಾರಾಟ ಮಾಡಲೆಂದು ಸಾಗಾಟ ಮಾಡಿರುವುದು ಸಾಬೀತಾಗಿರುವುದರಿಂದ, ಇದು ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯವನ್ನು ಸಾಗಿಸಿರುವುದು ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ,ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಕಡಬ ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ, ಆರೋಪಿಗಳು ಅಕ್ರಮವಾಗಿ 8–640 ಲೀಟರ್ ಮದ್ಯವನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 6 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಅರ್ಜಿದಾರರು ಹಾಗೂ ಅವರ ಪರ ವಕೀಲರು ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ಅವರಲ್ಲಿ ಸ್ವೀಕೃತಿಯಾಗಿದ್ದರೂ ಕೂಡಾ ಈ ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಗಳಿಗೆ ಹಾಜರಾಗಿ ತಕ್ಷೀರು ದಾಖಲಿಸಿದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ನೀಡಿದ ಹೇಳಿಕೆಗಳಿಗೆ ಯಾವುದೇ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ಯಾವುದೇ ಅವರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ವಾಹನದ ಮಾಲೀಕರು ತನ್ನ ವಾಹನದಲ್ಲಿ ಮದ್ಯ ಸಾಗಾಟ ಮಾಡದಿರುವ ಬಗ್ಗೆ ಹಾಜರಾಗಿ ಯಾವುದೇ ನೈಜ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಗಳು ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡಿರುವುದು ಫಿರ್ಯಾದುದಾರರ ಹೇಳಿಕೆ ಹಾಗೂ ದಾಖಲಾತಿಗಳಿಂದ ಸ್ಪಷ್ಟವಾಗಿ ಸಾಬೀತಾಗಿರುತ್ತದೆ.

ವಾಹನದ ಮಾಲೀಕರಾದ ಶ್ರೀ.ಅಬೂಬಕ್ಕರ್ ಸಿದ್ದಿಕ್ ಇವರಿಗೆ ಈ ಪ್ರಾಧಿಕಾರದಿಂದ ದಿ:15–10–2008 ರಂದು ವಾಹನದ ಮೌಲ್ಯಮಾಪನ ಮೊತ್ತ ರೂ.30,000/– ಕ್ಕೆ ಸಮನಾದ ಬ್ಯಾಂಕ್ ಗ್ಯಾರಂಟಿಯನ್ನು ಹಾಗೂ ವಾಹನದ ಮೂಲ ನೋಂದಣಿ ಪುಸ್ತಕವನ್ನು ಹಾಜರುಪಡಿಸಿದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ನೋಟೀಸು ನೀಡಲಾಗಿರುತ್ತದೆ. ಸದರಿ ನೋಟಿಸಿಗೆ ಅನುಗುಣವಾಗಿ ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:28–3–2009 ರಂದು ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ತನ್ನ ಆರ್ಥಿಕ ಸ್ಥಿತಿಯಿಂದ ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.30,000/– ವನ್ನು ನೀಡಲು ಸಾಧ್ಯವಾಗಿರುವುದಿಲ್ಲ. ತನ್ನ ವಾಹನವನ್ನು ತನಗೆ ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ವಿನಂತಿಸಿರುತ್ತಾರೆ. ನಂತರ ಪ್ರಾಧಿಕಾರವು ಪ್ರಕರಣದ ವಿಚಾರಣೆಯನ್ನು ಕೈಗೊಂಡು ಸಾಕ್ಷಿದಾರರಿಗೆ ಹಾಗೂ ವಾಹನದ ಮಾಲೀಕರಿಗೆ ಮತ್ತು ಅವರ ಪರ ವಕೀಲರಿಗೆ ದಿ:20–5–2009, 10–6–2009, 5–8–2009, 6–10–2009 ಮತ್ತು ದಿ:13–10–2009 ರಂದು ಹಾಜರಾತಿ ನೋಟೀಸನ್ನು ನೀಡಿದರೂ, ಅವರು ಈ ಪ್ರಾಧಿಕಾರದ ಮುಂದೆ ಹಾಜರಾಗದೆ ತನ್ನ ಅನುಪಸ್ಥಿತಿಯಲ್ಲಿ ಮದ್ಯವನ್ನು ವಾಹನದಲ್ಲಿ ಸಾಗಾಟವಾಗಿರುವುದಿಲ್ಲವೆಂದು ಸಾಬೀತುಪಡಿಸಲು ಅರ್ಜಿದಾರರು ವಿಫಲರಾಗಿರುತ್ತಾರೆ. ವಾಹನದ ಮಾಲೀಕರು ತನ್ನ ತಿಳುವಳಿಕೆಯಿಲ್ಲದೆ ವಾಹನದಲ್ಲಿ ಅಕ್ರಮ ಮದ್ಯ ಸಾಗಾಟವಾಗಿದೆ ಎಂದು ಯಾವುದೇ ರಕ್ಷಣಾ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸದಿರುವುದರಿಂದ ಮತ್ತು ವಾಹನದ ಮಾಲೀಕರಿಗೆ ತಕ್ಷೀರನ್ನು ನಡೆಸಲು ಉತ್ಸುಕರಾಗಿಲ್ಲ ಎಂಬ ಕಾರಣಕ್ಕೆ ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134 ನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/342/ಡಿಟಿಸಿಆರ್/2007–08, ದಿನಾಂಕ:30ನೇ ಅಕ್ಟೋಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ:30/2008 ದಿ:05–03–2008 ರಲ್ಲಿ ಜಪ್ತುಪಡಿಸಿರುವ ಹೀರೊ ಹೊಂಡ ಸಿ.ಡಿ.ಡಿಲಕ್ಸ್ ಮೋಟಾರು ಸಂಖ್ಯೆ: ಕೆಎ–21–ಜೆ–2134ನ್ನು ನಿಯಮ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:30–10–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಮುತ್ತಪ್ಪ ಗೌಡ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಸುಬ್ರಹ್ಮಣ್ಯ ಪೊಲೀಸ್ ಠಾಣೆ.

ಪ್ರಾ.ಸಾ–2: ಶ್ರೀ.ಯು.ಬಿ.ನಂದ ಕುಮಾರ್, ಪೊಲೀಸ್ ಉಪ ನಿರೀಕ್ಷಕರು, ಕಡಬ ಪೊಲೀಸ್ ಠಾಣೆ, ಕಡಬ.

ಪ್ರಾ.ಸಾ–3: ಶ್ರೀಮತಿ.ಸುನೀತ, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರು
ನಿಶಾನೆ ಪಿ–1ಅ : ಮಹಜರಿನಲ್ಲಿರುವ ಪ್ರಾ.ಸಾ:1ರವರ ಸಹಿ.
ನಿಶಾನೆ ಪಿ–2 : ಪೊಲೀಸ್ ಉಪ ನಿರೀಕ್ಷಕರಿಗೆ ಬರೆದ ಪತ್ರ.
ನಿಶಾನೆ ಪಿ–2ಅ : ಪ್ರಾ.ಸಾ:1ರವರ ಸಹಿ.
ನಿಶಾನೆ ಪಿ–3 : ಪ್ರಥಮ ಮಾಹಿತಿ ವರದಿ.
ನಿಶಾನೆ ಪಿ–3ಅ : ಪ್ರಥಮ ಮಾಹಿತಿ ವರದಿಯಲ್ಲಿ ಪ್ರಾ.ಸಾ:2ರವರ ಸಹಿ.
ನಿಶಾನೆ ಪಿ–4 : ಈ ಪ್ರಾಧಿಕಾರಕ್ಕೆ ಸಲ್ಲಿಸಿದ ಪ್ರಾ.ಸಾ:2ರವರ ವರದಿ.
ನಿಶಾನೆ ಪಿ–4ಅ : ಪ್ರಾ.ಸಾ:2ರವರ ಸಹಿ.
ನಿಶಾನೆ ಪಿ–5 : ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ವರದಿ.
ನಿಶಾನೆ ಪಿ–5ಅ : ಪ್ರಾ.ಸಾ:2ರವರ ಸಹಿ.
ನಿಶಾನೆ ಪಿ–6 : ಸೊತ್ತುಗಳ ಪಟ್ಟಿ.
ನಿಶಾನೆ ಪಿ–6ಎ : ಸೊತ್ತುಗಳ ಪಟ್ಟಿಯಲ್ಲಿ ಪ್ರಾ.ಸಾ:2ರವರ ಸಹಿ.
ನಿಶಾನೆ ಪಿ–7 : ಮಾದರಿ ಮೊಹರು ಸೀಲ್.
ನಿಶಾನೆ ಪಿ–8 : ರಾಸಾಯನಿಕ ತಜ್ಞರ ವರದಿ.
ನಿಶಾನೆ ಪಿ–8ಎ : ರಾಸಾಯನಿಕ ತಜ್ಞರ ವರದಿಯಲ್ಲಿ ಪ್ರಾ.ಸಾ:2ರವರ ಸಹಿ.
ನಿಶಾನೆ ಪಿ–9 : ತನಿಖಾಧಿಕಾರಿಯವರು ಈ ಪ್ರಾಧಿಕಾರಕ್ಕೆ ಸಲ್ಲಿಸಿದ ವರದಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1192

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/254/ಡಿಟಿಸಿಆರ್/2005–06, ದಿನಾಂಕ:29ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿ ಹಾಗೂ ವಾಹನ ಮಾಲೀಕರು:**
ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ.	ದಿನೇಶ್, ಬಿನ್:ದಿ.ಸೋಮಪ್ಪ ಸಫಲಿಗ, ಅರ್ಕುಳ ಮನೆ, ಅರ್ಕುಳ ಗ್ರಾಮ, ಫರಂಗಿಪೇಟೆ, ಮಂಗಳೂರು ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:14–11–2005 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ, ಫಿರ್ಯಾದುದಾರರು ತನ್ನ ಸಿಬ್ಬಂದಿಯವರೊಂದಿಗೆ ಬಂಟ್ವಾಳ ತಾಲೂಕು ಬಿ.ಸಿ.ರೋಡ್‌ನ ಧರ್ಮಸ್ಥಳ–ಪುತ್ತೂರು ಕೂಡುರಸ್ತೆಯ ಜಂಕ್ಷನ್ ಬದಿಯಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ಒಂದು ಕಾಫಿ ಬಣ್ಣದ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ಪಾಣೆಮಂಗಳೂರು ಕಡೆಯಿಂದ ಮಂಗಳೂರು ಕಡೆಗೆ ಬರುತ್ತಿರುವುದನ್ನು ಗಮನಿಸಿ, ಅದನ್ನು ನಿಲ್ಲಿಸುವಂತೆ ಸೂಚಿಸಿದಾಗ ಚಾಲಕನು ಸ್ವಲ್ಪ ಮುಂದಕ್ಕೆ ಚಲಾಯಿಸಿ ಹೋದನು. ಸಿಬ್ಬಂದಿಯವರು ಇಲಾಖಾ ಜೀಪಿನಲ್ಲಿ ಹಿಂಬಾಲಿಸಿ ಬಿ.ಸಿ.ರೋಡ್ ಜಂಕ್ಷನ್ ರಸ್ತೆಯ ಎಡಭಾಗದಲ್ಲಿ ಕಾರನ್ನು ನಿಲ್ಲಿಸಿ ವಿಚಾರಿಸಿದಾಗ, ಚಾಲಕನು ತಾನು ಶಂಭೂರಿನಿಂದ ಮಂಗಳೂರಿಗೆ ಮಾರಾಟಕ್ಕಾಗಿ ಶೇಂದಿಯನ್ನು ಸಾಗಾಟ ಮಾಡಿರುತ್ತೇನೆ. ತನ್ನ ಬಳಿ ಯಾವುದೇ ಪರವಾನಿಗೆಯಿಲ್ಲವೆಂದು ಚಾಲಕನು ತಿಳಿಸಿರುತ್ತಾನೆ. ಪರವಾನಿಗೆಯಿಲ್ಲದೆ ಅಕ್ರಮ ಶೇಂದಿ ಸಾಗಾಟ ಮಾಡಿರುವುದು ಕರ್ನಾಟಕ ಅಬಕಾರಿ ಕಾನೂನಿನ ಬಗ್ಗೆ ಚಾಲಕನಿಗೆ ತಿಳಿಸಿ, ಸದರಿ ಶೇಂದಿಯನ್ನು ಪರಿಶೀಲಿಸಿದಾಗ, 35 ಲೀಟರ್ ಗಾತ್ರದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ 30 ಲೀಟರ್‌ನಷ್ಟು ತುಂಬಿದ ಒಟ್ಟು 9 ಕ್ಯಾನುಗಳಿದ್ದು, 20 ಲೀಟರ್ ಶೇಂದಿ ತುಂಬಿಸಿದ 3

ಕ್ಯಾನುಗಳು ಮತ್ತು 10 ಲೀಟರ್ ತುಂಬಿದ 1 ಕ್ಯಾನ್, ಒಟ್ಟು 13 ಕ್ಯಾನುಗಳಲ್ಲಿ ಸುಮಾರು ಒಟ್ಟು 340 ಲೀಟರ್ ಶೇಂದಿ ಇರುವುದು ಕಂಡು ಬಂತು. ಪ್ರತಿಯೊಂದು ಕ್ಯಾನಿನಿಂದ ತಲಾ 750 ಎಂ.ಎಲ್.ನ ಒಟ್ಟು 13 ಬಾಟಲ್‌ಗಳಲ್ಲಿ ಶೇಂದಿಯನ್ನು ರಾಸಾಯನಿಕ ಪರೀಕ್ಷೆಗೆಗಾಗಿ ಪ್ರತ್ಯೇಕಿಸಿ, ಅದಕ್ಕೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್ ಮಾಡಿ, ಆರೋಪಿಯ ಸಹಿಯಿರುವ ಗುರುತಿನ ಚೀಟಿಯನ್ನು ಅಂಟಿಸಲಾಯಿತು. ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರನ್ನು ಪರಿಶೀಲಿಸಿದಾಗ, ಇದರ ನೋಂದಣಿ ಸಂಖ್ಯೆ: ಸಿಆರ್‌ಎಕ್ಸ್–6729 ಇದರ ಇಂಜೀನ್ ನಂ: 6ಇಡಿ–045546 ಮತ್ತು ಚಾಸೀಸ್ ನಂ: ಎಎಂಬಿಪಿಡಿಎಕ್ಸ್ 111–596968 ಎಂದು ನಮೂದಿಸಿದ್ದು, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14 ರ ಪ್ರಕಾರ ಅಪರಾಧ ಹಾಗೂ ಕಲಂ 32, 34, 38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ನಮೂದಿಸಿ ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 340 ಲೀಟರ್ ಶೇಂದಿ ಹಾಗೂ ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಆರೋಪಿ ದಿನೇಶ್, ಬಿನ್:ದಿ.ಸೋಮಪ್ಪ ಸಫಲಿಗ, ಅರ್ಕುಳ ಮನೆ, ಅರ್ಕುಳ ಗ್ರಾಮ, ಫರಂಗಿಪೇಟೆ, ಮಂಗಳೂರು ತಾಲೂಕು ಇವನನ್ನು ದಸ್ತಗಿರಿ ಮಾಡಿ, ತಕ್ಷೀರು ಸಂಖ್ಯೆ: 1/2005–06 ದಿ:14–11–2005 ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತಾರೆ.

ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ಮಾದರಿಯಾಗಿ ತೆಗೆದ ಶೇಂದಿಯ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು,ಇವರ ಪತ್ರ ಸಂ:ಇ–637–13 ದಿ:16–12–2005 ರ ವರದಿಯಲ್ಲಿ ಶೇಂದಿಯ ಮದ್ಯಸಾರ ಪ್ರಮಾಣ ಶೇ.0.5 ಇರುವುದಾಗಿ ದೃಢೀಕರಣ ಪತ್ರ ನೀಡಿದ್ದು, ಸದರಿ ಶೇಂದಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:27–4–2006 ರಂದು ತನಿಖಾಧಿಕಾರಿಯವರು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯವರ ವರದಿಯ ಮೇರೆಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಶೇಂದಿಯನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43ಎ ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ಸಮಕ್ಷಮ ನಾಶಪಡಿಸಲು ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಂಎನ್‌ಜಿ/ಇ.ಐ.ಬಿ/ ಡಿಟಿಸಿಆರ್/254/2005–06 ದಿ:3–6–2006 ರಲ್ಲಿ ಆದೇಶ ನೀಡಲಾಗಿರುತ್ತದೆ. ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:7–9–2006 ರಂದು ತನ್ನ ಕಚೇರಿಯ ಆವರಣದಲ್ಲಿ ಮಹಜರು ಜರುಗಿಸಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಶೇಂದಿಯನ್ನು ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಮೂರ್ತೆದಾರರ ಸೇವಾ ಸಹಕಾರಿ ಸಂಘ(ನಿಯಮಿತ), ದೇರೆಬೈಲ್, ಕೊಂಚಾಡಿ, ಮಂಗಳೂರು ಇದರ ಅಧ್ಯಕ್ಷರು ಈ ಪ್ರಾಧಿಕಾರಕ್ಕೆ ದಿ:17–11–2005 ರಂದು ಅರ್ಜಿಯನ್ನು ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ರಲ್ಲಿ ಶೇಂದಿ ಸಾಗಾಟ ಮಾಡಲು ಕಾರಣಾಂತರದಿಂದ ಪರವಾನಿಗೆ ಸಿಗದಿರುವ ಕಾರಣ, ಸಜಿಪಮುನ್ನೂರು ಸೇವಾ ಸಹಕಾರಿ ಸಂಘದಿಂದ ದೇರೆಬೈಲ್ ಕೊಂಚಾಡಿ ಸೇವಾ ಸಹಕಾರಿ ಸಂಘಕ್ಕೆ ಶೇಂದಿಯನ್ನು ಸಾಗಾಟ ಮಾಡಿರುವುದನ್ನು ಒಪ್ಪಿಕೊಂಡು, ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರನ್ನು ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಅಂಬಾಸಿಡರ್ ಕಾರಿನ ವಾಹನ ಮಾಲೀಕರಾದ ಶ್ರೀ.ದಿನೇಶ್,ಬಿನ್:ದಿ.ಸೋಮಪ್ಪ ಸಫಲಿಗ, ಅರ್ಕುಳ ಮನೆ, ಅರ್ಕುಳ ಗ್ರಾಮ, ಫರಂಗಿಪೇಟೆ, ಮಂಗಳೂರು ತಾಲೂಕು ಇವರು ದಿ:6–1–2006 ರಂದು ತನ್ನ ವಕೀಲರ ಮುಖಾಂತರ ವಾಹನದ ಮಧ್ಯಂತರ ಬಿಡುಗಡೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಪ್ರಾಧಿಕಾರವು ವಾಹನದ ಮಧ್ಯಂತರ ಬಿಡುಗಡೆಗೆ ವಿಧಿಸುವ ಷರತ್ತುಗಳನ್ನು ಪಾಲಿಸುವುದಾಗಿ ಹಾಗೂ ವಾಹನದ ಭದ್ರತೆಗಾಗಿ ಬ್ಯಾಂಕ್ ಭದ್ರತೆಯನ್ನು ಒದಗಿಸುವುದಾಗಿ ತನ್ನ ಅರ್ಜಿಯಲ್ಲಿ ತಿಳಿಸಿರುತ್ತಾರೆ.

ವಾಹನದ ಮಾಲೀಕರಿಗೂ ಹಾಗೂ ಫೈನಾನ್ಶಿಯರ್ ಆದ ಸಾಹುಕಾರ್ ಪೇಟೆ ಚೆನ್ನೈ ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಂಎನ್‌ಜಿ/ಇ.ಐ.ಬಿ/ಡಿಟಿಸಿಆರ್/254/2005–06 ದಿ:6–1–2006 ರಂದು ನೋಂದಣಿ ಅಂಚೆ ನೀಡಲಾಗಿದ್ದು, ಸದರಿ ನೋಟೀಸಿಗೆ ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ.

ಸದರಿ ಅರ್ಜಿದಾರರ ಅರ್ಜಿಯ ವಿಚಾರಣೆಯನ್ನು ಕೈಗೊಂಡು ಕಚೇರಿಯ ದಾಖಲಾತಿಗಳನ್ನು ಪರಿಶೀಲಿಸಿದಾಗ, ತಕ್ಷೀರಿನಲ್ಲಿ ಒಳಗೊಂಡ ವಾಹನವನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ, ಮಂಗಳೂರು ಇವರ ಪ್ರಥಮ ಮಾಹಿತಿ ವರದಿ ಸಂ: 36/2004–05 ದಿ:24–3–2005 ರ ಮೊಕದ್ದಮೆಯಲ್ಲಿ ಈ ಮೊದಲೇ ದಿ:24–3–2005 ರಂದು ಜಪ್ತು ಮಾಡಿದ್ದು, ಪ್ರಾಧಿಕಾರದ ದಿ:16–4–2005 ರ ಆದೇಶದಲ್ಲಿ ವಾಹನದ ನೋಂದಣಿ ಮಾಲೀಕರಾಗಿದ್ದ ದಿನೇಶ್, ಬಿನ್:ದಿ.ಸೋಮಪ್ಪ ಸಫಲಿಗ, ಅರ್ಕುಳ ಮನೆ, ಅರ್ಕುಳ ಗ್ರಾಮ, ಫರಂಗಿಪೇಟೆ, ಮಂಗಳೂರು ತಾಲೂಕು ಇವರ ಸುಪರ್ಧಿಗೆ ರೂ.27,000/– ಬ್ಯಾಂಕ್ ಗ್ಯಾರಂಟಿ ಆಧಾರದ ಮೇಲೆ ಹಾಗೂ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗೆ ಉಪಯೋಗಿಸಬಾರದೆಂಬ ಷರತ್ತುಗಳನ್ವಯ ಅರ್ಜಿದಾರರ ವಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ. ಈ ಮಧ್ಯೆ ವಾಹನದ ಮಧ್ಯಂತರ ಸುಪರ್ಧಿಯನ್ನು

ಹೊಂದಿರುವ ವಾಹನ ಮಾಲೀಕರು,ಸದರಿ ವಾಹನದಲ್ಲಿ ಅಂದರೆ ಅಂಬಾಸಿಡರ್ ಕಾರು ನೋಂದಣಿ ಸಂಖ್ಯೆ: ಸಿಆರ್‌ಎಕ್ಸ್–6729 ಇದನ್ನು ಪುನ: ದಿ:14–11–2005 ರಂದು ಸುಮಾರು 340 ಲೀಟರ್ ಶೇಂದಿಯನ್ನು ಅಕ್ರಮವಾಗಿ ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಅಬಕಾರಿ ನಿರೀಕ್ಷಕರು ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ: 1/2005–06 ರಂತೆ ಪ್ರಕರಣವನ್ನು ನೋಂದಾಯಿಸಿ ವಾಹನವನ್ನು ಜಪ್ತುಪಡಿಸಿರುತ್ತಾರೆ. ಆರೋಪಿಗಳು ಮಧ್ಯಂತರ ಸುಪರ್ಧಿ ಹೊಂದಿದ ವಾಹನವನ್ನು ಅಕ್ರಮ ಶೇಂದಿ ಸಾಗಾಟಕ್ಕೆ ಉಪಯೋಗಿಸಿರುವುದು ಹಾಗೂ ವಾಹನದ ಮಧ್ಯಂತರ ಬಿಡುಗಡೆಯಲ್ಲಿ ವಿಧಿಸಿರುವ ಷರತ್ತುಗಳನ್ನು ವಾಹನದ ನೋಂದಾಯಿತ ಮಾಲೀಕರು ಉಲ್ಲಂಘಿಸಿರುವುದು ಸ್ಪಷ್ಟವಾಗಿರುವುದರಿಂದ ಹಾಗೂ ಈ ಎರಡು ಪ್ರಕರಣಗಳಲ್ಲಿ ವಾಹನದ ಮಾಲೀಕರೇ ಖುದ್ದಾಗಿ ಶೇಂದಿ ಸಾಗಾಟ ಮಾಡಿರುವುದು ದೃಢಪಟ್ಟಿರುವುದರಿಂದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಂಎನ್‌ಜಿ/ಇ.ಐ.ಬಿ/ಡಿಟಿಸಿಆರ್/254/2005–06 ದಿ:15–3–2006 ರಂದು ಅರ್ಜಿದಾರರು ಅವರ ಪರ ವಕೀಲರ ಮುಖಾಂತರ ದಿ:6–1–2006 ರಂದು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂ:ಸಿಆರ್‌ಎಕ್ಸ್–6729 ರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಹಾಜರಾತಿ ನೋಟೀಸುಗಳನ್ನು ಹಾಗೂ ರಕ್ಷಣಾ ಪರ ವಾಹನ ಮಾಲೀಕರಿಗೆ ಹಾಗೂ ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಿ ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:14–11–2005 ರಂದು ಅಂಬಾಸಿಡರ್ ಕಾರು ಸಂ:ಸಿಆರ್‌ಎಕ್ಸ್–6729 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆದ ಶ್ರೀ.ದಿನಕರ, ನಿವೃತ್ತ ಅಬಕಾರಿ ಮುಖ್ಯ ರಕ್ಷಕ ಇವರು ದಿ:17–10–2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ಅವರು ಅಬಕಾರಿ ನಿರೀಕ್ಷಕರಿಂದ ದಿ:22–2–06 ರಂದು ಪ್ರಕರಣಕ್ಕೆ ಸಂಬಂಧಿಸಿದ 13 ಮಾದರಿ ಸೀಸೆಗಳನ್ನು ಹಾಗೂ ಕೋರಿಕೆ ಪತ್ರವನ್ನು ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ. ಅವರಿಂದ ದಿ:1–3–2006 ರಂದು ವರದಿ ಹಾಗೂ ವಿಶ್ಲೇಷಣೆಗೆ ಒಳಪಡಿಸಿದ ಮಾದರಿ ಬಾಟಲ್‌ಗಳನ್ನು ಪಡೆದು ಅಬಕಾರಿ ನಿರೀಕ್ಷಕರಿಗೆ ತಲುಪಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ, ಪಾಟೀ ಸವಾಲು ಇಲ್ಲವೆಂದು ಅಂದಿನ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಅಮರನಾಥ.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ–2 ಇವರು ದಿ:29–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು ದಿ:5–8–2003 ರಿಂದ ದಿ:16–7–2006 ರ ತನಕ ಬಂಟ್ವಾಳ ಉಪ ವಿಭಾಗದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಗೆ ದಿ:14–11–2005 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ತಾಲೂಕು ಬಿ.ಸಿ.ರೋಡ್–ಧರ್ಮಸ್ಥಳ ಹಾಗೂ ಪುತ್ತೂರು ಕೂಡು ರಸ್ತೆಯ ಜಂಕ್ಷನ್ ಬಳಿ ತನ್ನ ಸರಕಾರಿ ವಾಹನದಲ್ಲಿ ಸಿಬ್ಬಂದಿ ಸಮೇತ ರಸ್ತೆಗಾವಲು ನಡೆಸುತ್ತಿದ್ದು ಹಾಗೂ ಸಂಶಯಾಸ್ಪದ ವಾಹನಗಳನ್ನು ತಪಾಸಣೆ ಮಾಡುತ್ತಿದ್ದು, ಸದರಿ ಸಮಯದಲ್ಲಿ ಪಾಣೆಮಂಗಳೂರು ಕಡೆಯಿಂದ ಮಂಗಳೂರು ಕಡೆಗೆ ಒಂದು ಕಾಫಿ ಬಣ್ಣದ ಅಂಬಾಸಿಡರ್ ಕಾರು ಸಂಖ್ಯೆ:ಸಿಆರ್‌ಎಕ್ಸ್–6729 ಬರುತ್ತಿರುವುದನ್ನು ಕಂಡು ವಾಹನವನ್ನು ತಪಾಸಣೆಗೆಂದು ನಿಲ್ಲಿಸಲು ಸೂಚನೆ ನೀಡಿದ್ದು, ಆಗ ವಾಹನ ಚಾಲಕನು ನಿಲ್ಲಿಸದೆ ಸ್ವಲ್ಪ ಮುಂದಕ್ಕೆ ಚಲಾಯಿಸಿದನು. ತಕ್ಷಣ ತಮ್ಮ ಇಲಾಖಾ ಜೀಪಿನಲ್ಲಿ ವಾಹನವನ್ನು ಬೆನ್ನಟ್ಟಿ ಬಿ.ಸಿ.ರೋಡ್ ಬಸ್‌ಸ್ಟ್ಯಾಂಡ್ ರಸ್ತೆಯ

ಎಡಬದಿಯಲ್ಲಿ ವಾಹನವನ್ನು ನಿಲ್ಲಿಸಿದನು. ಕಾರನ್ನು ಪರಿಶೀಲಿಸಿದಾಗ, ಅದರಲ್ಲಿ ಚಾಲಕನು ಮಾತ್ರ ಇದ್ದು, ಚಾಲಕನನ್ನು ವಿಚಾರಿಸಿದಾಗ ವಾಹನದಲ್ಲಿ ಶೇಂದಿ ತುಂಬಿದ 13 ಕ್ಯಾನುಗಳಿದ್ದು, ಶೇಂದಿಯನ್ನು ಶಂಭೂರಿನಿಂದ ಮಂಗಳೂರು ಕಡೆಗೆ ಮಾರಾಟ ಮಾಡಲೆಂದು ಸಾಗಾಟ ಮಾಡಿರುವುದಾಗಿ, ಈ ಬಗ್ಗೆ ಪರವಾನಿಗೆ ಇದೆಯೇ ಎಂದು ವಿಚಾರಿಸಿದಾಗ, ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲದ ಕಾರಣ ಅಕ್ರಮವಾಗಿ 13 ಕ್ಯಾನುಗಳಲ್ಲಿ ಸಾಗಿಸಲಾಗುತ್ತಿದ್ದ ಸುಮಾರು 340 ಲೀಟರ್ ಶೇಂದಿಯನ್ನು ವಶಪಡಿಸಿಕೊಂಡು ಪ್ರತಿ ಕ್ಯಾನಿನಿಂದ ರಾಸಾಯನಿಕ ಪರೀಕ್ಷೆಗಾಗಿ 750 ಎಂ.ಎಲ್.ನ 13 ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ಶೇಂದಿಯನ್ನು ತುಂಬಿಸಿ, ಅವುಗಳಿಗೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಮೊಹರು ಮಾಡಿ ಗುರುತಿನ ಚೀಟಿಯನ್ನು ಅಂಟಿಸಲಾಯಿತು. ವಾಹನದ ಚಾಸೀಸ್ ನಂಬರು ಹಾಗೂ ಇಂಜೀನ್ ನಂಬರನ್ನು ಮಹಜರಿನಲ್ಲಿ ನಮೂದಿಸಿ, ಸ್ಥಳದಲ್ಲಿಯೇ ಸೊತ್ತುಗಳ ಪಟ್ಟಿ ತಯಾರಿಸಿ ಅಕ್ರಮ ಶೇಂದಿ ಹಾಗೂ ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಆರೋಪಿಯನ್ನು ಸ್ಥಳದಲ್ಲಿಯೆ ದಸ್ತಗಿರಿ ಮಾಡಿ ಮಹಜರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ನಂತರ ಜಪ್ತುಪಡಿಸಲಾದ ಶೇಂದಿ ಹಾಗೂ ವಾಹನವನ್ನು ವಶಪಡಿಸಿಕೊಂಡು ಕಚೇರಿಗೆ ಬಂದು ಪ್ರಥಮ ಮಾಹಿತಿ ವರದಿ ಸಂಖ್ಯೆ:1/2005–06 ದಿ:14–11–2005 ರಂದು ಮೊಕದ್ದಮೆಯನ್ನು ದಾಖಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಮಹಜರನ್ನು ನಿಶಾನೆ ಪಿ–1 ಎಂದು, ಅದರಲ್ಲಿ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು, ಕಲಂ 43ಎ ರಡಿಯಲ್ಲಿ ತಯಾರಿಸಿರುವ ಸೊತ್ತುಗಳ ಬಗ್ಗೆ ಪಟ್ಟಿಯನ್ನು ನಿಶಾನೆ ಪಿ–3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು. ವಾಹನದ ಮಾಲೀಕತ್ವದ ಬಗ್ಗೆ ಆರ್.ಟಿ.ಓ. ಮಂಗಳೂರು ಇವರಿಗೆ ಮಾಹಿತಿ ಪತ್ರ ಬರೆದಿದ್ದು, ಅದಕ್ಕೆ ಪೂರಕವಾಗಿ ಬಿ ವರದಿಯನ್ನು ಪಡೆದಿರುತ್ತೇನೆ. ಸಾರಿಗೆ ಅಧಿಕಾರಿಯವರಿಗೆ ಬರೆದ ಪತ್ರವನ್ನು ನಿಶಾನೆ ಪಿ–4 ಎಂದು, ವಾಹನದ ಬಿ ವರದಿಯನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಯು ವಾಹನದ ಆರ್.ಸಿ. ಮಾಲೀಕರೆಂದು ಖಚಿತವಾಗಿರುತ್ತದೆ. ಅವರನ್ನು ದಿ:14–11–2005 ರಂದು ರಿಮಾಂಡ್ ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ತನ್ನ ರಕ್ಷಕನ ಮೂಲಕ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ಅವರಲ್ಲಿ ಕೊಟ್ಟ ಕೋರಿಕೆ ಪತ್ರವನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–6ಎ ಎಂದು ಗುರುತಿಸಲಾಯಿತು. ಮಾದರಿ ಮೊಹರಿನ ಚೀಟಿಯನ್ನು ನಿಶಾನೆ ಪಿ–7 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–7ಎ ಎಂದು ಗುರುತಿಸಲಾಯಿತು. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಚಾಲಕ ಹಾಗೂ ವಾಹನದ ಮಾಲೀಕನಾದ ಶ್ರೀ.ದಿನೇಶ್ ಇವರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ರಾಸಾಯನಿಕ ತಜ್ಞರ ವರದಿಯನ್ನು ನಿಶಾನೆ ಪಿ–8 ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ–9 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–9ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು. ಪ್ರಾ.ಸಾ:2 ಇವರು ನೀಡಿರುವ ಸಾಕ್ಷಿ ಹೇಳಿಕೆಯು ಮಹಜರಿನಲ್ಲಿ ನಮೂದಿಸಿದ ಅಂಶಗಳಿಗೆ ಒಂದಕ್ಕೊಂದು ಪೂರಕವಾಗಿದ್ದು, ಇದರಲ್ಲಿ ವಾಹನದ ಮಾಲೀಕರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:14–11–2005 ರಂದು ಜಪ್ತುಪಡಿಸಿಕೊಂಡಿರುವ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ರಲ್ಲಿ ಅಕ್ರಮವಾಗಿ 13 ಕ್ಯಾನುಗಳಲ್ಲಿ 340 ಲೀಟರ್ ಶೇಂದಿಯನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ,ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸುಗಳನ್ನು ಹಾಗೂ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ಸದರಿ ನೋಟೀಸುಗಳು ಅವರಿಂದ ಸ್ವೀಕೃತಿಯಾಗಿದ್ದು, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರು ಈ ಪ್ರಾಧಿಕಾರದ ಮುಂದೆ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ಹಾಗೂ ಹಾಜರಾತಿ ನೋಟೀಸಿಗೆ ಅನುಗುಣವಾಗಿ ಈ ಪ್ರಾಧಿಕಾರದ ಮುಂದೆ ತನ್ನ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣಕ್ಕೆ ಮತ್ತು ಪತ್ತೆಯಾಗಿರುವ ಆರೋಪಿಯು ವಾಹನದ ಮಾಲೀಕರಾಗಿದ್ದು, ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಶೇಂದಿಯನ್ನು ಸಾಗಿಸಿರುವುದು ಘಟನೆಯಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ,ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಾಖಲಿಸಿರುವ ಪ್ರಕರಣದಲ್ಲಿ, ವಾಹನದ ಮಾಲೀಕರೇ ಅಕ್ರಮವಾಗಿ 340 ಲೀಟರ್ ಶೇಂದಿಯನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಶೇಂದಿ ಎಂದು ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ನ್ನು ವಶಪಡಿಸಿಕೊಂಡು ಸುಮಾರು 3 ವರ್ಷ 10 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಅರ್ಜಿದಾರರು ಹಾಗೂ ಅವರ ಪರ ವಕೀಲರಿಗೆ ಹಲವು ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ಅವುಗಳನ್ನು ಸ್ವೀಕರಿಸಿರುವ ಆರ್.ಸಿ. ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗದಿರುವ ಕಾರಣ, ತಕ್ಷೀರು ದಾಖಲಿಸಿದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ನೀಡಿದ ಹೇಳಿಕೆಗಳಿಗೆ ಯಾವುದೇ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ಅವರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ವಾಹನದ ಮಾಲೀಕರು ತನ್ನ ವಾಹನದಲ್ಲಿ ಶೇಂದಿ ಸಾಗಾಟ ಮಾಡದಿರುವ ಬಗ್ಗೆ ಹಾಜರಾಗಿ ಯಾವುದೇ ನೈಜ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಾಹನದ ಮಾಲೀಕರೇ ಖುದ್ದಾಗಿ ತನ್ನ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಟ ಮಾಡಿರುವುದು ಫಿರ್ಯಾದುದಾರರ ಹೇಳಿಕೆ ಹಾಗೂ ದಾಖಲಾತಿಗಳಿಂದ ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಇದಲ್ಲದೆ ತಕ್ಷೀರಿನಲ್ಲಿ ಒಳಗೊಂಡ ವಾಹನವನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ, ಮಂಗಳೂರು ಇವರ ಪ್ರಥಮ ಮಾಹಿತಿ ವರದಿ ಸಂ: 36/2004–05 ದಿ:24–3–2005 ರ ಮೊಕದ್ದಮೆಯಲ್ಲಿ ಈ ಮೊದಲೇ ದಿ:24–3–2005 ರಂದು ಜಪ್ತು ಮಾಡಿದ್ದು, ಪ್ರಾಧಿಕಾರದ ದಿ:16–4–2005 ರ ಆದೇಶದಲ್ಲಿ ವಾಹನದ ನೋಂದಣಿ ಮಾಲೀಕರಾಗಿದ್ದ ದಿನೇಶ್, ಬಿನ್:ದಿ.ಸೋಮಪ್ಪ ಸಫಲಿಗ, ಅರ್ಕುಳ ಮನೆ, ಅರ್ಕುಳ ಗ್ರಾಮ, ಫರಂಗಿಪೇಟೆ, ಮಂಗಳೂರು ತಾಲೂಕು ಇವರ ಸುಪರ್ಧಿಗೆ ರೂ.27,000/– ಬ್ಯಾಂಕ್ ಗ್ಯಾರಂಟಿ ಆಧಾರದ ಮೇಲೆ ಹಾಗೂ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗೆ ಉಪಯೋಗಿಸಬಾರದೆಂಬ ಷರತ್ತುಗಳನ್ವಯ ಅರ್ಜಿದಾರರ ವಶಕ್ಕೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ. ಈ ಮಧ್ಯೆ ವಾಹನದ ಮಧ್ಯಂತರ ಸುಪರ್ಧಿಯನ್ನು ಹೊಂದಿರುವ ವಾಹನ ಮಾಲೀಕರು,ಸದರಿ ವಾಹನದಲ್ಲಿ ಅಂದರೆ ಅಂಬಾಸಿಡರ್ ಕಾರು ನೋಂದಣಿ ಸಂಖ್ಯೆ: ಸಿಆರ್‌ಎಕ್ಸ್–6729 ಇದನ್ನು ಪುನ: ದಿ:14–11–2005 ರಂದು ಸುಮಾರು 340 ಲೀಟರ್ ಶೇಂದಿಯನ್ನು ಅಕ್ರಮವಾಗಿ ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಅಬಕಾರಿ ನಿರೀಕ್ಷಕರು ಬಂಟ್ವಾಳ ಉಪ ವಿಭಾಗ ಇವರ ತಕ್ಷೀರು ಸಂಖ್ಯೆ: 1/2005–06 ರಂತೆ ಪ್ರಕರಣವನ್ನು ನೋಂದಾಯಿಸಿ ವಾಹನ ಮಾಲೀಕರನ್ನು ವಾಹನದೊಂದಿಗೆ ಅಪರಾಧ ಸ್ಥಳದಲ್ಲಿ ದಸ್ತಗಿರಿ ಮಾಡಿರುತ್ತಾರೆ. ಮಧ್ಯಂತರ ಸುಪರ್ಧಿ ಹೊಂದಿದ ವಾಹನವನ್ನು ಅಕ್ರಮ ಶೇಂದಿ ಸಾಗಾಟಕ್ಕೆ ಉಪಯೋಗಿಸಿರುವುದು ಹಾಗೂ ವಾಹನದ ಮಧ್ಯಂತರ ಬಿಡುಗಡೆಯಲ್ಲಿ ವಿಧಿಸಿರುವ ಷರತ್ತುಗಳನ್ನು ವಾಹನದ ನೋಂದಾಯಿತ ಮಾಲೀಕರು ಉಲ್ಲಂಘಿಸಿರುವುದು ಸ್ಪಷ್ಟವಾಗಿರುವುದರಿಂದ ಹಾಗೂ ಈ ಎರಡು ಪ್ರಕರಣಗಳಲ್ಲಿ ವಾಹನದ ಮಾಲೀಕರೇ ಖುದ್ದಾಗಿ ಶೇಂದಿ ಸಾಗಾಟ ಮಾಡಿರುವುದು ದೃಢಪಟ್ಟಿರುವುದರಿಂದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಂಎಸ್‌ಜಿ/ಇ.ಐ.ಬಿ/ಡಿಟಿಸಿಆರ್/254/2005–06 ದಿ:15–3–2006 ರಂದು ಅರ್ಜಿದಾರರು ಅವರ ಪರ ವಕೀಲರ ಮುಖಾಂತರ ದಿ:6–1–2006 ರಂದು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿರುತ್ತಾರೆ. ಮೂರ್ತೆದಾರರ ಸೇವಾ ಸಹಕಾರಿ ಸಂಘ ನಿಯಮಿತ, ದೇರೆಬೈಲ್, ಕೊಂಚಾಡಿ, ಮಂಗಳೂರು ಇದರ ಅಧ್ಯಕ್ಷರು ದಿ:17–11–2005 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ಒಳಗೊಂಡ ವಾಹನವನ್ನು ಕಾರಣಾಂತರದಿಂದ ಯಾವುದೇ ಪರವಾನಿಗೆ ಸಿಗದಿರುವ ಕಾರಣಕ್ಕೆ ಸಜಿಪಮುನ್ನೂರು ಸೇವಾ ಸಹಕಾರಿ ಸಂಘದಿಂದ ದೇರೆಬೈಲ್ ಕೊಂಚಾಡಿ ಸೇವಾ ಸಹಕಾರಿ ಸಂಘಕ್ಕೆ ಶೇಂದಿಯನ್ನು ಸಾಗಾಟ ಮಾಡಿರುವುದು ಎಂದು ಒಪ್ಪಿಕೊಂಡಿರುತ್ತಾರೆ. ಆದುದರಿಂದ ವಾಹನದ ಮಾಲೀಕರು ಅಕ್ರಮ ಶೇಂದಿಯನ್ನು ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರನ್ನು ಈಗಾಗಲೇ ಮೂರು ವರ್ಷ 10 ತಿಂಗಳು ಕಳೆದಿದ್ದು, ವಾಹನದ ಮಾಲೀಕರಿಗೆ ತಕ್ಷೀರು ನಡೆಸಲು ಉತ್ಸುಕರಾಗಿಲ್ಲ ಎಂಬ ಕಾರಣಕ್ಕೆ ಹಾಗೂ ಅಂಬಾಸಿಡರ್ ಕಾರಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆಯಿಲ್ಲದೆ 13 ಕ್ಯಾನುಗಳಲ್ಲಿ 340 ಲೀಟರ್ ಶೇಂದಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವ ಕಾರಣಕ್ಕೆ, ಅಕ್ರಮ ಶೇಂದಿ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/254/ಡಿಟಿಸಿಆರ್/2005–06, ದಿನಾಂಕ:29ನೇ ಅಕ್ಟೋಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂ:1/2005–06 ದಿ:14–11–2005 ರಲ್ಲಿ ಜಪ್ತುಪಡಿಸಿರುವ ಅಂಬಾಸಿಡರ್ ಕಾರು ಸಂಖ್ಯೆ: ಸಿಆರ್‌ಎಕ್ಸ್–6729 ನ್ನು (ಇಂಜೀನ್ ನಂ: 6ಇಡಿ–045546 ಮತ್ತು ಚಾಸೀಸ್ ನಂ: ಎಎಂಬಿಪಿಡಿಎಕ್ಸ್ 111–596968) ನಿಯಮ 43(ಎ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:29–10–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ದಿನಕರ, ನಿವೃತ್ತ ಅಬಕಾರಿ ಮುಖ್ಯ ರಕ್ಷಕ.

ಪ್ರಾ.ಸಾ–2: ಶ್ರೀ.ಅಮರನಾಥ.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ–2.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರು
ನಿಶಾನೆ ಪಿ–1A : ಮಹಜರಿನಲ್ಲಿರುವ ಫಿರ್ಯಾದುದಾರರ ಸಹಿ.
ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ.
ನಿಶಾನೆ ಪಿ–2 A : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ–3 : ಕಲಂ 43ರಡಿಯಲ್ಲಿ ದಾಖಲಿಸಿದ ವರದಿ.
ನಿಶಾನೆ ಪಿ–3 A : ಕಲಂ 43 ರಡಿಯಲ್ಲಿ ದಾಖಲಿಸಿದ ವರದಿಯಲ್ಲಿ ಫಿರ್ಯಾದುದಾರರ ಸಹಿ.
ನಿಶಾನೆ ಪಿ–4 : ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಬರೆದ ಪತ್ರ.
ನಿಶಾನೆ ಪಿ–5 : ಬಿ ಎಕ್ಸ್‌ಟ್ರ್ಯಾಕ್ಟ್ ವರದಿ.
ನಿಶಾನೆ ಪಿ–6 : ಕೋರಿಕೆ ಪತ್ರ.
ನಿಶಾನೆ ಪಿ–6ಎ : ಕೋರಿಕೆ ಪತ್ರದಲ್ಲಿರುವ ತನಿಖಾಧಿಕಾರಿಯವರ ಸಹಿ.
ನಿಶಾನೆ ಪಿ–7 : ಫಿರ್ಯಾದುದಾರರು ತಯಾರಿಸಿದ ಮಾದರಿ ಮೊಹರಿನ ಚೀಟಿ.
ನಿಶಾನೆ ಪಿ–7ಎ : ಫಿರ್ಯಾದುದಾರರು ತಯಾರಿಸಿದ ಮಾದರಿ ಮೊಹರಿನ ಚೀಟಿಯಲ್ಲಿರುವ ತನ್ನ ಸಹಿ.
ನಿಶಾನೆ ಪಿ–8 : ರಾಸಾಯನಿಕ ವಿಶ್ಲೇಷಕರ ವರದಿ.
ನಿಶಾನೆ ಪಿ–9 : ಸೊತ್ತುಗಳ ಪಟ್ಟಿ.
ನಿಶಾನೆ ಪಿ–9ಎ : ಸೊತ್ತುಗಳ ಪಟ್ಟಿಯಲ್ಲಿ ಫಿರ್ಯಾದುದಾರರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1193

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/403/ಡಿಟಿಸಿಆರ್/2008-09, ದಿನಾಂಕ:20ನೇ ಅಕ್ಟೋಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿ:**
ಅಬಕಾರಿ ಉಪ ನಿರೀಕ್ಷಕರು(1)	ಬ್ರಿಜೇಶ್,ಬಿನ್: ಭಾಸ್ಕರ ಎಂ,ಅಡಂಮನೆ,
ಮಂಗಳೂರು ದಕ್ಷಿಣ ವಲಯ-II	ಮನೆ ಸಂ:2-22,ಅಂಬ್ಲಮೊಗರು ಗ್ರಾಮ,
ಮಂಗಳೂರು.	ಮಂಗಳೂರು ತಾಲೂಕು

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(1),ಮಂಗಳೂರು ದಕ್ಷಿಣ ವಲಯ-II, ಮಂಗಳೂರು ಇವರು ತಮ್ಮ ಸಿಬ್ಬಂದಿಯವರೊಂದಿಗೆ ದಿ:3-6-2009ರಂದು ಪೂರ್ವಾಹ್ನ 5-45 ಗಂಟೆ ಸಮಯಕ್ಕೆ ಮಂಗಳೂರು ತಾಲೂಕಿನ ಸೋಮೇಶ್ವರ ಗ್ರಾಮದ ಉಚ್ಚಿಲದಿಂದ ನಾಟೇಕಲ್‌ಗೆ ಹೋಗುವ ರಸ್ತೆಯಲ್ಲಿ ಉಚ್ಚಿಲ ಅಜ್ಜಿನಡ್ಕ ಎಂಬಲ್ಲಿ ರಸ್ತೆ ಬದಿಯಲ್ಲಿ ರಸ್ತೆಗಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಬಂದ ಖಚಿತ ವರ್ತಮಾನದ ಮೇರೆಗೆ ನಾಟೇಕಲ್‌ನಿಂದ ಉಚ್ಚಿಲಕ್ಕೆ ಮುಖ ಮಾಡಿಕೊಂಡು ಬರುತ್ತಿರುವ ಒಂದು ಕೆಂಪು ಬಣ್ಣದ ನೊಂದಣಿ ಸಂ:KA-15-A-2435 ಇರುವ ಮಾರುತಿ 800 ಕಾರನ್ನು ತಪಾಸಣೆಗಾಗಿ ತಡೆದು ನಿಲ್ಲಿಸಲು ಸೂಚಿಸಿದಾಗ, ಕಾರಿನ ಚಾಲಕನು ಕಾರಿನ ಬಾಗಿಲನ್ನು ತೆರೆದು ಓಡಿದನು, ಅವನನ್ನು ಬೆನ್ನಟ್ಟಿದರೂ ಸದ್ರಿ ವ್ಯಕ್ತಿಯು ಗಿಡ ಮತ್ತು ಪೊದೆಗಳ ಮರೆಯಲ್ಲಿ ಓಡಿ ಪರಾರಿಯಾದನು.ವಾಹನವನ್ನು ತಪಾಸಣೆ ಮಾಡಲು ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯವಕಾಶವಿಲ್ಲದ ಕಾರಣ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 54ರ ಪ್ರಕಾರ ಕಾರಣಗಳನ್ನು ನಮೂದಿಸಿ ಶೋಧನೆಗೆ ಸಮುಚಿತ ಆಧಾರವನ್ನು ದಾಖಲಿಸಿ ಕೊಂಡು, ಸದ್ರಿ ಕಾರನ್ನು ಶೋಧಿಸಿದಾಗ ಕಾರಿನ ಹಿಂದಿನ ಸೀಟು ಮತ್ತು ಸೀಟಿನ ಕೆಳಗಡೆ ಒಂದರ ಮೇಲೊಂದರಂತೆ ರಟ್ಟಿನ ಪೆಟ್ಟಿಗೆಗಳಿದ್ದು, ಪೆಟ್ಟಿಗೆಗಳನ್ನು ಪರಿಶೀಲಿಸಲಾಗಿ ಒಟ್ಟು 20 ರಟ್ಟಿನ ಪೆಟ್ಟಿಗೆಗಳಲ್ಲಿ 180 ಮಿಲಿಯ ತಲಾ 48 ಬಾಟಲಿಗಳಂತೆ ಒಟ್ಟು 960 ಬಾಟಲಿಗಳಲ್ಲಿ 172.800 ಲೀ ಮದ್ಯ ಇರುವುದನ್ನು ಪತ್ತೆಹಚ್ಚಿ, ನಂತರ ಕಾರನ್ನು ಪರಿಶೀಲಿಸಲಾಗಿ ಕಾರು ಮಾರುತಿ ಸುಜುಕಿ 800 ಕಂಪನಿಯದ್ದಾಗಿದ್ದು, ಚಾಸೀಸ್ ಸಂ:SB-308-IN-2242746 ಮತ್ತು ಇಂಜಿನ್ ಸಂ: F8B-IN-3247201 ಆಗಿರುತ್ತದೆ. ಮತ್ತು ಮದ್ಯ ಸಾಗಾಣಿಕೆ ಬಗ್ಗೆ ಹಾಗೂ ವಾಹನದ ಬಗ್ಗೆ ಯಾವುದೇ ದಾಖಲಾತಿಗಳು ವಾಹನದಲ್ಲಿ ಪತ್ತೆಯಾಗಿರುವುದಿಲ್ಲ. ಪತ್ತೆಯಾದ ಮದ್ಯದ ಬಾಟಲಿಗಳಿಗೆ ಭದ್ರತಾ ಚೀಟಿ ಅಂಟಿಸದೇ ಇರುವುದರಿಂದ ಇದು ನಕಲಿ ಮದ್ಯ ಸಾಗಾಣಿಕೆ ಎಂದು ಮನವರಿಕೆಯಾಗಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,13,14 ರ ಪ್ರಕಾರ ಅಪರಾಧವಾಗಿದ್ದು ಮತ್ತು 32,38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸೊತ್ತು ಮತ್ತು ವಾಹನವನ್ನು ಜಪ್ತು ಮಾಡಿ ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ಜಪ್ತು ಪಡಿಸಿದ ಮದ್ಯದಿಂದ 180 ಎಂ ಎಲ್ ನ 40 ಬಾಟಲಿಗಳನ್ನು ಮಾದರಿಯಾಗಿ ಪ್ರತ್ಯೇಕಿಸಿ ತೆಗೆದು ಪರಾರಿಯಾದ ವ್ಯಕ್ತಿಯ ಮುಖ ಪರಿಚಯ ಹಾಗೂ ದೊರೆತ ಮಾಹಿತಿ ಪ್ರಕಾರ ಬ್ರಿಜೇಶ್, ಬಿನ್:ದಿ:ಭಾಸ್ಕರ ಎಂ, 26 ವರ್ಷ, ಅಡಂಮನೆ, ಮನೆ ನಂ:2-22, ಅಂಬ್ಲಮೊಗರು ಗ್ರಾಮ, ಮಂಗಳೂರು ತಾಲೂಕು ಇವನ ವಿರುದ್ದ ತಕ್ಷೀರು ಸಂಖ್ಯೆ:9/09-10, ದಿ:3-6-2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು, ಘನ ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿಯನ್ನು ಒಪ್ಪಿಸಿ ನಂತರ ಜಪ್ತುಪಡಿಸಿದ ಸೊತ್ತುಗಳನ್ನು ಅಂತಿಮ ವರದಿ ಸಲ್ಲಿಸುವ ತನಕ ತನ್ನ ವಶ ದಲ್ಲಿಯೇ ಇಟ್ಟುಕೊಳ್ಳಲು ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ ಜಿಲ್ಲೆ ಮಂಗಳೂರು ಇವರ ಪ್ರಾಧಿಕಾರದಲ್ಲಿ ಅನುಮತಿಯನ್ನು ಕೋರಿದ ಮೇರೆಗೆ ದಿ:8-6-2009ರಂದು ಅನುಮತಿಯನ್ನು ನೀಡಲಾಗಿರುತ್ತದೆ.

ಮೊಕದ್ದಮೆ ಪತ್ತೆ ಹಚ್ಚಿ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ದಕ್ಷಿಣ ವಲಯ-II, ಮಂಗಳೂರು ಇವರು ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿ ಕೊಂಡ ಮದ್ಯದಿಂದ ತೆಗೆಯಲಾದ 40 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ಸದ್ರಿ ಮಾದರಿಗಳನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ ಮಂಗಳೂರುರವರ ಪತ್ರ ಸಂ:230-40, ದಿ:2-7-2009ರ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ 39.0% ಇರುವುದಾಗಿ ಹಾಗೂ ಮದ್ಯವು ಕೆಟ್ಟ ವಾಸನೆಯಿಂದ ಕೂಡಿದ್ದು, ಇದು ಮಾನವನ ಸೇವನೆಗೆ ಯೋಗ್ಯವಾಗಿರುವುದಿಲ್ಲವೆಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.ಸದ್ರಿ ವಿಶ್ಲೇಷಣಾ ವರದಿಯೊಂದಿಗೆ ಪ್ರಕರಣದ ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು(1)ಮಂಗಳೂರು ದಕ್ಷಿಣ ವಲಯ-II ಇವರು ದಿ:29-8-2009ರಂದು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ, ಉಳಿದ 172.800 ಲೀ. ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅದೇಶ ನೀಡಬೇಕಾಗಿ ಕೋರಿರುತ್ತಾರೆ. ಆ ಪ್ರಕಾರ ಜಪ್ತುಪಡಿಸಿಕೊಂಡ 172.800 ಲೀ

ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಪ್ರಸ್ತುತ ಸರ್ಕಾರದ ಅಧಿಸೂಚನೆಯಂತೆ ನಾಶಪಡಿಸಲು ದಿ:22–9–2009ರಂದು ಪ್ರಾಧಿಕಾರದಿಂದ ಆದೇಶಿಸಲಾಗಿರುತ್ತದೆ.

ತನಿಖಾದಿಕಾರಿಗಳು ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಗಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ,ಸಾಗರ,ಶಿವಮೊಗ್ಗ ಜಿಲ್ಲೆ ಇವರಿಗೆ ಪತ್ರ ಬರೆದಿದ್ದು,ಈ ಬಗ್ಗೆ ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ದಿ:7–8–2009ರಂದು ನೀಡಿದ ವರದಿಯಲ್ಲಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಂತೆ ನೊಂದಣಿ ಸಂ:KA-15-A-2435 ಇರುವ ಯಾವುದೇ ವಾಹನಗಳು ತಮ್ಮ ಕಛೇರಿಯಲ್ಲಿ ನೊಂದಾಣಿಯಾಗಿರುವುದಿಲ್ಲವೆಂದು ದೃಢೀಕರಿಸಿ ರುವುದು ಕಂಡು ಬಂದಿದ್ದು,ಸದ್ರಿ ವರದಿಯ ಪ್ರತಿಯನ್ನು ಪ್ರಾದಿಕಾರಕ್ಕೆ ಸಲ್ಲಿಸಿರುತ್ತಾರೆ. ಹಾಗೂ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯಲು ಅಸಾಧ್ಯವಾದ ಹಿನ್ನಲೆಯಲ್ಲಿ ವಾಹನದ ಮಾಲೀಕರನ್ನು ಪತ್ತೆಹಚ್ಚುವುದು ಕಷ್ಟಸಾಧ್ಯವಾದುದರಿಂದ ಹಾಗೂ ವಾಹನದ ಬಗ್ಗೆ ಯಾರೊಬ್ಬರೂ ಬೇಡಿಕೆ ಸಲ್ಲಿಸದೇ ಇರುವುದರಿಂದ ಸದ್ರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ದಿ:29–8–2009ರ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಕರಣದ ಮುಟ್ಟುಗೋಲು ನಡವಳಿ ಪ್ರಕ್ರಿಯೆ ನಡೆಸುವ ಪೂರ್ವದಲ್ಲಿ ಪ್ರಕರಣದ ಅರೋಪಿತ ವ್ಯಕ್ತಿಯಾದ ಬ್ರಿಜೇಶ್,ಬಿನ್:ದಿ:ಭಾಸ್ಕರ ಎಂ, 26 ವರ್ಷ ,ಅಡಂಮನೆ, ಮನೆ ನಂ:2–22, ಅಂಬ್ಲಮೊಗರು ಗ್ರಾಮ, ಮಂಗಳೂರು ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ದಿ:22–9–2009 ರಂದು ನೊಂದಾಯಿತ ಅಂಚೆಯ ಮೂಲಕ ಈ ಪ್ರಾದಿಕಾರದಿಂದ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸನ್ನು ಪ್ರಕರಣದ ತನಿಖಾದಿಕಾರಿಗಳು ದಿ:6–10–2009ರಂದು ಖುದ್ದಾಗಿ ಅರೋಪಿತ ವ್ಯಕ್ತಿಗೆ ಜ್ಯಾರಿಗೊಳಿಸಿರುತ್ತಾರೆ. ಹಾಗೂ ನೊಂದಣಿ ಅಂಚೆಯ ಮೂಲಕ ಕಳುಹಿಸಲಾದ ಸದ್ರಿ ನೋಟಿಸು ಅರೋಪಿತ ವ್ಯಕ್ತಿಗೆ ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸು ಈ ಕಛೇರಿಗೆ ಬಂದಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತು ಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:3–6–2009 ರಂದು ಮಾರುತಿ 800 ಸಂ: KA-15-A-2435ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಅರೋಪಿಯು 20 ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ತಲಾ 48ರಂತೆ 960 ಬಾಟಲಿಗಳಲ್ಲಿ 172.800 ಲೀ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ,ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ದಕ್ಷಿಣ ವಲಯ–II ಇವರ ಪ್ರಮಾವ ಸಂ:9/2009–10 ದಿ:3–6–2009ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯವಾಗಿದ್ದು, ಹಾಗೂ ವಾಹನದ ಮಾಲೀಕರ ಬಗ್ಗೆ ತಿಳಿದುಕೊಳ್ಳಲು ತನಿಖಾಧಿಕಾರಿಗಳು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸಿದಾಗ ಸದ್ರಿ ನೊಂದಾವಣಿ ಸಂಖ್ಯೆಯ ಯಾವುದೇ ವಾಹನಗಳು ನೊಂದಾವಣಿಯಾಗಿರುವುದಿಲ್ಲವೆಂದು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾಗರ, ಶಿವಮೊಗ್ಗ ಜಿಲ್ಲೆ ಇವರು ವರದಿ ನೀಡಿರುವುದು ಕಂಡು ಬರುತ್ತದೆ. ಹಾಗೂ ವಾಹನದ ಮುಖ್ಯ ಅರೋಪಿಯಾದ ಬ್ರಿಜೇಶ್ ಇವರಿಗೆ ಈ ಪ್ರಾದಿಕಾರದಿಂದ ಅಬಕಾರಿ ಕಾಯಿದೆ 1965ರ ಕಲಂ 43ಬಿ ರ ಪ್ರಕಾರ ನೀಡಲಾದ ನೋಟಿಸಿಗೆ ಸದ್ರಿಯವರಿಂದ ಯಾವುದೇ ಉತ್ತರ ಬಾರದಿರುವ ಕಾರಣ ಪ್ರಾದಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ವಾಹನದ ಮಾಲೀಕರಾಗಲೀ, ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗದೇ ಇದ್ದುದರಿಂದ, ಪ್ರತಿ ರಕ್ಷಾ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಿಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:03.06.2009ರಂದು ಮಾರುತಿ ಕಾರು ಸಂಖ್ಯೆ:KA-15-A-2435ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 172.800 ಲೀ. ಮದ್ಯವನ್ನು ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣತ್ಮಾಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ.ಹೆಚ್.ವಿ ಸುರೇಶ್, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ರವರು ದಿನಾಂಕ:29–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಪಿರ್ಯಾಧುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ಫೆಬ್ರವರಿ–2009ರಿಂದ ಈತನಕ ಮಂಗಳೂರು ದಕ್ಷಿಣ ವಲಯ–2 ರಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ:3–6–2009ರಂದು ಬೆಳಿಗ್ಗೆ ಸುಮಾರು 5–45ರ ಸಮಯಕ್ಕೆ ಮಂಗಳೂರು ತಾಲೂಕಿನ ಸೋಮೇಶ್ವರ ಗ್ರಾಮದ ಅಜ್ಜಿನಡ್ಕ ಎಂಬಲ್ಲಿ ಅಬಕಾರಿ ರಸ್ತೆಗಾವಲು ನಡೆಸುತ್ತಿದ್ದಾಗ ಬಂದ ಮಾಹಿತಿಯಂತೆ ಉಚ್ಚಿಲದಿಂದ ನಾಟೆಕಲ್ಲಿಗೆ ಹೋಗುವ ರಸ್ತೆಗೆ ಮುಖ ಮಾಡಿಕೊಂಡು ,ನಮ್ಮ ವಾಹನವು ಹೋಗುತ್ತಿದ್ದಾಗ ನಾಟೆಕಲ್ಲಿನಿಂದ ಉಚ್ಚಿಲಕ್ಕೆ ಮುಖ ಮಾಡಿಕೊಂಡು ಬರುವ KA-15-A-2435 ಮಾರುತಿ 800 ಕೆಂಪು ಕಾರನ್ನು ಸುಮಾರು 30 ಗಜ ದೂರದಲ್ಲಿ ಕಂಡು, ಅಬಕಾರಿ ರಕ್ಷಕರಾದ ಹರೀಶ್ ಕುಮಾರ್‌ರವರು ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ಸಮವಸ್ತ್ರದಲ್ಲಿದ್ದ ಸಿಬ್ಬಂಧಿಯವರನ್ನು ನೋಡಿ ಕಾರನ್ನು ನಿಲ್ಲಿಸಿ, ಡ್ರೈವರ್ ಸೀಟಿನ ಬಾಗಿಲನ್ನು ತೆರೆದು ಓಡಿ ಹೋದನು. ಅಬಕಾರಿ ರಕ್ಷಕ ಹರೀಶ್ ಕುಮಾರ್ ಆತನನ್ನು ಬೆನ್ನಟ್ಟಿದಾಗ ಆತನ ಹೆಸರು ಹಾಗೂ ಮುಖ ಪರಿಚಯ ಇದ್ದ ಕಾರಣ ಆತನ ಹೆಸರು ಬ್ರಿಜೇಶ್ ಎಂದು ಕೂಗಿ ನಿಲ್ಲಲು ಹೇಳಿದಾಗ ಹತ್ತಿರದಲ್ಲಿದ್ದ ಕಾಡು ಗಿಡ ಮತ್ತು ಪೊದೆಗಳ ಮರೆಯಲ್ಲಿ ಓಡಿ ಪರಾರಿಯಾದನು. ಬೆಳಗ್ಗಿನ ಜಾವ ಆದ್ದರಿಂದ ಅಕ್ಕಪಕ್ಕದಲ್ಲಿ ಸಾಕ್ಷಿ ಗಾಗಿ ಹುಡುಕಲು ಸುತ್ತಲೂ ಕಾಡು ಇದ್ದು, ರಸ್ತೆಯಲ್ಲಿ ಹೋಗುವ ಜನರು ಯಾರೂ ಸಿಗಲಿಲ್ಲ. ಕಾರಣ ಸಿಬ್ಬಂಧಿಯವರನ್ನೇ ಸಾಕ್ಷಿಯಾಗಿಸಿ ಸಿಕ್ಕಿದ ವಾಹನದ ಒಳಗಡೆ ಶೋಧನೆ ನಡೆಸಿದಾಗ ಹಿಂದಿನ ಸೀಟಿನಲ್ಲಿ 20 ರಟ್ಟಿನ ಪೆಟ್ಟಿಗೆಗಳಿದ್ದು, ರಟ್ಟಿನ ಪೆಟ್ಟಿಗೆಯನ್ನು ಹೊರಗಿಟ್ಟು ಅದರ ಬಾಯಿ ತೆರೆದು ನೋಡಿದಾಗ 180 ಎಂಎಲ್‌ನ ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಅಂಟಿಸಿದ ಒಂದೊಂದು ಪೆಟ್ಟಿಗೆಯಲ್ಲಿ ತಲಾ 48ರಂತೆ 20 ರಟ್ಟಿನ ಪೆಟ್ಟಿಗೆಯಲ್ಲಿ 960 ಬಾಟಲಿಗಳು ಅಂದರೆ 172–800 ಲೀ ಮದ್ಯ, ಸದ್ರಿ ಮದ್ಯದ ಲೇಬಲ್‌ನಲ್ಲಿ ಜಾನ್ ಡಿಸ್ಟಿಲರಿ ಬೆಂಗಳೂರು ಕರ್ನಾಟಕ ರಾಜ್ಯದಲ್ಲಿ ಮಾತ್ರ ಮಾರಾಟಕ್ಕೆ ಎಂದು ನಮೂದಿಸಲಾಗಿತ್ತು, ವಾಹನದೊಳಗೆ ಪರಿಶೀಲಿಸಿದಾಗ ಮದ್ಯಕ್ಕೆ ಸಂಬಂಧಿಸಿದ ಮತ್ತು ವಾಹನಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಪತ್ರ ಸಿಗಲಿಲ್ಲ. ವಾಹನದ ಕೀ ವಾಹನದ ಕೀ ಹಾಕುವ ಸ್ಥಳದಲ್ಲಿತ್ತು, ಮಾಹಿತಿ ಬಂದ ಸಮಯವು ಅಲ್ಪ ಸಮಯವಾದುದ್ದರಿಂದ ಮಾನ್ಯ ನ್ಯಾಯಾಲಯ ದಿಂದ ಸರ್ಚ್ ವಾರೆಂಟ್ ಪಡೆಯಲು ಸಮಯಾವಕಾಶ ಕಡಿಮೆ ಇದ್ದು ಹಾಗೂ ಕೃತ್ಯವು ತಪ್ಪಿ ಹೋಗುವ ಸನ್ನಿವೇಶ ಇರುವುದರಿಂದ ಅಬಕಾರಿ ಕಾಯ್ದೆ 1965ರ ಕಲಂ 54ರ ಪ್ರಕಾರ ಶೋಧನಾ ಸಮುಚಿತ ದ್ವಾರದ ಮುಖೇನಾ ಎಲ್ಲಾ ಶೋದನಾ ಕಾರ್ಯಚರಣೆಯನ್ನು ದಾಖಲಿಸಿಕೊಳ್ಳಲಾಗಿದೆ. ವಾಹನದ ಇಂಜಿನ್ ನಂ:S8B-IN-3247201 ಮತ್ತು ಚಾಸೀಸ್ ನಂ:SB-308-IN-2242746 ನೊಂದಣಿ ಸಂ:KA-15-A-2435 ಕೆಂಪು ಬಣ್ಣದ ಮಾರುತಿ ಸುಜುಕಿ 800 ಆಗಿರುತ್ತದೆ. ಸದ್ರಿ ಮದ್ಯಗಳಿಂದ ತಲಾ 2ರಂತೆ 180 ಎಂಎಲ್‌ನ 20 ರಟ್ಟಿನ ಪೆಟ್ಟಿಗೆಗಳಿಂದ 40 ಬಾಟಲಿಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರದಿಂದ ಕಟ್ಟಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು. ಮಾದರಿ ಸೀಸೆಯನ್ನು ತಯಾರಿಸಲಾಯಿತು. ದೊರೆತ ಮದ್ಯದ ಪೆಟ್ಟಿಗೆಗಳಿಗೂ, ಮಾದರಿ ಸೀಸೆಗಳಿಗೂ, ವಾಹನಕ್ಕೂ ಇಲಾಖಾ ಗುರುತು ಚೀಟಿಯನ್ನು ಅಂಟಿಸಲಾಯಿತು. ಮದ್ಯದ ಬಾಟಲಿಗಳಿಗೆ ಭದ್ರತಾ ಚೀಟಿ ಇರುವುದಿಲ್ಲ. ಆದ್ದರಿಂದ ಇದು ನಕಲಿ ಮದ್ಯ ಎಂದು ಖಾತರಿ ಪಡಿಸಿಕೊಳ್ಳಲಾಯಿತು. ಕೃತ್ಯ ನಡೆದ ಸ್ಥಳದ ಚೆಕ್ ಬಂಧಿ ಈ ರೀತಿ ಇರುತ್ತದೆ. ಪೂರ್ವಕ್ಕೆ ಕಾಡು, ಪಶ್ಚಿಮಕ್ಕೆ ಕಾಡು,ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ,ಸ್ಥಳದಲ್ಲಿ ಮಹಜರು ಬರೆದು ದೊರೆತ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ದಾರಿದೀಪದ ಸಹಾಯದಿಂದ ಕುಳಿತು ಬರೆದು ಮಹಜರು ಸಮಯ 5–45 ರಿಂದ ಸುಮಾರು 7–00 ಗಂಟೆ ವರೆಗೆ ಬರೆಯಲಾಯಿತು. ಪ್ರಕರಣದಲ್ಲಿ ತಯಾರಿಸಲಾದ ಶೋಧನ ಸಮುಚಿತ ವಾರೆಂಟ್‌ನ ಪ್ರತಿಯನ್ನು ನಿಶಾನೆ ಪಿ–1 ಎಂದು, ಮಹಜರು ಪ್ರತಿಯನ್ನು ನಿಶಾನೆ ಪಿ–2 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಸೊತ್ತುಗಳೊಂದಿಗೆ ಕಛೇರಿಗೆ ಬಂದು ಅರೋಪಿ ಪರಾರಿಯಾದ ಬಗ್ಗೆ ಪ್ರ.ಮಾ.ವ ಸಂ:9/2009–10 ದಿ:3–6–2009ರಂತೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ತಯಾರಿಸಿ ಮಾನ್ಯ 3ನೇ ನ್ಯಾಯಾಲಯ ಮಂಗಳೂರು ಇಲ್ಲಿಗೆ ವರದಿ ಸಲ್ಲಿಸಿರುತ್ತೇನೆ. ಮತ್ತು ಮುಖ ಪರಿಚಯ ಇರುವ ಅರೋಪಿಯ ಹೆಸರು ವಿಳಾಸ ಈ ರೀತಿ ಇರುತ್ತದೆ.ಬ್ರಿಜೇಶ್ ಬಿನ್:ದಿ:ಭಾಸ್ಕರ ಎಂ, ಪ್ರಾಯ:26 ವರ್ಷ, ಅಡುಮನೆ ನಂ:2–22, ಅಂಬ್ಲಮೊಗರು ಗ್ರಾಮ ಮಂಗಳೂರು ತಾಲೂಕು. ವಾಹನದ ಮಾಲೀಕರು ಯಾರೂ ಎಂದು ತಿಳಿದುಬಂದಿರುವುದಿಲ್ಲ. ದಾಖಲೆ ಪ್ರತಿಗಳನ್ನು ಅಧಿಕೃತ ಅಧಿಕಾರಿಗಳ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ ಪ್ರ.ಮಾ.ವ ವನ್ನು ಈಗ ನೋಡಿ ಅದನ್ನು ನಿಶಾನೆ ಪಿ–3 ಎಂದು ಮತ್ತು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತು ಮಾಡಿ, ಸೊತ್ತುಪಟ್ಟಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ಪ್ರಕರಣದ ಅರೋಪಿತ ವ್ಯಕ್ತಿಯನ್ನು ದಿ:16–6–2009ರಂದು ಸಂಜೆ 7–00 ಗಂಟೆಗೆ

ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ಬಗ್ಗೆ ಜಿಲ್ಲಾ ಕಾರಾಗೃಹ ಮಂಗಳೂರು ಇವರ ಕಛೇರಿಯಿಂದ ಪಡೆದ ಸ್ವೀಕೃತಿ ಪ್ರತಿಯನ್ನು ಪ್ರಾದಿಕಾರಕ್ಕೆ ಒಪ್ಪಿಸಿದ್ದು,ಅದನ್ನು ಈಗ ನೋಡಿ ನಿಶಾನೆ ಪಿ–5 ಎಂದು ಗುರುತಿಸಲಾಯಿತು. ಪ್ರಕರಣದ ತನಿಖೆ ಮುಂದುವರಿಸಿ ದಿ:11–6–2009 ರಂದು ಜಪ್ತುಪಡಿಸಿದ ಮದ್ಯದ ಮಾದರಿಗಳನ್ನು ಶ್ರೀ.ಪ್ರಕಾಶ್ ಕುಮಾರ್,ಅ.ರ ಇವರ ಮೂಲಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟು ದಿ:25–7–2009ರಂದು ತಜ್ಞರ ವರದಿಯನ್ನು ಪಡೆದು ಕೊಂಡಿರುತ್ತೇನೆ. ಜಪ್ತುಪಡಿಸಿಕೊಂಡ ವಾಹನದ ಬಿ ವಹಿ ವರದಿಯನ್ನು ಕೋರಿ ಪ್ರಾ.ಸಾ ಅ. ಸಾಗರ ,ಶಿವಮೊಗ್ಗ ಇವರಿಗೆ ದಿ:5–8–2009 ರಂದು ಪತ್ರ ಬರೆದಿರುತ್ತೇನೆ. ಅದರ ಪ್ರತಿಯನ್ನು ಪ್ರಾದಿಕಾರಕ್ಕೆ ಒಪ್ಪಿಸಿದ್ದು ಅದನ್ನು ಈಗ ನೋಡಿ ನಿಶಾನೆ ಪಿ–6 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ–6 ಎ ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ–7 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಜಪ್ತಾದ ವಾಹನದ ಬಿ ವಹಿ ವರದಿ ಕೋರಿ ಪ್ರಾ.ಸಾ.ಅ ಸಾಗರ ಇವರಿಗೆ ಬರೆದ ಪತ್ರಕ್ಕೆ ಸದ್ರಿ ಪ್ರಾದಿಕಾರದಿಂದ ದಿ:7–8–2009ರಂದು ಉತ್ತರ ದೊರೆತಿದ್ದು, ಸದ್ರಿ ಉತ್ತರದಲ್ಲಿ KA-15-A-2435 ವಾಹನವು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾಗರ ಕಛೇರಿ ಇಲ್ಲಿ ನೊಂದಾಯಿಸಲ್ಪಟ್ಟಿರುವುದಿಲ್ಲ ಎಂದು ತಿಳಿದುಬಂದಿರುತ್ತದೆ. ರಸಾಯನಿಕ ವಿಶ್ಲೇಷಣಾ ವರದಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವರದಿ, ವಾಹನದ ಮೌಲ್ಯ ಮಾಪನ ವರದಿ ಹಾಗೂ ಪ್ರಕರಣದ ಇತರ ಎಲ್ಲಾ ದಾಖಲಾತಿಗಳೊಂದಿಗೆ ದಿ:29–8–2009ರಂದು ವರದಿಯೊಂದನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಮತ್ತು ಅಬಕಾರಿ ಉಪ ಅಧೀಕ್ಷಕರು,ಮಂಗಳೂರು ಉಪವಿಭಾಗ–1 ಇವರ ಮುಖಾಂತರ ಅಧಿಕೃತ ಅಧಿಕಾರಿಗಳ ಪ್ರಾದಿಕಾರಕ್ಕೆ ಸಲ್ಲಿಸಿ ,ಸದ್ರಿ ವರದಿಯಲ್ಲಿ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡುವರೇ ಅದೇಶಕ್ಕಾಗಿ ಶಿಫಾರಸ್ಸು ಮಾಡಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿ ನಿಶಾನೆ ಪಿ–3 ಎಂದೂ, ಅದರ ಮೇಲಿನ ಸಹಿಯನ್ನು ನಿಶಾನೆ ಪಿ–8ಎ ಎಂದು ಗುರುತಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ಪ್ರತಿನಿಧಿಗಳಾಗಲೀ ಪ್ರಾದಿಕಾರದ ಮುಂದೆ ಹಾಜರಾಗಲು ಉತ್ಸುಕರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:3–6–2009ರಂದು ಜಪ್ತು ಪಡಿಸಿರುವ ಮಾರುತಿ ಸುಜಕಿ 800 ಕಾರು ಸಂ:KA-15-A-2435ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಣಿಕೆ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾದಾರಗಳೊಂದಿಗೆ ಸಾಬೀತುಪಡಿಸುವುದು ಅಕ್ರಮವಾಗಿ ಮದ್ಯವನ್ನು ಸಾಗಿಸಲು ಬಳಸಿರುವ ವಾಹನದ ಸುಪರ್ಧಿ ಹೊಂದಿರುವ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ವಾಹನದ ಮಾಲೀಕರ ಬಗ್ಗೆ ತಿಳಿದುಕೊಳ್ಳುವ ಏಕೈಕ ಮಾರ್ಗವಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾಗರ, ಶಿವಮೊಗ್ಗ ಜಿಲ್ಲೆ ಇವರನ್ನು ಪತ್ರ ಮುಖೇನ ಪ್ರಕರಣದ ತನಿಖಾಧಿಕಾರಿಗಳು ಸಂಪರ್ಕಿಸಿದಾಗ ಸದ್ರಿ ನೊಂದಣಿ ಸಂ:KA-15-A-2435 ಇರುವ ಯಾವುದೇ ವಾಹನ ಅವರ ಕಛೇರಿಯಲ್ಲಿ ನೊಂದಾವಣಿಯಾಗಿರುವುದಿಲ್ಲ ಎಂದು ತಿಳಿಸಿರುವ ಮೇರೆಗೆ ವಾಹನದ ನೊಂದಾಣಿ ಮಾಲೀಕರ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಪ್ರಕರಣದ ಮುಖ್ಯ ಅರೋಪಿತ ವ್ಯಕ್ತಿಗೆ ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳುವ ನೋಟಿಸು ಖುದ್ದಾಗಿ ಜ್ಯಾರಿಯಾಗಿದ್ದರೂ ,ಸದ್ರಿ ವ್ಯಕ್ತಿ ಕೂಡಾ ಈ ಪ್ರಕರಣದ ಬಗ್ಗೆ ಸಾಕಷ್ಟು ಪುರಾವೆಗಳನ್ನು ಒದಗಿಸಿ ತನ್ನ ನಿರಾಪರಾಧಿತ್ವವನ್ನು ಸಾಬೀತುಪಡಿಸಲು ಪ್ರಯತ್ನಿಸದೇ ಇರುವುದು ಕಂಡು ಬರುತ್ತದೆ. ಪ್ರಕರಣ ದಾಖಲಾಗಿ ಸುಮಾರು 4 ತಿಂಗಳುಗಳು ಕಳೆದಿದ್ದರೂ ತನ್ನ ವಾಹನವನ್ನು ಪಡೆದುಕೊಳ್ಳುವ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದು ಹಾಗೂ ಈ ಬಗ್ಗೆ ಪ್ರಾದಿಕಾರದ ಮುಂದೆ ಹಾಜರಾಗಿ ಸೂಕ್ತ ಸಾಕ್ಷ್ಯಾದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ಈ ಪ್ರಾದಿಕಾರದ ಮುಂದೆ ಹಾಜರಾಗದೇ ಇರುವುದನ್ನು ಗಮನಿಸಿದಾಗ ವಾಹನ ಮಾಲೀಕರು ತನ್ನ ತಿಳುವಳಿಯಿಂದಲೇ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಾರುತಿ ಸುಜಕಿ 800 ಕಾರನ್ನು ಅಕ್ರಮವಾಗಿ 172.800 ಲೀ ಮದ್ಯವನ್ನು ಸಾಗಿಸಲು ಬಳಸಿರುವುದು ಸಾಬೀತಾಗಿರುತ್ತದೆ. ಕಾರಣ ಜಪ್ತು ಪಡಿಸಲಾಗಿರುವ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತವೆಂದು ಪ್ರಾದಿಕಾರವು ತೀರ್ಮಾನಿಸಿ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಾರುತಿ 800 ಸುಜುಕಿ ಕಾರು ಸಂಖ್ಯೆ: KA-15-A-2435ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ನೇ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ದಕ್ಷಿಣ ವಲಯ–II , ಮಂಗಳೂರು ಇವರ ತಕ್ಷೀರು ಸಂಖ್ಯೆ: 9/2009–10 ದಿ:03–06–2009 ರಲ್ಲಿ ಜಪ್ತು ಪಡಿಸಿಕೊಂಡಿರುವ ಮಾರುತಿ 800 ಸುಜುಕಿ ಕಾರು ಸಂಖ್ಯೆ: KA-15-A-2435 (ಚಾಸೀಸ್ ನಂ: SB-308-IN-2242746 ಮತ್ತು ಇಂಜಿನ್ ಸಂ: F8B-IN-3247201) ನ್ನು ನಿಯಮ 43ಎ(2) ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:20–10–2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I: ಶ್ರೀ ಹೆಚ್.ವಿ.ಸುರೇಶ್, ಅಬಕಾರಿ ಉಪ ನಿರೀಕ್ಷಕರು(1)
ಮಂಗಳೂರು ದಕ್ಷಿಣ ವಲಯ–II

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–I	: ಶೋಧನಾ ಸಮುಚಿತ ವಾರೆಂಟ್
ನಿಶಾನೆ ಪಿ–2	: ಮಹಜರು
ನಿಶಾನೆ ಪಿ–2ಎ	: ಸಾಕ್ಷಿ ಸಹಿ
ನಿಶಾನೆ ಪಿ–3	: ಪ್ರಥಮ ವರ್ತಮಾನ ವರದಿ
ನಿಶಾನೆ ಪಿ–3ಎ	: ಸಾಕ್ಷಿ ಸಹಿ
ನಿಶಾನೆ ಪಿ–4	: ಸೊತ್ತು ಪಟ್ಟಿ
ನಿಶಾನೆ ಪಿ–5	: ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವ ಬಗ್ಗೆ ಸ್ವೀಕೃತಿ
ನಿಶಾನೆ ಪಿ–6	: ಪಾ.ಸಾ.ಅ ಸಾಗರ, ಶಿವಮೊಗ್ಗ ಇವರಿಗೆ ಬರೆದ ಪತ್ರ
ನಿಶಾನೆ ಪಿ–6ಎ	: ಅದರ ಮೇಲಿನ ಸಹಿ
ನಿಶಾನೆ ಪಿ–7	: ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–8	: ತನಿಖಾ ವರದಿ ದಿ:29–8–2009

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಅರ್ಜಿದಾರರ ಹೇಳಿಕೆ :– – ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1194

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/476/ಡಿಟಿಸಿಆರ್/1999–2000, ದಿನಾಂಕ:27ನೇ ನವೆಂಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಬೆಳ್ತಂಗಡಿ ಪೊಲೀಸ್ ಠಾಣೆ,
ಬೆಳ್ತಂಗಡಿ.

ಆರೋಪಿಗಳು:

1) ನಾರಾಯಣ ಹೆಚ್.ಗೌಡ(42 ವರ್ಷ) ಬಿನ್:ಹುಚ್ಚಪ್ಪ,ಡೋರ್ ನಂ.25, 8 ನೇ ಮುಖ್ಯ ರಸ್ತೆ,ಪ್ಯಾಲೇಸ್ ಗುಟ್ಟಾ ಹಳ್ಳಿ,ಬೆಂಗಳೂರು–3.
2) ಮಲ್ಲಿಕಾರ್ಜುನ(22 ವರ್ಷ) ಬಿನ್: ದಿ:ಕೆ. ವಿ.ಚಳ್ಳಂ, ವಾಸ:– ನಂ.480, 3ನೇ ಸ್ಟೇಟ್,3 ನೇ ಬ್ಲಾಕ್, ಬಸವೇಶ್ವರ ನಗರ,ಬೆಂಗಳೂರು.

ವಾಹನದ ಮಾಲೀಕರು

ಶ್ರೀಮತಿ ರಾಜೇಶ್ವರಿ ಎನ್.ಕೋಂ:ನಾರಾಯಣ ಹೆಚ್.,ನಂ.252/ಬಿ,12 ನೇ ಕ್ರಾಸ್,6 ನೇ ಮೈನ್ ರೋಡ್,ವ್ಯಾಲಿಕಾವಲ್ ರೋಡ್,ಬೆಂಗಳೂರು–560003.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:18.03.2000 ರಂದು ಸಂಜೆ 6–45 ಗಂಟೆ ಸಮಯಕ್ಕೆ ಬೆಳ್ತಂಗಡಿ ಪೊಲೀಸ್ ವೃತ್ತ ನಿರೀಕ್ಷಕರ ನಿರ್ದೇಶನದಂತೆ ಖಚಿತವಾದ ವರ್ತಮಾನದ ಮೇರೆಗೆ ಫಿರ್ಯಾದುದಾರರು ಮತ್ತು ಠಾಣಾ ಸಿಬ್ಬಂದಿಗಳು ಬೆಳ್ತಂಗಡಿ ತಾಲೂಕು ಲೈಲಾ ಗ್ರಾಮದ ಲೈಲಾ ಜಂಕ್ಷನ್ ಬಳಿ ನಿಗಾ ಇಟ್ಟು, ರಸ್ತೆಗಾವಲು ನಡೆಸುತ್ತಿರುವಾಗ ಉಜಿರೆ ಕಡೆಯಿಂದ ಕೆ.ಎ–04–ಪಿ–1444 ನೆಯ ಹಸಿರು ಬಣ್ಣದ ಮಾರುತಿ ಓಮ್ನಿ ಕಾರನ್ನು ಅದರ ಚಾಲಕ ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು,ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರು ನಿಲ್ಲಿಸಲು ಸೂಚನೆ ಕೊಟ್ಟಾಗ ಅದರ ಚಾಲಕ ನೀಡಿದ ಸೂಚನೆಯನ್ನು ಲೆಕ್ಕಿಸದೇ, ಬೆಳ್ತಂಗಡಿ ಕಡೆಗೆ ಮುಂದಕ್ಕೆ ಚಲಾಯಿಸಿಕೊಂಡು ಹೋದ ಸಂದರ್ಭದಲ್ಲಿ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು,ತಮ್ಮ ಇಲಾಖಾ ವಾಹನದಲ್ಲಿ ಸದ್ರಿ ವಾಹನವನ್ನು ಹಿಂಬಾಲಿಸಿ, ಶೀತಲ್ ವೈನ್ಸ್ ಶಾಪಿನ ಎದುರು ತಡೆದು ನಿಲ್ಲಿಸಿ, ಸದ್ರಿ ವಾಹನದ ಮುಂಭಾಗದ ಸೀಟಿನಲ್ಲಿ ಇಬ್ಬರು ವ್ಯಕ್ತಿಗಳು ಕುಳಿತುಕೊಂಡಿದ್ದು, ಮಾರುತಿ ಓಮ್ನಿ ಕಾರಿನಲ್ಲಿ ಏನಿದೆ ಎಂದು ಪ್ರಶ್ನಿಸಿದಾಗ, ಕಾರಿನಲ್ಲಿ ರಟ್ಟಿನ ಪೆಟ್ಟಿಗೆಗಳನ್ನು ತುಂಬಿಸಿರುವುದು ಕಂಡು ಬಂತು. ಕಾರಿನ ಚಾಲಕ ಹಾಗೂ ಸಹ ಚಾಲಕ ಸಮರ್ಪಕವಾದ ಉತ್ತರವನ್ನು ನೀಡದ ಪ್ರಯುಕ್ತ ರಟ್ಟಿನ ಪೆಟ್ಟಿಗೆಯನ್ನು ತೆರೆದು ನೋಡಿದಾಗ ರಟ್ಟಿನ ಪೆಟ್ಟಿಗೆ ಒಳಗಡೆ ವಿವಿಧ ನಮೂನೆಯ ಮದ್ಯವನ್ನು ತುಂಬಿಸಿದ್ದು, ಸದ್ರಿ ಮದ್ಯವನ್ನು ಸಾಗಾಟ ಮಾಡಲು ಯಾವುದೇ ರಹದಾರಿ ಅಥವಾ ಪರವಾನಿಗೆ ಹಾಜರುಪಡಿಸಿರುವುದಿಲ್ಲ. ಸದ್ರಿ ಮದ್ಯವನ್ನು ಬೆಂಗಳೂರಿನಿಂದ ಮಂಗಳೂರು ಕಡೆಗೆ ಅಕ್ರಮವಾಗಿ ಸಾಗಾಟ ಮಾಡಿರುವುದಾಗಿ, ಚಾಲಕ ಹಾಗೂ ಸಹ ಚಾಲಕನು ತಿಳಿಸಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಆರೋಪ ಎಸಗಿದ ಕಾರಣ ಅವರು ಮಾಡಿದ ತಪ್ಪನ್ನು ತಿಳಿಸಿ ವಾಹನ ಚಲಾಯಿಸುತ್ತಿದ್ದ ಚಾಲಕನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ತಾನು ನಾರಾಯಣ ಹೆಚ್.ಗೌಡ (42 ವರ್ಷ)ಬಿನ್:ಹುಚ್ಚಪ್ಪ, ಡೋರ್ ನಂ.25, 8 ನೇ ಮುಖ್ಯ ರಸ್ತೆ,ಪ್ಯಾಲೇಸ್ ಗುಟ್ಟಾ ಹಳ್ಳಿ,ಬೆಂಗಳೂರು–3 ಮತ್ತು ಸಹ ಚಾಲಕನ ಹೆಸರು ಮಲ್ಲಿಕಾರ್ಜುನ(22 ವರ್ಷ) ಬಿನ್:ದಿ:ಕೆ.ವಿ.ಚಳ್ಳಂ, ವಾಸ: ನಂ.480, 3 ನೇ ಸ್ಟೇಟ್,3 ನೇ ಬ್ಲಾಕ್,ಬಸವೇಶ್ವರ ನಗರ,ಬೆಂಗಳೂರು ಎಂದು ನುಡಿದರು. ಸದ್ರಿಯವರು ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಆರೋಪ ಎಸಗಿದ ಕಾರಣ ಸ್ಥಳದಲ್ಲಿಯೇ ದಸ್ತಗಿರಿ ಮಾಡಿ,ಸ್ವಾಧೀನಕ್ಕೆ ತೆಗೆದುಕೊಂಡು, ಕೆಎ–04–ಪಿ–1444 ನೆಯ ಮಾರುತಿ ಓಮ್ನಿ ಕಾರಿನಲ್ಲಿದ್ದ ಮದ್ಯದ ರಟ್ಟಿನ ಪೆಟ್ಟಿಗೆಗಳನ್ನು ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು,ಅವರ ಸಮಕ್ಷಮ ಈ ಕೆಳಗಿನಂತೆ ಮದ್ಯವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು.

1) ಡಿ.ಎಸ್.ಪಿ ಬ್ಲ್ಯಾಕ್ ವಿಸ್ಕಿ 750 ಎಂ.ಎಲ್.ನ 21 ಸೀಸೆಗಳಲ್ಲಿ = 15.750 ಲೀ ಮದ್ಯ.
2) ಡಿ.ಎಸ್.ಪಿ ಬ್ಲ್ಯಾಕ್ ವಿಸ್ಕಿ 180 ಎಂ.ಎಲ್.ನ 48 ಸೀಸೆಗಳಲ್ಲಿ =8.640 ಲೀ ಮದ್ಯ
3) ಡಿ.ಎಸ್.ಪಿ ವಿಸ್ಕಿ 750 ಎಂ.ಎಲ್.ನ 24 ಸೀಸೆಗಳಲ್ಲಿ =18.000 ಲೀ ಮದ್ಯ
4) ಡಿ.ಎಸ್.ಪಿ ವಿಸ್ಕಿ 375 ಎಂ.ಎಲ್.ನ 48 ಸೀಸೆಗಳಲ್ಲಿ =18.000 ಲೀ ಮದ್ಯ
5) ಡಿ.ಎಸ್.ಪಿ ವಿಸ್ಕಿ 180 ಎಂ.ಎಲ್.ನ 240 ಸೀಸೆಗಳಲ್ಲಿ =43.200 ಲೀ ಮದ್ಯ
6) ಓಲ್ಡ್ ಮಾಂಕ್ ರಮ್ 750 ಎಂ.ಎಲ್.ನ 10 ಸೀಸೆಗಳಲ್ಲಿ =7.500 ಲೀ ಮದ್ಯ
7) ಓಲ್ಡ್ ಮಾಂಕ್ ರಮ್ 180 ಎಂ.ಎಲ್.ನ 48 ಸೀಸೆಗಳಲ್ಲಿ =8.640 ಲೀ ಮದ್ಯ

8) ಕೋಡೆಸ್ ರಮ್ 750 ಎಂ.ಎಲ್.ನ 33 ಸೀಸೆಗಳಲ್ಲಿ =24.750 ಲೀ ಮದ್ಯ
9) ಬ್ಲೂ ರಿಬಾಂಡ್ ಜಿನ್ 180 ಎಂ.ಎಲ್.ನ 48 ಸೀಸೆಗಳಲ್ಲಿ =8.640 ಲೀ ಮದ್ಯ
10) ಗೋಲ್ಡ್‌ಮೆಡಲ್‌ಕಪ್ ವಿಸ್ಕಿ 180ಎಂಎಲ್‌ನ 192 ಸೀಸೆಗಳಲ್ಲಿ =34.560 ಲೀ ಮದ್ಯ
11) ಫಿಲಿಕ್ಸ್ ಫೈನ್ ವಿಸ್ಕಿ 180 ಎಂ.ಎಲ್.ನ 960 ಸೀಸೆಗಳಲ್ಲಿ =172.8000 ಲೀ ಮದ್ಯ
12) ಅಕ್ರಮ ಸಾಗಾಟಕ್ಕೆ ಬಳಸಿದ ಹಸಿರು ಬಣ್ಣದ ಮಾರುತಿ ಓಮ್ನಿ ಕಾರು ಸಂ: ಕೆಎ-04-ಪಿ-1444.

ಸದರಿ ಮೇಲಿನ ರಟ್ಟಿನ ಪೆಟ್ಟಿಗೆಗಳಿಂದ ಪ್ರತಿಯೊಂದು ಬ್ರಾಂಡ್‌ನ ಮದ್ಯದಿಂದ ತಲಾ ಒಂದೊಂದು ಬಾಟಲಿಯನ್ನು ಮಾದರಿಗಾಗಿ ತೆಗೆದು ಅದಕ್ಕೆ ಬಿಳಿ ಬಟ್ಟೆಯನ್ನು ಮುಚ್ಚಳಕ್ಕೆ ಸುತ್ತಿ,ಅರಗು ಹಾಕಿ,ಎಸ್.ಹೆಚ್.ಓ ಮೊಹರು ಮಾಡಿ, ಮಾದರಿ ಹಾಳೆಯಲ್ಲಿ ಪಂಚರ ಸಹಿಯನ್ನು ಪಡೆದು, ಪಂಚರ ಸಹಿಯುಳ್ಳ ಚೀಟಿಯನ್ನು ಮಾದರಿ ತೆಗೆದಿರಿಸಿದ್ದ ಬಾಟಲಿಗಳಿಗೆ ಅಂಟಿಸಲಾಯಿತು. ಅಕ್ರಮ ಸಾಗಾಟಕ್ಕೆ ಬಳಸಿದ ಮಾರುತಿ ಓಮ್ನಿ ಕಾರು ಸಂ: ಕೆಎ-04-ಪಿ-1444 ಆಗಿದ್ದು, ಇದು 1998 ರ ಮಾದರಿಯಾಗಿದ್ದು, ಇದರ ಚಾಸಿಸ್ ನಂ.213679 ಮತ್ತು ಇಂಜಿನ್ ನಂ.1531110 ಆಗಿರುತ್ತದೆ. ಮಹಜರನ್ನು ದಿ:18-03-2000 ರಂದು 19.00 ಗಂಟೆಯಿಂದ 21.00 ಗಂಟೆತನಕ ಬರೆದು, ಮಹಜರಿನಲ್ಲಿ ತಕ್ಷೀರು ನಡೆದ ಸ್ಥಳ ಚೆಕ್ ಬಂದಿಯನ್ನು ನಮೂದಿಸಿ, ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43(ಎ), 34 ಮತ್ತು 36 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ ಆರೋಪಿಗಳ ವಿರುದ್ಧ ತಕ್ಷೀರು ಸಂ:60/2000 ದಿ:18-03-2000 ರಂದು ಮೊಕದ್ದಮೆ ದಾಖಲಿಸಿಕೊಂಡು,ಮಾನ್ಯ ನ್ಯಾಯಾಲಯಕ್ಕೂ ಹಾಗೂ ತಮ್ಮ ಮೇಲಾಧಿಕಾರಿಗಳಿಗೂ ಮತ್ತು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಪೊಲೀಸ್ ಉಪ ನಿರೀಕ್ಷಕರು,ಬೆಳ್ತಂಗಡಿ ಪೊಲೀಸ್ ಠಾಣೆ ,ಬೆಳ್ತಂಗಡಿ ಇವರ ಪತ್ರ ಸಂ:20-03-2000 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ಕಡತಗಳನ್ನು ಮುಂದಿನ ಸೂಕ್ತ ತನಿಖೆಗಾಗಿ ಅಬಕಾರಿ ನಿರೀಕ್ಷಕರು,ಬೆಳ್ತಂಗಡಿ ವಲಯ ಇವರಿಗೆ ಹಸ್ತಾಂತರಿಸಲು ಕೋರಿರುವ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ ಜಿಲ್ಲೆ,ಮಂಗಳೂರು ಇವರ ಕಚೇರಿ ನಡವಳಿ ಆದೇಶ ಸಂ:ಎಸ್‌ಡಿಕೆ/476/ಡಿಟಿಸಿಆರ್/99-2000 ದಿ:23-03-2000 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಅವುಗಳ ಸಂಪೂರ್ಣ ದಾಖಲಾತಿಗಳೊಂದಿಗೆ ಅಬಕಾರಿ ನಿರೀಕ್ಷಕರು,ಬೆಳ್ತಂಗಡಿ ವಲಯ,ಬೆಳ್ತಂಗಡಿ ಇವರಿಗೆ ಹಸ್ತಾಂತರಿಸಲು ಆದೇಶ ನೀಡಲಾಗಿರುತ್ತದೆ.ಸದ್ರಿ ಆದೇಶದಂತೆ ಪೊಲೀಸ್ ಉಪ ನಿರೀಕ್ಷಕರು,ಬೆಳ್ತಂಗಡಿ ಪೊಲೀಸ್ ಠಾಣೆ ಇವರು ಸದ್ರಿ ಸೊತ್ತುಗಳನ್ನು ಹಾಗೂ ಕಡತಗಳನ್ನು ಅಬಕಾರಿ ಉಪ ನಿರೀಕ್ಷಕರು,ಬೆಳ್ತಂಗಡಿ ಉಪ ವಲಯ,ಬೆಳ್ತಂಗಡಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತಾರೆ.

ವಾಹನದ ನೋಂದಣಿ ಮಾಲೀಕರಾದ ಶ್ರೀಮತಿ ರಾಜೇಶ್ವರಿ ಎನ್.ಕೋಂ:ನಾರಾಯಣ ಹೆಚ್.,ನಂ.252/ಬಿ,12 ನೇ ಕ್ರಾಸ್,6 ನೇ ಮೈನ್ ರೋಡ್,ವ್ಯಾಲಿಕಾವಲ್ ರೋಡ್,ಬೆಂಗಳೂರು-560003 ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ: 01-04-2000 ರಂದು ಅರ್ಜಿ ಸಲ್ಲಿಸಿ, ತಾನು ನಿರಪರಾಧಿ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ. ಸದ್ರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ದ.ಕ ಜಿಲ್ಲೆ,ಮಂಗಳೂರು ಇವರ ಆದೇಶ ಸಂ:ಎಸ್‌ಡಿಕೆ/ 476/ಡಿಟಿಸಿಆರ್/99-2000 ದಿ:12-06-2000 ರ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ತನ್ನ ವಶಕ್ಕೆ ಬಿಟ್ಟುಕೊಡಬೇಕೆಂದು ಕೋರಿ ಸಲ್ಲಿಸಿದ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿ ಆದೇಶ ನೀಡಿರುತ್ತಾರೆ. ಸದ್ರಿ ಆದೇಶದಿಂದ ಭಾದಿತರಾದ ಅರ್ಜಿದಾರರು ದ.ಕ ಜಿಲ್ಲಾ ಸೆಷೆನ್ಸ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ಸಂ:93/2000 ರಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43 (ಇ) ಪ್ರಕಾರ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ 3ನೇ ಹೆಚ್ಚುವರಿ ಸೆಷೆನ್ಸ್ ನ್ಯಾಯಾಧೀಶರಾದ ಶ್ರೀ ಎ.ವಿ.ಚಂದ್ರಶೇಖರ್ ಇವರು ಕ್ರಿಮಿನಲ್ ಅಪೀಲ್ ಸಂ:93/2000ನ್ನು ದಿ:19-06-2000 ರಂದು ಸದರಿ ಮೇಲ್ಮನವಿಯನ್ನು ಎತ್ತಿ ಹಿಡಿದು, ಈ ಪ್ರಾಧಿಕಾರವು ನೀಡಿದ ಅದೇಶವನ್ನು ತಳ್ಳಿ ಹಾಕಿ,ಅರ್ಜಿದಾರರು ಷರತ್ತುಗಳಿಗೆ ಬದ್ಧರಾದಲ್ಲಿ ವಶಪಡಿಸಿ ಕೊಂಡ ಮಾರುತಿ ಓಮ್ನಿ ಕಾರನ್ನು ಅರ್ಜಿದಾರರ ಸುಪರ್ದಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆ ಮಾಡಲು ಆದೇಶಿಸಿರುತ್ತಾರೆ. ಸತ್ರ ನ್ಯಾಯಾಲಯದ ಆದೇಶದ ಪ್ರಕಾರ ಅರ್ಜಿದಾರರು ರೂ. 1,50,000/- ಇಂಡೆಮ್ನಿಟಿ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಸಮಾನವಾದ ಜಾಮೀನುದಾರರಾದ ಶ್ರೀ ರಾಮರೆಡ್ಡಿ ಬಿನ್:ದಿ:ತಿಮ್ಮರೆಡ್ಡಿ,ವಾಸ:-ಚಿಕ್ಕಬೇಗೂರು ವಿಲೇಜ್,ಕಸಬಾ ಹೋಬಳಿ,ಕನಕಪುರ ತಾಲೂಕು, ಬೆಂಗಳೂರು ಇವರ ಜಮೀನಿನ ಆರ್.ಟಿ.ಸಿ.ಯನ್ನು ಈ ಪ್ರಾಧಿಕಾರಕ್ಕೆ ನೀಡಿದ್ದು ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ದ.ಕ ಜಿಲ್ಲೆ,ಮಂಗಳೂರು ಇವರ ಆದೇಶ ಸಂ:ಎಸ್‌ಡಿಕೆ/476/ಡಿಟಿಸಿಆರ್/99-2000 ದಿ:12-07-2000 ರ ಆದೇಶದಲ್ಲಿ ಸತ್ರ ನ್ಯಾಯಾಲಯದ ಆದೇಶದ ಪ್ರಕಾರ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ಅರ್ಜಿದಾರರ ಸುಪರ್ದಿಗೆ ಕೆಲವು ಷರತ್ತುಗಳನ್ವಯ ಮಧ್ಯಂತರ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ.

ಪ್ರಕರಣದ ತನಿಖೆಯನ್ನು ತನಿಖಾಧಿಕಾರಿಯಾದ ಅಬಕಾರಿ ಉಪ ನಿರೀಕ್ಷಕರು, ಬೆಳ್ತಂಗಡಿ ಉಪ ವಲಯ ಇವರ ತನಿಖಾ ವರದಿ ಸಂ:5/2000-01 ದಿ:11-10-2000 ರ ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಸದರಿ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಮಾದರಿ ಬಾಟಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಸಹಾಯಕ

ರಾಸಾಯನಿಕ ವಿಶ್ಲೇಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ವರದಿ ಸಂ: ಇ–2138–11 ದಿ: 10–10–2000ರಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42.80% ಮತ್ತು 25% ಯು.ಪಿ. ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸು ಮಾಡಿರುವ ಮೇರೆಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆರವರ ಮುಟ್ಟುಗೋಲು ಆದೇಶ ಸಂಖ್ಯೆ: ಎಸ್‌ಡಿಕೆ/476/ಡಿಟಿಸಿಆರ್/1999–2000 ದಿ:6–12–2000ರ ಆದೇಶದಲ್ಲಿ, ಜಪ್ತುಪಡಿಸಿ ಕೊಂಡಿರುವ 360.480ಲೀ ಮದ್ಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಸ್ಯಾಂಪಲ್‌ಗಳನ್ನು ಹೊರತುಪಡಿಸಿ, ಉಳಿದ 356.025 ಲೀಟರ್ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು,ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ನಿಯಮ 43(ಎ)4 ರನ್ವಯ ಅಬಕಾರಿ ನಿರೀಕ್ಷಕರು,ಬೆಳ್ತಂಗಡಿ ವಲಯ,ಬೆಳ್ತಂಗಡಿ ಇವರ ಸಮಕ್ಷಮ ವಿಲೇವಾರಿಗೊಳಿಸಲು ಆದೇಶಿಸಿರುತ್ತಾರೆ.

ಈ ಪ್ರಕರಣದಲ್ಲಿ ಸರಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದರಿಂದ, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 18–03–2006 ರಂದು ಮಾರುತಿ ಓಮ್ನಿ ಕಾರು ಸಂಖ್ಯೆ: ಕೆಎ–04–ಪಿ–1444 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮ ಮದ್ಯವನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ಸಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ ರತ್ನಾಕರ ಪಿ,ಅಬಕಾರಿ ರಕ್ಷಕ,ಬೆಳ್ತಂಗಡಿ ವಲಯ ಇವರು ಆ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದು, ಇವರು ದಿ:22–12–2004 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ದಿ: 6–10–2000 ರಂದು ಅಬಕಾರಿ ಉಪ ನಿರೀಕ್ಷಕರಿಂದ 750 ಎಂ.ಎಲ್ ನ 4 ಬಾಟಲಿಗಳನ್ನು ಮತ್ತು 375 ಎಂಎಲ್ ನ 1 ಬಾಟ್ಲಿ ಹಾಗೂ 180 ಎಂ.ಎಲ್.ನ 6 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಹಾಗೂ ಅದಕ್ಕೆ ಸಂಬಂಧಪಟ್ಟ ಪತ್ರಗಳನ್ನು ಮಂಗಳೂರು ಕಚೇರಿಗೆ ಕೊಂಡು ಹೋಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯವರಿಗೆ ಕೊಟ್ಟಿರುತ್ತೇನೆ.ಹಾಗೂ ದಿ:10–10–2000 ರಂದು ಮಂಗಳೂರು ರಾಸಾಯನಿಕ ಕಚೇರಿಗೆ ಹೋಗಿ ಬಾಟ್ಲಿಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬೆಳ್ತಂಗಡಿ ವಲಯ ಅಬಕಾರಿ ಉಪ ನಿರೀಕ್ಷಕರಿಗೆ ತಂದು ಒಪ್ಪಿಸಿರುತ್ತೇನೆ.ರಾಸಾಯನಿಕ ತಜ್ಞರು ನೀಡಿದ ವರದಿಯನ್ನು ನೋಡಿದ್ದು ಅದರ ಛಾಯಾ ಪ್ರತಿಯನ್ನು ನಿಶಾನೆ ಪಿ.1 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಮಾದರಿ ಸೀಸೆಗಳು ಈ ಕೇಸಿಗೆ ಸಂಬಂಧಪಟ್ಟದ್ದು ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದ್ರಿ ಸಾಕ್ಷಿದಾರರು ನೀಡಿರುವ ಹೇಳಿಕೆಯಿಂದ ವಾಹನದ ನೊಂದಣಿ ಮಾಲೀಕರಿಗೆ ಯಾವುದೇ ಪ್ರಯೋಜನಕಾರಿಯಾಗಿರುವುದಿಲ್ಲ.

ಪ್ರಾ.ಸಾ: 2

ಶ್ರೀ ಎಂ.ಮಂಜುನಾಥ ಶೆಟ್ಟಿ,ಪೊಲೀಸ್ ಇನ್ಸ್‌ಪೆಕ್ಟರ್,ಸಿ.ಒ.ಡಿ,ಬೆಂಗಳೂರುರವರು ಪ್ರಕರಣದ ಫಿರ್ಯಾದುದಾರರಾಗಿ ದಿ:13–04–2005 ರಂದು ಆ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು 1996 ಎಪ್ರಿಲ್ ತಿಂಗಳಿನಿಂದ ಮೇ 2000 ರವರೆಗೆ ಬೆಳ್ತಂಗಡಿ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ತಾನು ದಿ:18–3–2000 ರಂದು ಸಂಜೆ 4–00 ಗಂಟೆ ಸಮಯ ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ತನ್ನ ವೃತ್ತ ನಿರೀಕ್ಷಕರ ನಿರ್ದೇಶನದಂತೆ ತನ್ನ ಸಿಬ್ಬಂದಿಗಳನ್ನು ಕೂಡಿಕೊಂಡು,ತಮ್ಮ ಇಲಾಖಾ ಜೀಪಿನಲ್ಲಿ ಲೈಲಾ ಗ್ರಾಮದ ಲೈಲಾ ಜಂಕ್ಷನ್ ಬಳಿ ಕಾಯುತ್ತಿರುವಾಗ ಉಜಿರೆ ಕಡೆಯಿಂದ ಕೆಎ–04 ಪಿ 1444 ನೇ ಒಂದು ಹಸಿರು ಬಣ್ಣದ ಓಮಿನಿ ಕಾರ್‌ನ್ನು ನೋಡಿದೆವು. ಆ ಸಮಯ ತಾವು ಸಮವಸ್ತ್ರದಲ್ಲಿದ್ದು, ಕಾರನ್ನು ನಿಲ್ಲಿಸುವಂತೆ ಸೂಚನೆ ಕೊಟ್ಟೆವು. ಆದರೂ ಅವರ ಸೂಚನೆಯನ್ನು ಲೆಕ್ಕಿಸದೇ ಕಾರು ಬೆಳ್ತಂಗಡಿ ಕಡೆಗೆ ಮುಂದುವರಿಯುವಾಗ ತಮ್ಮ ಇಲಾಖಾ ವಾಹನದಲ್ಲಿ ಶೀತಲ್ ವೈನ್ ಶಾಪ್ ಎದುರು ತಡೆದು ನಿಲ್ಲಿಸಿ, ಆ ಸಮಯ ಸದ್ರಿ ವಾಹನದಲ್ಲಿ ಚಾಲಕನಲ್ಲದೆ ಮುಂಭಾಗದ ಎಡಭಾಗದ ಸೀಟಿನಲ್ಲಿ ಇನ್ನೊಬ್ಬ ವ್ಯಕ್ತಿ ಕುಳಿತಿದ್ದನು. ಸದರಿ ಕಾರನ್ನು ಪರಿಶೀಲಿಸಿದಾಗ ಕಾರಿನಲ್ಲಿ ಮದ್ಯ ತುಂಬಿದ ರಟ್ಟಿನ ಪೆಟ್ಟಿಗೆಗಳಿದ್ದು, ಆ ಬಗ್ಗೆ ಅವರನ್ನು ವಿಚಾರಿಸಲಾಗಿ ಸಮರ್ಪಕ ಉತ್ತರ ಕೊಡಲಿಲ್ಲದ ಕಾರಣ ಸದ್ರಿ ರಟ್ಟಿನ ಪೆಟ್ಟಿಗೆಗಳನ್ನು ತೆರೆದು

ನೋಡಲಾಗಿ ಡಿ.ಎಸ್.ಪಿ ಬ್ಲ್ಯಾಕ್ ,ಡಿ.ಎಸ್.ಪಿ ವಿಸ್ಕಿ ,ಓಲ್ಡ್ ಮಾಂಕ್ ಖೋಡೇನ ರಮ್,ಬ್ಲೂ ರಿಬಾಂಡ್ ಜಿನ್, ಓಲ್ಡ್ ಮೆಡಲ್ ಕಪ್ ವಿಸ್ಕಿ,ಫಿಲಿಕ್ಸ್ ಫ್ಯೆನ್ ವಿಸ್ಕಿ ಹೆಸರುಳ್ಳ ಮದ್ಯವನ್ನು ತುಂಬಿಸಿದ್ದು ಕಂಡು ಬಂತು. ಈ ಬಗ್ಗೆ ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ ಅವರಲ್ಲಿ ಇಲ್ಲವೆಂದು ತಿಳಿಸಿದನು. ಅವರಿಗೆ ಅವರು ಮಾಡಿದ ತಪ್ಪಿನ ಬಗ್ಗೆ ತಿಳಿಸಿ, ಅವರ ಹೆಸರು ಮತ್ತು ವಿಳಾಸ ಕೇಳಲಾಗಿ ಚಾಲಕನ ಹೆಸರು ನಾರಾಯಣ ಹೆಚ್.ಗೌಡ(42 ವರ್ಷ) ಬಿನ್:ಹುಚ್ಚಪ್ಪ,ಡೋರ್ ನಂ.25, 8 ನೇ ಮುಖ್ಯ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು–3. ಹಾಗೂ ಇನ್ನೊಬ್ಬನ ಹೆಸರು ಮಲ್ಲಿಕಾರ್ಜುನ(22 ವರ್ಷ) ಬಿನ್:ದಿ:ಕೆ.ವಿ.ಚಳ್ಳಂ,ವಾಸ:–ನಂ.480,3 ನೇ ಸ್ಟೇಟ್, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು ಎಂಬುದಾಗಿ ತಿಳಿಸಿದರು. ಸದರಿಯವರನ್ನು ಸ್ವಾಧೀನಕ್ಕೆ ತೆಗೆದುಕೊಂಡು,ಪಂಚರನ್ನು ಬರಮಾಡಿಕೊಂಡು, ಕಾರಿನಲ್ಲಿದ್ದ ರಟ್ಟಿನ ಪೆಟ್ಟಿಗೆಗಳಿದ್ದ ಒಟ್ಟು 1 ರಿಂದ 11 ಬಾಕ್ಸ್‌ಗಳಿದ್ದ ಬಾಟ್ಲಿಗಳನ್ನು ಪರಿಶೀಲಿಸಿದೆವು.ಅವುಗಳನ್ನು ಪರಿಶೀಲಿಸಿ ಲೆಕ್ಕ ಮಾಡಿ ಅದರ ವಿವರವನ್ನು ಪಂಚನಾಮೆಯಲ್ಲಿ ಬರೆದಿರುತ್ತೇನೆ. ಹಾಗೂ ಮದ್ಯವನ್ನು ಸಾಗಾಟಕ್ಕೆ ಉಪಯೋಗಿಸಿದ ಕೆಎ–04–ಪಿ–1444 ನೇ ಹಸಿರು ಬಣ್ಣದ ಕಾರನ್ನು ಅಮಾನತ್ತುಗೊಳಿಸಿದೆವು. ತಾವು ವಶಪಡಿಸಿಕೊಂಡ ಮದ್ಯ ತುಂಬಿದ ರಟ್ಟಿನ ಪೆಟ್ಟಿಗೆಗಳಿಂದ ಪ್ರತಿಯೊಂದು ಪೆಟ್ಟಿಗೆಯಿಂದ ಒಂದರಂತೆ 11 ಬಾಟ್ಲಿಗಳನ್ನು ತೆಗೆದು ಮಾದರಿ ಸೀಸೆಗಳನ್ನು ತಯಾರಿಸಿದೆವು. ಸದ್ರಿ ಸೀಸೆಗಳಿಗೆ ಬಟ್ಟೆಯಿಂದ ಬಾಯಿಯನ್ನು ಕಟ್ಟಿ, ಅದಕ್ಕೆ ಅರಗಿನಿಂದ ಎಸ್.ಎಸ್.ಓ ಸೀಲು ಮಾಡಿ ಪಂಚರ ಸಹಿಯಿರುವ ಚೀಟಿಯನ್ನು ಸದ್ರಿ ಬಾಟ್ಲಿಗಳಿಗೆ ಅಂಟಿಸಲಾಯಿತು. ಸದ್ರಿ ಕಾರಿನ ಇಂಜಿನ್ ನಂಬರ್ ಮತ್ತು ಚಾಸಿಸ್ ನಂಬರ್ ಪರಿಶೀಲಿಸಿ ಪಂಚನಾಮೆಯಲ್ಲಿ ನಮೂದಿಸಿದೆವು. ಸದ್ರಿ ಪಂಚನಾಮೆಯನ್ನು ಸಂಜೆ 7 ಗಂಟೆಯಿಂದ 9 ಗಂಟೆವರೆಗೆ ಬರೆಯಲಾಯಿತು. ಸದ್ರಿ ಪಂಚ ನಾಮೆಗೆ ಪಂಚರು ಮತ್ತು ಸಿಬ್ಬಂದಿಯವರು ಸಹಿ ಮಾಡಿರುತ್ತಾರೆ. ತಾನು ಸಹಾ ಸಹಿ ಮಾಡಿರುತ್ತೇನೆ. ನಾವು ಸ್ಥಳದಲ್ಲಿ ತಯಾರಿಸಿದ ಮೂಲ ಪಂಚನಾಮೆಯು ಬೆಳ್ತಂಗಡಿ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿರುತ್ತದೆ. ಅದರ ಛಾಯಾ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ಈಗ ನೋಡಿ ಗುರುತಿಸಿದೆವು. ಅದನ್ನು ನಿಶಾನೆ ಪಿ–2 ಎಂದು ಗುರುತಿಸಲಾಯಿತು. ಅದರ ಮೇಲಿರುವ ತನ್ನ ಸಹಿಯನ್ನು ನಿಶಾನೆ ಪಿ.–2 ಎ ಎಂದು ಗುರುತಿಸಲಾಯಿತು. ಸೊತ್ತು ಮತ್ತು ಆರೋಪಿಗಳೊಂದಿಗೆ ತಮ್ಮ ಠಾಣೆಗೆ ಬಂದು ಒಂದು ವರದಿಯನ್ನು ತಯಾರಿಸಿ ಸದರಿ ವರದಿ ಆಧಾರದ ಮೇಲೆ ಬೆಳ್ತಂಗಡಿ ಠಾಣೆ ಅಪರಾಧ ಸಂ:60/2000 ರಲ್ಲಿ ಪ್ರಕರಣ ನೊಂದಾಯಿಸಿ ಪ್ರ.ವ.ವರದಿಯನ್ನು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೂ ಮತ್ತು ಪ್ರತಿಗಳನ್ನು ತಮ್ಮ ಮೇಲಾಧಿಕಾರಿಗಳಿಗೆ ತಲುಪಿಸಿದೆವು. ಪ್ರ.ವ.ವರದಿಯು ಮೂಲ ಪ್ರತಿ ಜೆ.ಎಂ.ಎಫ್.ಸಿ ನ್ಯಾಯಾಲಯ ದಲ್ಲಿದ್ದು,ಅದರ ಛಾಯಾ ಪ್ರತಿ ಈಗ ಗುರುತಿಸಿದೆವು.ಅದನ್ನು ನಿಶಾನೆ ಪಿ.3 ಎಂದು ಗುರುತಿಸಲಾಯಿತು. ತಾವು ವಶಪಡಿಸಿಕೊಂಡ ಸೊತ್ತುಗಳು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದಂಥ ಸೊತ್ತುಗಳಾದ್ದರಿಂದ ಈ ಬಗ್ಗೆ ಒಂದು ವರದಿಯನ್ನು ತಯಾರಿಸಿ, ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಮಂಗಳೂರು ಇವರಿಗೆ ಸಲ್ಲಿಸಿ ಮತ್ತು ಸೊತ್ತನ್ನು ಹಸ್ತಾಂತರಿಸಲಾಯಿತು. ಸದ್ರಿ ವರದಿಯನ್ನು ಮೂಲ ಪ್ರತಿ ಈಗ ನೋಡಿದೆನು. ಅದನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಆ ದಿನದಂದು ತಾವು ಎಷ್ಟು ವಾಹನಗಳನ್ನು ಲೈಲಾ ಕ್ರಾಸ್‌ನಲ್ಲಿ ಪರಿಶೀಲಿಸಿರುತ್ತೇವೆ ಎಂದರೆ ಈಗ ತನಗೆ ನೆನಪಿಲ್ಲ. ವಾಹನವನ್ನು ತಾವು 10 ರಿಂದ 15 ಗಜ ದೂರದಿಂದ ನೋಡಿರುತ್ತೇವೆ. ಸದ್ರಿ ವಾಹನವು ತಾವು ನಿಂತ ಸ್ಥಳದಲ್ಲಿ ನಿಲ್ಲದೇ ಮುಂದೆ 25 ಗಜ ದೂರ ಹೋಗಿ ಶೀತಲ್ ವೈನ್ಸ್ ಶಾಪಿನ ಹತ್ತಿರ ತಡೆದು ನಿಲ್ಲಿಸಿದೆವು. ರಸ್ತೆಯ ಬದಿ ಜೀಪಿನ ಪಕ್ಕದಲ್ಲಿ ನಿಂತು ತಾವು ವಾಹನವನ್ನು ನಿಲ್ಲಿಸುವಂತೆ ಸೂಚನೆ ಕೊಟ್ಟಿರುತ್ತೇವೆ. ತಾನು ಸದ್ರಿ ವಾಹನವನ್ನು ತಮ್ಮ ವಾಹನದಿಂದ ಓವರ್ ಟೇಕ್ ಮಾಡಿ ಅಡ್ಡಗಟ್ಟಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ಓಮ್ನಿ ಮಾರುತಿ ಕಾರನ್ನು ತಮ್ಮ ಡೀಸಿಲ್ ಜೀಪಿನಲ್ಲಿ ಬೆನ್ನಟ್ಟಿ 25 ಗಜ ದೂರದಲ್ಲಿ ಅದನ್ನು ಅಡ್ಡಗಟ್ಟಿ ನಿಲ್ಲಿಸಲು ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ.ರಟ್ಟಿನ ಪೆಟ್ಟಿಗೆಗಳಿಗೆ ತಾವು ಕ್ರಮ ಸಂಖ್ಯೆ ನೀಡಿಲ್ಲ ಎಂದರೆ ಸರಿ. ಪೆಟ್ಟಿಗೆಗಳ ಮೇಲೆ ತಮ್ಮ ಠಾಣಾ ಅಪರಾಧ ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಪ್ರತಿಯೊಂದು ಬಾಟ್ಲಿಯಿಂದ ತಾವು ಸ್ಯಾಂಪಲ್‌ಗಾಗಿ ಮದ್ಯವನ್ನು ಪ್ರತ್ಯೇಕ ಮಾಡಿಲ್ಲ. ತಾವು ಸ್ಥಳದಲ್ಲಿ ತಯಾರಿಸಿದ ಮಾದರಿ ಬಾಟ್ಲಿಗಳು ಈ ದಿನ ಈ ಪ್ರಾಧಿಕಾರದ ಮುಂದೆ ಇರುವುದಿಲ್ಲ ಎಂದರೆ ಸರಿ. ತಾವು ಆ ದಿನ ಸದ್ರಿ ಮಾರುತಿ ಓಮ್ನಿ ಕಾರಿನಿಂದ ಯಾವುದೇ ಮದ್ಯದ ಪೆಟ್ಟಿಗೆಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ತಾವು ಆ ದಿನ 11 ಬಾಟ್ಲಿಗಳನ್ನು ಹತ್ತಿರದ ಶೀತಲ್ ಬಾರ್ ನಿಂದ ತಂದು ಅವುಗಳನ್ನು ಮಾದರಿಯಾಗಿ ತಯಾರಿಸಿ, ಈ ಸುಳ್ಳು ಮೊಕದ್ದಮೆ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ ಪಿ–2 ಮಹಜರನ್ನು ತಮ್ಮ ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎನ್ನುವುದು ಸರಿಯಲ್ಲ. ಈ ದಿನ ತಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಎಂದು ಸಾಕ್ಷಿ ನುಡಿದಿರುತ್ತಾರೆ. ಸದ್ರಿ ಸಾಕ್ಷಿದಾರರು ನೀಡಿರುವ ಹೇಳಿಕೆಯಿಂದ ವಾಹನದ ನೊಂದಣಿ ಮಾಲೀಕರಿಗೆ ಯಾವುದೇ ಪ್ರಯೋಜನಕಾರಿಯಾಗಿರುವುದಿಲ್ಲ.

ಪ್ರಾ.ಸಾ: 3

ಶ್ರೀ ಬಿ.ಜಯ,ಬಿನ್:ಬಾಡ ಬಂಗೇರಾ,ಪ್ರಾಯ 63 ವರ್ಷ,ನಿವೃತ್ತ ಅಬಕಾರಿ ಉಪ ನಿರೀಕ್ಷಕರು, ದೇವಿಕೃಪಾ, ಬೆಳುವಾಯಿ, ಮಂಗಳೂರು ತಾಲೂಕು ಇವರು ಆ ಪ್ರಕರಣದ ತನಿಖಾಧಿಕಾರಿ ಆಗಿದ್ದು, ಇವರು ದಿ:29–03–2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು 1998 ನೇ ಸೆಪ್ಟೆಂಬರ್ ನಿಂದ ಅಕ್ಟೋಬರ್ 2000 ರವರೆಗೆ ಬೆಳ್ತಂಗಡಿ ಉಪ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿ:04–10–2000 ರಂದು ಈ ಪ್ರಕರಣದ ಕಡತವನ್ನು ಶ್ರೀ ಮಂಜುನಾಥ ಶೆಟ್ಟಿ, ಆರಕ್ಷಕ ಪೊಲೀಸ್ ನಿರೀಕ್ಷಕರು,ಬೆಳ್ತಂಗಡಿ ಇವರಿಂದ ಪಡೆದುಕೊಂಡಿರುತ್ತೇನೆ. ಪ್ರಕರಣದಲ್ಲಿ ಜಪ್ತಿ ಮಾಡಿಕೊಂಡ ಕಾರು ಮತ್ತು ಮದ್ಯದ ಬಾಟಲಿಗಳು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಸಹಾ ಅವರಿಂದ ಪಡೆದುಕೊಂಡೆನು.ದಿ:06–10–2000 ರಂದು ರಾಸಾಯನಿಕ ವಿಶ್ಲೇಷಣೆಗೆ ತಯಾರಿಸಿದ ಮಾದರಿ ಸೀಸೆಗಳನ್ನು ತನ್ನ ಅಬಕಾರಿ ರಕ್ಷಕರಾದ ಶ್ರೀ. ಪಿ.ರತ್ನಾಕರ ಇವರ ಮುಖಾಂತರ ಮಂಗಳೂರಿನ ರಾಸಾಯನಿಕ ತಜ್ಞರಲ್ಲಿಗೆ ಸಲ್ಲಿಸಿರುತ್ತೇನೆ. ಅದರೊಂದಿಗೆ ಕೋರಿಕೆ ಪತ್ರ ಮಾದರಿ ಸೀಲನ್ನು ಸಹಾ ಸಲ್ಲಿಸಿರುತ್ತೇನೆ. ದಿ:10–10–2000 ರಂದು ರಾಸಾಯನಿಕ ವಿಶ್ಲೇಷಕರ ವರದಿ ಕೈಸೇರಿದ್ದು,ಬಳಿಕ ತಜ್ಞರು ಪರೀಕ್ಷಿಸಿದ ಮಾದರಿ ಸೀಸೆಗಳನ್ನು ರತ್ನಾಕರ ಮುಖಾಂತರ ಪಡೆದುಕೊಂಡೆನು. ದಿ:11–10–2000 ರಂದು ವಶಪಡಿಸಿಕೊಂಡ ಮದ್ಯವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರಿ ಒಂದು ವರದಿಯನ್ನು ಅಬಕಾರಿ ಅಧೀಕ್ಷಕರಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ನೀಡಲಾಗಿದ್ದು, ಸದ್ರಿ ಆದೇಶದಂತೆ ಮದ್ಯವನ್ನು ಸನ್ನದುದಾರರಿಗೆ ಸರಕಾರದ ಪರವಾಗಿ ಮಾರಾಟ ಮಾಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಾರೋಪಣ ಪಟ್ಟಿಯನ್ನು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಈ ಪ್ರಕರಣದಲ್ಲಿ ವಾಹನದ ನೊಂದಣಿ ಮಾಲೀಕರು ತಕ್ಷೀರಿನಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳನ್ನು ತಾನು ಪಡೆದುಕೊಂಡಿಲ್ಲ. ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸುವಾಗ ವಾಹನದ ಮಾಲೀಕರನ್ನು ಆರೋಪಿ ಎಂದು ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ. ಸರಿಯಾಗಿ ತನಿಖೆ ಮಾಡದೇ ತಾನು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ. ಈ ಮೊಕದ್ದಮೆಗೆ ಮತ್ತು ವಾಹನದ ನೊಂದಣಿ ಮಾಲೀಕರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದ್ರಿ ಸಾಕ್ಷಿದಾರರು ನೀಡಿರುವ ಹೇಳಿಕೆಯಿಂದ ವಾಹನದ ನೊಂದಣಿ ಮಾಲೀಕರಿಗೆ ಯಾವುದೇ ಪ್ರಯೋಜನ ಕಾರಿಯಾಗಿರುವುದಿಲ್ಲ.

ಸಾಕ್ಷಿದಾರರು ನೀಡಿರುವ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಸಂಬಂಧಿಸಿ ಮಹಜರಿಗೆ ಒಂದಕ್ಕೊಂದು ಪೂರಕವಾಗಿದ್ದು, ಅದಲ್ಲದೆ ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಮದ್ಯ ದಾಸ್ತಾನು ಹೊಂದಿ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ಮತ್ತು ಪ್ರತಿರಕ್ಷೆ ಸಾಕ್ಷಿಗಳನ್ನು ಹಾಜರುಪಡಿಸಲು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳನ್ನು ಅರ್ಜಿದಾರರು ಹಾಗೂ ಅವರ ಪರ ವಕೀಲರು ಸ್ವೀಕರಿಸಿದರೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜರಾಗಿರುವುದಿಲ್ಲ. ವಾಹನದ ಮಾಲೀಕರಿಗೆ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಲು ಹಾಜರಾಗದಿರುವುದನ್ನು ಗಮನಿಸಿದಾಗ, ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಗೆ ತೊಡಗಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ ಹಾಗೂ ವಾಹನದ ಮಾಲೀಕರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಕಾರಣ ಕೇಳಿ ನೋಟೀಸನ್ನು ದಿ: 22–7–2009 ರಂದು ನೋಂದಣಿ ಅಂಚೆ ನೀಡಲಾಗಿದ್ದರೂ, ಅದಕ್ಕೆ ಉತ್ತರವನ್ನು ನೀಡಿರುವುದಿಲ್ಲ. ಹಾಗೂ ಮಾನ್ಯ ಸೆಷೆನ್ಸ್ ನ್ಯಾಯಾಲಯ,ದ.ಕ ಜಿಲ್ಲೆ,ಮಂಗಳೂರು ಇವರ ಆದೇಶದಂತೆ ವಾಹನ ಮಾಲೀಕರಿಗೆ ಮಧ್ಯಂತರ ಬಿಡುಗಡೆಗೊಂಡಿರುವ ವಾಹನವನ್ನು ಷರತ್ತಿಗೊಳಪಟ್ಟು, ಈ ಪ್ರಾಧಿಕಾರಕ್ಕೆ ಹಾಜರುಪಡಿಸಲು ಹಲವಾರು ಬಾರಿ ನೋಟೀಸುಗಳನ್ನು ನೀಡಿದರೂ ಈ ಪ್ರಾಧಿಕಾರದ ಮುಂದೆ ಇದುವರೆಗೂ ಹಾಜರು ಪಡಿಸಿ ರುವುದಿಲ್ಲ. ಹಾಗೂ ಅವರು ಖುದ್ದಾಗಿ ನ್ಯಾಯಾಲಯದ ಕಲಾಪ ದಿನಾಂಕದಂದು ಇದುವರೆಗೂ ಹಾಜರಾಗಿ, ತಮ್ಮ ರಕ್ಷಣಾ ಸಾಕ್ಷಿ ಹೇಳಿಕೆಯನ್ನು ನೀಡಿರುವುದಿಲ್ಲ. ಇದು ಅವರ ಕರ್ತವ್ಯ ವಾಗಿದ್ದು,ಇದರಿಂದ ಅವರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಮಾರುತಿ ಓಮ್ನಿ ಕಾರು ಸಂಖ್ಯೆ: ಕೆಎ–04–ಪಿ–1444 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/476/ಡಿಟಿಸಿಆರ್/1999–2000, ದಿನಾಂಕ:27ನೇ ನವೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು,ಬೆಳ್ತಂಗಡಿ ಪೊಲೀಸ್ ಠಾಣೆ, ಬೆಳ್ತಂಗಡಿ ಇವರ ತಕ್ಷೀರು ಸಂ: 60/2000 ದಿ:18–03–2000 ರಲ್ಲಿ ಜಪ್ತುಪಡಿಸಿರುವ ವಾಹನ ಮಾರುತಿ ಓಮ್ನಿ ಕಾರು ಸಂಖ್ಯೆ: ಕೆಎ–04–ಪಿ–1444ನ್ನು ಈ ಪ್ರಾಧಿಕಾರದ ಆದೇಶದ ಸಂಖ್ಯೆ: ಎಸ್‌ಡಿಕೆ/476/ ಡಿಟಿಸಿಆರ್/ 1999–2000 ದಿ: 12–07–2000 ರಲ್ಲಿ ವಾಹನದ ಆರ್.ಸಿ. ಮಾಲೀಕರಾದ ಶ್ರೀಮತಿ ರಾಜೇಶ್ವರಿ ಎನ್.ಕೋಂ:ನಾರಾಯಣ ಹೆಚ್.,ನಂ.252/ಬಿ,12 ನೇ ಕ್ರಾಸ್,6 ನೇ ಮೈನ್ ರೋಡ್,ವ್ಯಾಲಿಕಾವಳ್ ರೋಡ್,ಬೆಂಗಳೂರು–560003 ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಆದೇಶವನ್ನು ರದ್ದುಗೊಳಿಸಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ವಾಹನವನ್ನು ಈ ಆದೇಶದ 30 ದಿವಸದೊಳಗೆ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ಕಚೇರಿಯಲ್ಲಿ ಹಾಜರುಪಡಿಸಲು ಆದೇಶಿಸಿದೆ. ತಪ್ಪಿದಲ್ಲಿ, ಇದರ ಮೌಲ್ಯಕ್ಕೆ ಅನುಗುಣವಾಗಿ ಜಾಮೀನುದಾರರಾದ ಶ್ರೀ ರಾಮರೆಡ್ಡಿ ಬಿನ್:ದಿ:ತಿಮ್ಮರೆಡ್ಡಿ,ವಾಸ:–ಚಿಕ್ಕಬೇಗೂರು ವಿಲೇಜ್,ಕಸಬಾ ಹೋಬಳಿ,ಕನಕಪುರ ತಾಲೂಕು, ಬೆಂಗಳೂರುರವರು ಈ ಪ್ರಾಧಿಕಾರಕ್ಕೆ ನೀಡಿರುವ ಜಾಮೀನು ಪ್ರಮಾಣ ಪತ್ರ (ಬಾಂಡ್) ಮೌಲ್ಯವನ್ನು ಅವರು ಕನಕಪುರ ತಾಲೂಕು, ಕಸಬ ಹೋಬಳಿ, ಚಿಕ್ಕಬೇಲೂರು,ಸರ್ವೆ ನಂಬ್ರ 50 ಖಾತೆ ಸಂ:109ರ 4.20ಎಕ್ರೆ ಜಮೀನಿನ ಮೇಲೆ ಸದ್ರಿ ಬಾಂಡ್ ಮೌಲ್ಯ ರೂ.1,50,000/–ನ್ನು ಸರಕಾರಿ ಬಾಕಿಗಳಾಗಿ ಪರಿಗಣಿಸಿ, ಮುಂದಿನ ವಸೂಲಿ ಕ್ರಮ ಜರುಗಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27–11–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.–1: ಶ್ರೀ ರತ್ನಾಕರ.ಪಿ,ಅಬಕಾರಿ ರಕ್ಷಕ
ಪ್ರಾ.ಸಾ.–2: ಶ್ರೀ ಎಂ.ಮಂಜುನಾಥ ಶೆಟ್ಟಿ,ಪೊಲೀಸ್ ನಿರೀಕ್ಷಕರು
ಪ್ರಾ.ಸಾ.–3: ಶ್ರೀ ಬಿ.ಜಯ,ನಿವೃತ್ತ ಅಬಕಾರಿ ಉಪ ನಿರೀಕ್ಷಕರು.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1	:	ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–2	:	ಮಹಜರಿನ ಪ್ರತಿ.
ನಿಶಾನೆ ಪಿ–2ಎ	:	ಮಹಜರಿನಲ್ಲಿರುವ ಫಿರ್ಯಾದುದಾರರ ಸಹಿ
ನಿಶಾನೆ ಪಿ–3	:	ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–4	:	ಸೊತ್ತುಗಳ ಪಟ್ಟಿ
ನಿಶಾನೆ ಪಿ–5	:	ತನಿಖಾ ವರದಿ

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:–

–ಇಲ್ಲ–

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

–ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1273

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/250/ಡಿಟಿಸಿಆರ್/2008–09, ದಿನಾಂಕ:25ನೇ ನವೆಂಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ವಿಟ್ಲ ಪೊಲೀಸ್ ಠಾಣೆ, ವಿಟ್ಲ.

ಆರೋಪಿಗಳು:

1) ಅಶ್ರು ಯಾನೆ ಅಶ್ರಫ್, ಧರ್ಮತಡ್ಕ, ಪಂಜಲ್‌ಕಾಮ (ಚಾಲಕ)–(ಪರಾರಿಯಾಗಿರುತ್ತಾರೆ)
2) ಲತೀಫ್ ಯಾನೆ ಅಬ್ದುಲ್ ಲತೀಫ್, ಪೆರುವಾಯಿ ನಿವಾಸಿ. (ಪರಾರಿಯಾಗಿರುತ್ತಾರೆ)
3) ಬಾಯಿಕಟ್ಟೆ ಅಜೀಜ್. (ಪರಾರಿಯಾಗಿರುತ್ತಾರೆ)
4) ವಾಹನ ಮಾಲೀಕರು ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:14–12–2008 ರಂದು ಬಂಟ್ವಾಳ ತಾಲೂಕು ಕೇಪು ಗ್ರಾಮದ ಸಾರಡ್ಕ ಚೆಕ್‌ಪೋಸ್ಟ್ ಬಳಿ ವಿಟ್ಲ–ಕಾನಿಂಗಾಡ್(ಕಾಸರಗೋಡು) ಸಾರ್ವಜನಿಕ ರಸ್ತೆಯಲ್ಲಿ ರಾತ್ರಿ ಸುಮಾರು 20–15 ಗಂಟೆ ಸಮಯದಲ್ಲಿ ಸಾರಡ್ಕ ಪೊಲೀಸ್ ಚೆಕ್‌ಪೋಸ್ಟ್ ಕರ್ತವ್ಯದಲ್ಲಿದ್ದ ಪಿ.ಸಿ.ನಂ:1749 ಇವರು ದೂರವಾಣಿ ಮೂಲಕ ಫಿರ್ಯಾದುದಾರರಿಗೆ ತಿಳಿಸಿದ್ದು, ತಾನು ಚೆಕ್‌ಪೋಸ್ಟ್ ಕರ್ತವ್ಯದಲ್ಲಿದ್ದಾಗ, ಒಂದು ಬಿಳಿ ಬಣ್ಣದ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ಕೇರಳ ಕಡೆಯಿಂದ ಅಡ್ಯನಡ್ಕ ಕಡೆಗೆ ಧಾವಿಸಿ ಬರುತ್ತಿರುವುದನ್ನು ಕಂಡು ತಪಾಸಣೆಗೆಂದು ನಿಲ್ಲಿಸಲು ಸೂಚಿಸಿರುವ ಮೇರೆಗೆ, ಆಲ್ಟೋ ಕಾರಿನಲ್ಲಿದ್ದ ಚಾಲಕ ಹಾಗೂ ಸಹಾಚಾಲಕ ಓಡಿ ಪರಾರಿಯಾಗಿರುತ್ತಾರೆ. ಕಾರಿನಲ್ಲಿದ್ದ ಪಾಲಿಥಿನ್ ಚೀಲದಲ್ಲಿ ಸಾರಾಯಿ ಸ್ಯಾಚೆಟ್‌ಗಳಿರುವುದು ಕಂಡು ಬಂತು. ನಂತರ ತಮ್ಮ ಇಲಾಖಾ ಜೀಪಿನಲ್ಲಿ ಸಿಬ್ಬಂದಿಗಳೊಂದಿಗೆ ಕೂಡಿಕೊಂಡು ಕೇಪು ಗ್ರಾಮದ ಸಾರಡ್ಕ ಪೊಲೀಸ್ ಚೆಕ್‌ಪೋಸ್ಟ್ ಬಳಿಗೆ ಧಾವಿಸಿ, ಆಲ್ಟೊ ಕಾರು ಕೆಎಲ್–54–7009 ನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಒಂದು ಬಿಳಿ ಬಣ್ಣದ ಪಾಲಿಥಿನ್ ಚೀಲದ ಕಟ್ಟು ಇದ್ದು, ಅದು ಕೇರಳ ಕಡೆಯಿಂದ ಕೇರಳ ಪೊಲೀಸರು ಕಾರನ್ನು ಬೆನ್ನಟ್ಟಿದ್ದು, ಸದರಿ ವಾಹನವು ಕರ್ನಾಟಕ ಕಡೆಯಿಂದ ಒಳ ರಸ್ತೆಯಾಗಿ ಕೇರಳಕ್ಕೆ ಹೋಗಿದ್ದನ್ನು ಕೇರಳ ಪೊಲೀಸರು ಹಿಂಬಾಲಿಸಿದ ಮಾಹಿತಿ ತಿಳಿಸಿರುವುದಲ್ಲದೆ, ಸದರಿ ಕಾರಿನ ಚಾಲಕನ ಹೆಸರು ಅಶ್ರು ಯಾನೆ ಅಶ್ರಫ್, ಧರ್ಮತಡ್ಕ, ಪಂಜಲವಾಸಿ ಇನ್ನೊಬ್ಬ ಲತೀಫ್ ಯಾನೆ ಅಬ್ದುಲ್ ಅತೀಫ್, ಪೆರುವಾಯಿ ಹಾಗೂ ಸದರಿ ವಾಹನವು ಬಾಯಿಕಟ್ಟೆ ಅಜೀಜ್ ಎಂಬುವವರಿಗೆ ಸೇರಿರುವುದಾಗಿ ಹಾಗೂ ಸದರಿ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ತಿಳಿಸಿರುತ್ತಾರೆ. ಸದರಿ ವಾಹನದಲ್ಲಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಿರುವುದು ಖಚಿತವಾಗಿದ್ದು, ಇದು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧವಾಗಿರುವುದರಿಂದ, ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು, ಅವರ ಸಮಕ್ಷಮ ಕಾರನ್ನು ಪರಿಶೀಲಿಸಿದಾಗ, ಅದರ ಒಳಗೆ ಒಂದು ಬಿಳಿ ಬಣ್ಣದ ಪಾಲಿಥಿನ್ ಚೀಲದಲ್ಲಿ 100 ಎಂ.ಎಲ್.ನ ಸಾರಾಯಿ ತುಂಬಿದ 350 ಸ್ಯಾಚೆಟ್‌ಗಳಿದ್ದು, ಈ ಸಾರಾಯಿ ತೊಟ್ಟೆಗಳಲ್ಲಿ ಕೆಂಪು ಬಣ್ಣದಲ್ಲಿ ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಿದ ಮೈಶುಗರ್ ಕಂಪೆನಿ ಲಿಮಿಟೆಡ್, ಮಂಡ್ಯ ಎಂದು ಬರೆದಿರುತ್ತದೆ. ಇದರಿಂದ ಸ್ಯಾಂಪಲ್‌ಗಾಗಿ 100 ಎಂ.ಎಲ್.ನ 2 ಸಾರಾಯಿ ಸ್ಯಾಚೆಟ್‌ಗಳನ್ನು ತೆಗೆದಿರಿಸಿ ಅದಕ್ಕೆ ಬಿಳಿ ಬಟ್ಟೆಯಿಂದ ಹೊಲಿದು, ಎಸ್.ಹೆಚ್.ಒ ಎಂಬ ಅರಗು ಸೀಲ್ ಹಾಕಿ ಮುಂದಿನ ಸೂಕ್ತ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸಾಗಾಟಕ್ಕೆ ಬಳಸಿದ ಬಿಳಿ ಬಣ್ಣದ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ಆಗಿದ್ದು, ಇದರ ಎದುರು ಹಿಂಬದಿಯ ಗ್ಲಾಸುಗಳು ಹಾಗೂ ಹಿಂಬದಿಯ ಬಲಭಾಗದ ಬಾಗಿಲಿನ ಗ್ಲಾಸುಗಳು ಹುಡಿಯಾಗಿದ್ದು, ಇದರ ಚಾಸೀಸ್ ನಂ: X MA 3EYD81SO10092438 X H7 ಹಾಗೂ ಇಂಜೀನ್ ನಂಬರು F8DN4200834 ಇರುವುದಾಗಿ ಮಹಜರಿನಲ್ಲಿ ನಮೂದಿಸಿರುತ್ತಾರೆ ಹಾಗೂ ಇದು ಮಾರುತಿ ಕಂಪೆನಿಯ ಆಲ್ಟೊ ಕಾರು ಆಗಿರುತ್ತದೆ. ಸದರಿ ಸೊತ್ತುಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32,34, 43(ಎ) ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪರಾರಿಯಾದ ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ: 195/2008 ದಿ:14–12–2008 ರಂತೆ ಮೊಕದ್ದಮೆಯನ್ನು ದಾಖಲೆ ಮಾಡಿ, ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಆಲ್ಟೊ ಕಾರನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:3–2–2009 ರಂದು ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ:ಎಸ್‌ಡಿಕೆ/250/ಡಿಟಿಸಿಆರ್/2008–09 ದಿ:16–3–2009 ರಂತೆ ಪ್ರಕರಣದಲ್ಲಿ

ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಆಲ್ಟೊ ಕಾರನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:30–9–2009 ರಂದು ಹಸ್ತಾಂತರಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ /6/2008–09 ದಿ: 5–10–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ: ಇ–58–1 ದಿ:3–3–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿಯ ಮದ್ಯಸಾರದ ಪ್ರಮಾಣ ಶೇ.27 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯೊಂದಿಗೆ ಅಬಕಾರಿ ಉಪ ಅಧೀಕ್ಷಕರು,ಬಂಟ್ವಾಳ ಉಪ ವಿಭಾಗ,ಬಂಟ್ವಾಳ ಇವರ ವರದಿ ಸಂ:16/2009–10 ದಿ:5–10–2009 ರಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಸಿ ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ಅಧೀಕ್ಷಕರು ಹಾಗೂ ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/250/ಡಿಟಿಸಿಆರ್/2008–09 ದಿ:27–10–2009 ರ ಆದೇಶದಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13–7–2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶವಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12–9–2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಹಾಗೂ ಮಾಧ್ಯಮಗಳ ಪ್ರತಿನಿಧಿಗಳ ಸಮಕ್ಷಮ ಅಬಕಾರಿ ಆಯುಕ್ತರ ಸುತ್ತೋಲೆಯನ್ನು ಅನುಸರಿಸಿ, ಮುಟ್ಟುಗೋಲು ಹಾಕಿಕೊಳ್ಳಲಾದ 34–800 ಲೀಟರ್ ಸಾರಾಯಿ ಸ್ಯಾಚೆಟ್‌ಗಳನ್ನು ದಿ:11–11–2009 ರಂದು ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ/6/2008–09 ದಿ:12–11–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರು ಸಂ: ಕೆಎಲ್–54–7009 ರ ಬಿ ಎಕ್ಸ್‌ಟ್ಯಾಕ್ಟ್ ವರದಿಯನ್ನು ಪಡೆಯಲು ಕೇರಳ ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪಟ್ಟಿಯನ್ನು ಪರಿಶೀಲಿಸಲಾಗಿ, ಕೆಎಲ್–54–7009 ಎಂಬ ನೋಂದಣಿ ಸಂಖ್ಯೆ ಇರುವ ಯಾವುದೇ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಇರುವುದಿಲ್ಲ ಎಂಬ ಅಂಶವು ಗಮನಕ್ಕೆ ಬಂದಿದ್ದು, ಇದರಿಂದ ಆರೋಪಿಗಳು ವಾಹನಕ್ಕೆ ನಕಲಿ ನಂಬರು ಪ್ಲೇಟನ್ನು ಅಳವಡಿಸಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಇದಲ್ಲದೆ ವಾಹನವು ಜಪ್ತಾಗಿ ಈಗಾಗಲೇ 11 ತಿಂಗಳು ಮೀರಿದ್ದರೂ ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ, ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಕಚೇರಿಯನ್ನಾಗಲಿ ಅಥವಾ ತಮ್ಮ ಕಚೇರಿಯನ್ನಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರು ಸಂ: ಕೆಎಲ್–54–7009 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:14–12–2008 ರಂದು ಆಲ್ಟೊ ಕಾರು ಸಂ: ಕೆಎಲ್–54–7009 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣೆಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣೆಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ

ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಮಹಜರು ಸಾಕ್ಷಿದಾರರಾದ ಶ್ರೀ.ಕರುಣಾಕರ, ಪಿ.ಸಿ.ನಂ:1361, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಿ:24-11-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:3-7-2000 ರಿಂದ ದಿ:22-10-2009 ರವರೆಗೆ ವಿಟ್ಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದೆನು. ತಾನು ದಿ:14-12-2008 ರಂದು ಪಿ.ಎಸ್.ಐ. ಇವರು ರಜೆಯಲ್ಲಿದ್ದುದರಿಂದ, ಠಾಣಾ ಉಸ್ತುವಾರಿಯಲ್ಲಿ ಎ.ಎಸ್.ಐ. ಎನ್.ಐತಪ್ಪರವರೊಂದಿಗೆ ರಾತ್ರಿ ಸುಮಾರು 8-15 ಗಂಟೆಗೆ ಬಂಟ್ವಾಳ ತಾಲೂಕು ಕೇಪು ಗ್ರಾಮದ ಸಾರಡ್ಕ ಚೆಕ್‌ಪೋಸ್ಟ್ ಕರ್ತವ್ಯದಲ್ಲಿದ್ದ ಪಿ.ಸಿ. ನಂ:1749 ನೇ ಸೀತಾರಾಮರವರು ಪ್ರಭಾರದಲ್ಲಿದ್ದ ಎ.ಎಸ್.ಐ. ಐತಪ್ಪರವರಿಗೆ ದೂರವಾಣಿ ಮೂಲಕ ಕರ್ತವ್ಯದಲ್ಲಿದ್ದ ಸಮಯದಲ್ಲಿ ಆಲ್ಟೊ ಕಾರು ಕೇರಳ ಕಡೆಯಿಂದ ಅಡ್ಯನಡ್ಕ ಕಡೆಗೆ ಬರುತ್ತಿದ್ದಾಗ, ಚೆಕ್ ಮಾಡುವರೇ ನಿಲ್ಲಿಸಿದಾಗ, ಆಲ್ಟೊ ಕಾರಿನ ಚಾಲಕ ಮತ್ತು ಇನ್ನೊಬ್ಬ ಬಾಗಿಲು ತೆರೆದು ಓಡಿ ತಲೆಮರೆಸಿಕೊಂಡರು ಎಂದು ತಿಳಿಸಿದಂತೆ, ಎ.ಎಸ್.ಐ. ಐತಪ್ಪರವರ ಜೊತೆಯಲ್ಲಿ ಹೆಚ್.ಸಿ.648 ಬಿ.ಬಾಬು ಗೌಡ, ಪಿ.ಸಿ.1314 ರಘುರಾಮ ಹೆಗ್ಡೆ, ಪಿ.ಸಿ.641 ಶ್ರೀಧರರವರ ಜೊತೆಯಲ್ಲಿ ತನ್ನನ್ನು ಕರೆದುಕೊಂಡು ಠಾಣೆಯಿಂದ ಹೊರಟು ಕೇಪು ಗ್ರಾಮದ ಸಾರಡ್ಕ ಎಂಬಲ್ಲಿ 20-45 ಗಂಟೆಗೆ ತಲುಪಿದಾಗ, ಅಲ್ಲಿ ಒಂದು ಬಿಳಿ ಆಲ್ಟೊ ಕಾರು ಇದ್ದು ಹಾಗೂ ಪಿ.ಸಿ.1749 ಸೀತಾರಾಮರವರು ಇದ್ದು, ಅದರ ನಂಬರು ನೋಡಲಾಗಿ, ಕೆಎಲ್-54-7009 ಆಗಿದ್ದು, ಅದರ ಒಳಗಡೆ ನೋಡಲಾಗಿ, ಹಿಂಬದಿ ಸೀಟಿನಲ್ಲಿ ಒಂದು ಬಿಳಿ ಬಣ್ಣದ ಪಾಲಿಥಿನ್ ಚೀಲದ ಕಟ್ಟು ಇದ್ದು, ಅದನ್ನು ಎ.ಎಸ್.ಐ.ರವರ ಆದೇಶದಂತೆ ನೋಡಲಾಗಿ, ಅದರಲ್ಲಿ ಸಾರಾಯಿ ಸ್ಯಾಚೆಟ್‌ಗಳು ಇರುವುದು ಕಂಡು ಬಂತು. ಇದರ ಬಗ್ಗೆ ಯಾವುದೇ ಪರವಾನಿಗೆ ಯಾ ದಾಖಲೆ ಪತ್ರ ಇಲ್ಲದೆ ಸಾಗಾಟ ಮಾಡುತ್ತಿರುವುದು ಖಚಿತವಾಗಿರುವುದರಿಂದ, ಪಂಚರಾದ ಮೊಹಿದ್ದೀನ್ ಕುಂಞ್ಞಿ ಮತ್ತು ಬಾಲಕೃಷ್ಣರವರನ್ನು ಎ.ಎಸ್.ಐ.ರವರು ಬರಮಾಡಿಕೊಂಡು, ಅವರ ಸಮಕ್ಷಮ ಅಜಮಾಯಿಸಲಾಗಿ, ಬಿಳಿ ಬಣ್ಣದ ಪಾಲಿಥಿನ್ ಚೀಲದೊಳಗೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು 350 ಇದ್ದು, ಸಾರಾಯಿ ತೊಟ್ಟೆಗಳ ಅಂದಾಜು ಮೌಲ್ಯ ರೂ.5,000/- ಹಾಗೂ ಸಾಗಾಟ ಮಾಡಿದ ಕಾರಿನ ಬೆಲೆ ಅಂದಾಜು ಸುಮಾರು ರೂ.3,00,000/- ಇದನ್ನು ಅಶ್ರು ಯಾನೆ ಅಶ್ರಫ್, ಲತೀಫ್ ಯಾನೆ ಅಬ್ದುಲ್ ಲತೀಫ್ ಮತ್ತು ಅಜೀಜ್‌ರವರುಗಳು ಕೊಂಡು ಹೋಗಿರುವುದಾಗಿ ತಿಳಿಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆಯಂತೆ ಅಪರಾಧವಾಗಿರುವುದರಿಂದ, ಮುಂದಿನ ಕ್ರಮದ ಬಗ್ಗೆ ಮಹಜರು ಮುಖಾಂತರ ಸೊತ್ತುಗಳನ್ನು ಠಾಣೆಗೆ ತಂದಿರಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಎನ್.ಐತಪ್ಪ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಬಂಟ್ವಾಳ ನಗರ ಪೊಲೀಸ್ ಠಾಣೆ, ಬಂಟ್ವಾಳ ಇವರು ದಿ:24-11-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು ದಿ:29-11-2001 ರಿಂದ ದಿ:3-11-2009 ರವರೆಗೆ ವಿಟ್ಲ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯನಿರ್ವಹಿಸುತ್ತಿದ್ದೆನು. ತಕ್ಷೀರು ದಾಖಲಿಸಿದ ದಿ:14-12-2008 ರಂದು ಪಿ.ಎಸ್.ಐ. ಇವರು ರಜೆಯಲ್ಲಿದ್ದುದರಿಂದ, ಠಾಣಾ ಉಸ್ತುವಾರಿಯಲ್ಲಿ ನಾನು ಇದ್ದು, ರಾತ್ರಿ ಸುಮಾರು 8-15 ಗಂಟೆಗೆ ಬಂಟ್ವಾಳ ತಾಲೂಕು ಕೇಪು ಗ್ರಾಮದ ಸಾರಡ್ಕ ಚೆಕ್‌ಪೋಸ್ಟ್ ಕರ್ತವ್ಯದಲ್ಲಿದ್ದ ಪಿ.ಸಿ. ನಂ:1749 ನೇ ಸೀತಾರಾಮರವರು ಪ್ರಭಾರದಲ್ಲಿದ್ದ ನನಗೆ ದೂರವಾಣಿ ಮೂಲಕ ಕರ್ತವ್ಯದಲ್ಲಿದ್ದ ಸಮಯದಲ್ಲಿ, ಆಲ್ಟೊ ಕಾರು ಕೇರಳ ಕಡೆಯಿಂದ ಅಡ್ಯನಡ್ಕ ಕಡೆಗೆ ಬರುತ್ತಿದ್ದಾಗ ಚೆಕ್ ಮಾಡುವರೇ ನಿಲ್ಲಿಸಿದಾಗ, ಆಲ್ಟೊ ಕಾರಿನ ಚಾಲಕ ಮತ್ತು ಇನ್ನೊಬ್ಬ ಬಾಗಿಲು ತೆರೆದು ಓಡಿ ತಲೆಮರೆಸಿಕೊಂಡರು ಎಂದು ತಿಳಿಸಿದಂತೆ, ತನ್ನ ಜೊತೆಯಲ್ಲಿ ಹೆಚ್.ಸಿ.648 ಬಿ.ಬಾಬು ಗೌಡ, ಪಿ.ಸಿ.1314 ರಘುರಾಮ ಹೆಗ್ಡೆ, ಪಿ.ಸಿ.641 ಶ್ರೀಧರ, ಪಿ.ಸಿ.1361 ಕರುಣಾಕರರವರನ್ನು ಜೊತೆಯಲ್ಲಿ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಠಾಣೆಯಿಂದ ಹೊರಟು ಕೇಪು ಗ್ರಾಮದ ಸಾರಡ್ಕ ಎಂಬಲ್ಲಿ 20-45 ಗಂಟೆಗೆ ತಲುಪಿದಾಗ, ಅಲ್ಲಿ ಒಂದು ಬಿಳಿ ಆಲ್ಟೊ ಕಾರು ಇದ್ದು ಹಾಗೂ ಪಿ.ಸಿ.1749 ಸೀತಾರಾಮರವರು ಇದ್ದು, ಅದರ ನಂಬರು ನೋಡಲಾಗಿ, ಕೆಎಲ್-54-7009 ಆಗಿದ್ದು, ಈ ಕಾರನ್ನು ಕೇರಳ ಕಡೆಯಿಂದ ಕೇರಳ ಪೊಲೀಸರು ಬೆನ್ನಟ್ಟಿದಾಗಿಯೂ, ಈ ವಾಹನವು ಕರ್ನಾಟಕ ಕಡೆಯಿಂದ ಒಳರಸ್ತೆಯಿಂದ ಕೇರಳಕ್ಕೆ ಹೋಗಿದ್ದನ್ನು ಕೇರಳ ಪೊಲೀಸರು ಹಿಂಬಾಲಿಸಿಕೊಂಡು ಬಂದಿರುವುದಾಗಿ ಮಾಹಿತಿ ಇರುವುದಲ್ಲದೆ, ಈ ಕಾರಿನಲ್ಲಿದ್ದ ಚಾಲಕ ಅಶ್ರು ಯಾನೆ ಅಶ್ರಫ್ ಧರ್ಮತಡ್ಕ ಪಚ್ಚಂಬಳ ಕಾಸರಗೋಡು ತಾಲೂಕು, ಲತೀಫ್ ಯಾನೆ ಅಬ್ದುಲ್

ಲತೀಫ್ ಪೆರ್ಮುದೆ ಮನೆ, ಪೈವಳಿಕೆ ಗ್ರಾಮ ವಾಸಿ ಮತ್ತು ಈ ಕಾರು ಅಜೀಜ್‌ರವರಿಗೆ ಸೇರಿದ್ದಾಗಿ ಮಾಹಿತಿ ದೊರೆತ್ತಿರುವುದಾಗಿ, ಪಿ.ಸಿ.1749 ಸೀತಾರಾಮರವರು ತಿಳಿಸಿರುತ್ತಾರೆ. ಈ ವಾಹನವನ್ನು ಯಾವುದೇ ಲೈಸನ್ಸು ಯಾ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದಾಗಿ, ಇದು ಅಬಕಾರಿ ಕಾಯಿದೆಯಡಿ ಅಪರಾಧವಾಗಿರುವುದರಿಂದ, ಸ್ಥಳಕ್ಕೆ ಇಬ್ಬರು ಪಂಚರಾದ ಮೊಹಿದ್ದೀನ್ ಕುಂಞ್ಞಿ ಮತ್ತು ಬಾಲಕೃಷ್ಣರವರನ್ನು ಬರಮಾಡಿಸಿಕೊಂಡು, ಇವರ ಸಮಕ್ಷಮದಲ್ಲಿ ವಾಹನವನ್ನು ಅಜಮಾಯಿಸಿ ವಿವರವಾದ ಮಹಜರನ್ನು ರಾತ್ರಿ 21–00 ಗಂಟೆಯಿಂದ 21–45 ಗಂಟೆಯ ತನಕ ಸ್ಥಳದಲ್ಲಿಯೇ ರಸ್ತೆಯ ದಾರಿದೀಪದ ಬೆಳಕಿನ ಸಹಾಯದಿಂದ ಬರೆಯಲಾಯಿತು. ವಿವರ ಈ ಕೆಳಗಿನಂತಿದೆ. ಕಾರಿನ ಒಳಗಡೆ ನೋಡಲಾಗಿ, ಹಿಂಬದಿ ಸೀಟಿನಲ್ಲಿ ಒಂದು ಬಿಳಿ ಬಣ್ಣದ ಪಾಲಿಥಿನ್ ಚೀಲದ ಕಟ್ಟು ಇದ್ದು ಅದನ್ನು ನೋಡಲಾಗಿ, ಅದರಲ್ಲಿ ಸಾರಾಯಿ ಸ್ಯಾಚೆಟ್‌ಗಳು ಇರುವುದು ಕಂಡು ಬಂತು. ಬಿಳಿ ಬಣ್ಣದ ಪಾಲಿಥಿನ್ ಚೀಲದೊಳಗೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು 350 ಇದ್ದು, ಸಾರಾಯಿ ತೊಟ್ಟೆಗಳ ಅಂದಾಜು ಮೌಲ್ಯ ರೂ.5,000/– ಹಾಗೂ ಸಾಗಾಟ ಮಾಡಿದ ಕಾರಿನ ಬೆಲೆ ಅಂದಾಜು ಸುಮಾರು ರೂ.3,00,000/– ಆಗಬಹುದು. ಇದರಿಂದ ಮಾದರಿಗಾಗಿ 100 ಎಂ.ಎಲ್.ನ 2 ಸಾರಾಯಿ ತೊಟ್ಟೆಗಳನ್ನು ತೆಗೆದು ಬಿಳಿ ಬಟ್ಟೆಯಿಂದ ಹೊಲಿದು ಎಸ್.ಹೆಚ್.ಒ ಎಂಬ ಅರಗು ಸೀಲ್ ಹಾಕಿ ಮುಂದಿನ ತನಿಖೆಯ ಬಗ್ಗೆ ಸ್ವಾಧೀನಪಡಿಸಲಾಯಿತು. ಸಾಗಾಟ ಮಾಡಲು ಉಪಯೋಗಿಸಿದ ಆಲ್ಟೊ ಬಿಳಿ ಬಣ್ಣದ ಕಾರು ನಂಬ್ರ: ಕೆಎಲ್–54–7009 ಆಗಿದ್ದು, ಇದರ ಎದುರು ಹಿಂಬದಿಯ ಗ್ಲಾಸುಗಳು ಹಾಗೂ ಹಿಂಬದಿಯ ಬಲಭಾಗದ ಬಾಗಿಲಿನ ಗ್ಲಾಸು ಹುಡಿಯಾಗಿದ್ದು, ಸದರಿ ಕಾರಿನ ಚಾಸೀಸ್ ನಂಬರು X MA 3EYD81SO10092438 X H7 ಹಾಗೂ ಇಂಜೀನ್ ನಂಬರು F8DN4200834 ಆಗಿದ್ದು, ಮಾರುತಿ ಕಂಪೆನಿಯ ಆಲ್ಟೋ ಕಾರು ಆಗಿರುತ್ತದೆ. ಈ ಮೇಲಿನ ಸೊತ್ತುಗಳನ್ನು ಮುಂದಿನ ವ್ಯವಹರಣೆಯ ಬಗ್ಗೆ ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ಸ್ವಾಧೀನಪಡಿಸಿಕೊಳ್ಳಲಾಯಿತು. ಸದರಿ ಸ್ವಾಧೀನಪಡಿಸಿದ ಸೊತ್ತುಗಳನ್ನು ಮುಂದಿನ ಕ್ರಮದ ಬಗ್ಗೆ ಠಾಣೆಗೆ ತಂದಿಟ್ಟು, ಅಲಾಯುದ ವರದಿಯೊಂದಿಗೆ ಠಾಣಾ ಅಪರಾಧ ಕ್ರಮಾಂಕ:195/08 ಕಲಂ 32, 34,43(ಎ) ಕರ್ನಾಟಕ ಅಬಕಾರಿ ಕಾಯಿದೆಯಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನದ ಮೂಲ ಪ್ರತಿಯನ್ನು ಮಾನ್ಯ ಎ.ಸಿ.ಜೆ.(ಜು.ಡಿ) ಮತ್ತು ಜೆ,ಎಂ.ಎಫ್.ಸಿ. ನ್ಯಾಯಾಲಯ, ಬಂಟ್ವಾಳಕ್ಕೂ, ಪ್ರತಿಗಳನ್ನು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡೆನು. ಸ್ವಾಧೀನಪಡಿಸಿದ ಸೊತ್ತುಗಳನ್ನು ಠಾಣಾ ಸೊತ್ತು ಪಟ್ಟಿ ನಂಬ್ರ: 94/2008 ದಿ:14–12–2008 ರಂತೆ ನೋಂದಾಯಿಸಿ ಮಾನ್ಯ ನ್ಯಾಯಾಲಯದ ಅನುಮತಿ ಕೋರಲಾಗಿದೆ. ಅದೇ ದಿನ ಜೊತೆಯಲ್ಲಿ ಕರೆದುಕೊಂಡ ಹೋದ ಸಿಬ್ಬಂದಿಗಳಾದ ಹೆಚ್.ಸಿ.648 ಬಾಬು ಗೌಡ, ಪಿ.ಸಿ.1314 ರಘುರಾಮ ಹೆಗ್ಡೆ, ಪಿ.ಸಿ.641 ಶ್ರೀಧರ, ಪಿ.ಸಿ.1361 ಕರುಣಾಕರ, ಪಿ.ಸಿ.1749 ಸೀತಾರಾಮರವರ ಹೇಳಿಕೆಗಳನ್ನು ಅದೇ ದಿನ ಪಡೆಯಲಾಗಿದೆ. ನಂತರ ಈ ಪ್ರಕರಣದ ಮುಂದಿನ ತನಿಖೆಯನ್ನು ಪೊಲೀಸ್ ಉಪ ನಿರೀಕ್ಷಕರಾದ ಉಮೇಶ್ ಉಪ್ಪಳಿಕೆ ಇವರ ಪರಾಂಬರಿಕೆಗೆ ಇಡಲಾಗಿದ್ದು, ಅವರು ತನಿಖೆಯನ್ನು ಮುಂದುವರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 3

ಪ್ರಾಸಿಕ್ಯೂಶನ್ ಪರ ಪ್ರಕರಣದ ಮಹಜರು ಸಾಕ್ಷಿದಾರರಾದ ಶ್ರೀ.ಶ್ರೀಧರ.ಬಿ, ಪಿ.ಸಿ.ನಂ:641, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ದಿ:24–11–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು ಸುಮಾರು 6 ವರ್ಷಗಳಿಂದ ವಿಟ್ಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ದಿ:14–12–2008 ರಂದು ಪಿ.ಎಸ್.ಐ. ಇವರು ರಜೆಯಲ್ಲಿದ್ದುದರಿಂದ, ಠಾಣಾ ಉಸ್ತುವಾರಿಯಲ್ಲಿ ಎ.ಎಸ್.ಐ. ಎನ್.ಐತಪ್ಪರವರಿದ್ದು, ಗುಪ್ತವಾರ್ತಾ ಸಂಗ್ರಹ ಕರ್ತವ್ಯದಲ್ಲಿದ್ದ ತಾನು ಠಾಣೆಯಲ್ಲಿದ್ದ ಸಮಯ ರಾತ್ರಿ ಸುಮಾರು 8–15 ಗಂಟೆಗೆ ಬಂಟ್ವಾಳ ತಾಲೂಕು ಕೇಪು ಗ್ರಾಮದ ಸಾರಡ್ಕ ಚೆಕ್‌ಪೋಸ್ಟ್ ಕರ್ತವ್ಯದಲ್ಲಿದ್ದ ಪಿ.ಸಿ. ನಂ:1749 ನೇ ಸೀತಾರಾಮರವರು ಪ್ರಭಾರದಲ್ಲಿದ್ದ ಎ.ಎಸ್.ಐ. ಐತಪ್ಪರವರಿಗೆ ದೂರವಾಣಿ ಮೂಲಕ ಕರ್ತವ್ಯದಲ್ಲಿದ್ದ ಸಮಯದಲ್ಲಿ ಆಲ್ಟೊ ಕಾರು ಕೇರಳ ಕಡೆಯಿಂದ ಅಡ್ಯನಡ್ಕ ಕಡೆಗೆ ಬರುತ್ತಿದ್ದಾಗ, ಚೆಕ್ ಮಾಡುವರೇ ನಿಲ್ಲಿಸಿದಾಗ, ಆಲ್ಟೊ ಕಾರಿನ ಚಾಲಕ ಮತ್ತು ಇನ್ನೊಬ್ಬ ಬಾಗಿಲು ತೆರೆದು ಓಡಿ ತಲೆಮರೆಸಿಕೊಂಡರು ಎಂದು ತಿಳಿಸಿದಂತೆ, ಎ.ಎಸ್.ಐ. ಐತಪ್ಪರವರ ಜೊತೆಯಲ್ಲಿ ಹೆಚ್.ಸಿ.648 ಬಿ.ಬಾಬು ಗೌಡ, ಪಿ.ಸಿ.1361 ಕರುಣಾಕರ ಮತ್ತು ಪಿ.ಸಿ.1314 ರಘುರಾಮ ಹೆಗ್ಡೆರವರ ಜೊತೆಯಲ್ಲಿ ನನ್ನನ್ನು ಕರೆದುಕೊಂಡು ಠಾಣೆಯಿಂದ ಹೊರಟು ಕೇಪು ಗ್ರಾಮದ ಸಾರಡ್ಕ ಎಂಬಲ್ಲಿ 20–45 ಗಂಟೆಗೆ ತಲುಪಿದಾಗ, ಅಲ್ಲಿ ಒಂದು ಬಿಳಿ ಆಲ್ಟೊ ಕಾರು ಇದ್ದು ಹಾಗೂ ಪಿ.ಸಿ.1749 ಸೀತಾರಾಮರವರು ಇದ್ದು, ಅದರ ನಂಬರು ನೋಡಲಾಗಿ, ಕೆಎಲ್–54–7009 ಆಗಿದ್ದು, ಅದರ ಒಳಗಡೆ ನೋಡಲಾಗಿ, ಹಿಂಬದಿ ಸೀಟಿನಲ್ಲಿ ಒಂದು ಬಿಳಿ ಬಣ್ಣದ ಪಾಲಿಥಿನ್ ಚೀಲದ ಕಟ್ಟು ಇದ್ದು, ಅದನ್ನು ಎ.ಎಸ್.ಐ.ರವರ ಆದೇಶದಂತೆ ನೋಡಲಾಗಿ, ಅದರಲ್ಲಿ ಸಾರಾಯಿ ಸ್ಯಾಚೆಟ್‌ಗಳು ಇರುವುದು ಕಂಡು ಬಂತು. ಇದರ ಬಗ್ಗೆ ಯಾವುದೇ ಪರವಾನಿಗೆ ಯಾ ದಾಖಲೆ ಪತ್ರ ಇಲ್ಲದೆ ಸಾಗಾಟ ಮಾಡುತ್ತಿರುವುದು ಖಚಿತವಾಗಿರುವುದರಿಂದ, ಪಂಚರಾದ ಮೊಹಿದ್ದೀನ್ ಕುಂಞ್ಞಿ ಮತ್ತು ಬಾಲಕೃಷ್ಣರವರನ್ನು ಎ.ಎಸ್.ಐ.ರವರು ಬರಮಾಡಿಕೊಂಡು, ಅವರ ಸಮಕ್ಷಮ ಅಜಮಾಯಿಸಲಾಗಿ, ಬಿಳಿ ಬಣ್ಣದ ಪಾಲಿಥಿನ್ ಚೀಲದೊಳಗೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು 350 ಇದ್ದು, ಸಾರಾಯಿ ತೊಟ್ಟೆಗಳ ಅಂದಾಜು ಮೌಲ್ಯ ರೂ.5,000/– ಹಾಗೂ ಸಾಗಾಟ ಮಾಡಿದ ಕಾರಿನ ಬೆಲೆ ಅಂದಾಜು ಸುಮಾರು

ರೂ.3,00,000/– ಇದನ್ನು ಅಶ್ರು ಯಾನೆ ಅಶ್ರಫ್, ಲತೀಫ್ ಯಾನೆ ಅಬ್ದುಲ್ ಲತೀಫ್ ಮತ್ತು ಅಜೀಜ್‌ರವರುಗಳು ಕೊಂಡುಹೋಗಿರುವುದಾಗಿ ತಿಳಿಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆಯಂತೆ ಅಪರಾಧವಾಗಿರುವುದರಿಂದ, ಮುಂದಿನ ಕ್ರಮದ ಬಗ್ಗೆ ಮಹಜರು ಮುಖಾಂತರ ಸೊತ್ತುಗಳನ್ನು ಠಾಣೆಗೆ ತಂದಿರಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಮಹಜರಿಗೆ ಸಹಿ ಮಾಡಿರುತ್ತೇನೆ. ಸೊತ್ತುಗಳನ್ನು ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 4

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:24–11–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿರುತ್ತಾರೆ. ತಾನು ತಕ್ಷೀರಿಗೆ ಸಂಬಂಧಪಟ್ಟ ಆಲ್ಟೊ ಕಾರು ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ದಿ:30–9–2009 ರಂದು ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ ಇವರಿಂದ ಪಡೆದುಕೊಂಡಿರುತ್ತೇನೆ ಹಾಗೂ ರಾಸಾಯನಿಕ ವಿಶ್ಲೇಷಕರ ವರದಿಯನ್ನು ಪಡೆದುಕೊಂಡು, ಈ ಬಗ್ಗೆ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ದಿ:5–10–2009 ರಂದು ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ಮಂಗಳೂರು ಇವರಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ತಕ್ಷೀರಿಗೆ ಸಂಬಂಧಪಟ್ಟ ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–2 ಎಂದು ಹಾಗೂ ಮಹಜರನ್ನು ನಿಶಾನೆ ಪಿ–3 ಎಂದು ಹಾಗೂ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಸೊತ್ತಿನ ಪಟ್ಟಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ರಾಸಾಯನಿಕ ವರದಿಯನ್ನು ನಿಶಾನೆ ಪಿ–5 ಎಂದು ಈ ಪ್ರಾಧಿಕಾರದ ಮುಂದೆ ಗುರುತಿಸಲಾಯಿತು. ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂಖ್ಯೆ: ಎಸ್‌ಡಿಕೆ/250/ಡಿಟಿಸಿಆರ್/ 2008–09 ದಿ:27–10–2009 ರ ಆದೇಶದಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ದಿ:11–11–2009 ರಂದು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಹಾಗೂ ತಮ್ಮ ಸಮಕ್ಷಮದಲ್ಲಿ ಅಬಕಾರಿ ಆಯುಕ್ತರ ಸುತ್ತೋಲೆಯನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲಾಗಿದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರು ಸಂ: ಕೆಎಲ್–54–7009 ಆಗಿದ್ದು, ಇದು ಕೇರಳ ರಾಜ್ಯದಲ್ಲಿ ನೋಂದಾಯಿತ ವಾಹನವಾಗಿರುತ್ತದೆ. ಕೇರಳ ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪಟ್ಟಿಯನ್ನು ಪರಿಶೀಲಿಸಲಾಗಿ, ಕೆಎಲ್–54–7009 ಎಂಬ ನೋಂದಣಿ ಸಂಖ್ಯೆ ಇರುವ ಯಾವುದೇ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಇರುವುದಿಲ್ಲ ಎಂಬ ಅಂಶವು ಗಮನಕ್ಕೆ ಬಂದಿದ್ದು, ಇದರಿಂದ ವಾಹನಕ್ಕೆ ತಕ್ಷೀರು ಸ್ಥಳದಲ್ಲಿ ನಕಲಿ ನಂಬರು ಪ್ಲೇಟನ್ನು ಅಳವಡಿಸಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಇದಲ್ಲದೆ ವಾಹನವು ಜಪ್ತಾಗಿ ಈಗಾಗಲೇ 11 ತಿಂಗಳು ಮೀರಿದ್ದರೂ ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ, ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಕಚೇರಿಯನ್ನಾಗಲಿ ಅಥವಾ ತಮ್ಮ ಕಚೇರಿಯನ್ನಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ಹಾಗೂ ಸದರಿ ವಾಹನವನ್ನು ಇನ್ನೂ ಹೆಚ್ಚಿನ ಕಾಲ ತೆರೆದ ವಾತಾವರಣದಲ್ಲಿ ಇರಿಸುವುದರಿಂದ, ವಾಹನದ ಸ್ಥಿತಿಗತಿ ಕ್ಷೀಣಗೊಂಡು ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆಯಿರುವುದರಿಂದ ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:14–12–2008 ರಂದು ಜಪ್ತುಪಡಿಸಿಕೊಂಡಿರುವ ಆಲ್ಟೊ ಕಾರಿಗೆ ನಕಲಿ ಸಂಖ್ಯೆ: ಕೆಎಲ್–54–7009 ನ್ನು ಅಳವಡಿಸಿ ಅಕ್ರಮವಾಗಿ 100 ಎಂ.ಎಲ್.ನ 350 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಮತ್ತು ಪತ್ತೆಯಾಗದಿರುವ ಆರೋಪಿತರು ಮತ್ತು ವಾಹನದ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು ಸದರಿ ವಾಹನದಲ್ಲಿ ಅವರ ತಿಳುವಳಿಕೆಯಿಂದಲೇ

ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಿರುವುದು ಘಟನೆಯಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್ ಠಾಣೆ, ವಿಟ್ಲ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 350 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ನ್ನು ವಶಪಡಿಸಿಕೊಂಡು ಸುಮಾರು 11 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಮತ್ತು ತನಿಖಾಧಿಕಾರಿಯವರ ಕಚೇರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲಿ, ಪರಾರಿಯಾದ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಸಲ್ಲಿಸಿದ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರಿನ ನೋಂದಣಿ ಸಂಖ್ಯೆ: ಕೆಎಲ್–54–7009 ಆಗಿದ್ದು, ಇದು ಕೇರಳ ರಾಜ್ಯದಲ್ಲಿ ಯಾವುದೇ ಸಾರಿಗೆ ಅಧಿಕಾರಿಗಳ ಕಚೇರಿಯಿಂದ ನೋಂದಾಯಿತವಾಗಿರುವುದಿಲ್ಲ. ಕೇರಳ ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪಟ್ಟಿಗಳನ್ನು ಪರಿಶೀಲಿಸಲಾಗಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ನೋಂದಣಿ ಸಂಖ್ಯೆ ಯಾವುದೇ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನೋಂದಣಿಯಾದ ಬಗ್ಗೆ ಯಾವುದೇ ಅಧಿಕೃತ ದಾಖಲಾತಿಗಳು ಕಂಡು ಬಾರದಿರುವ ಕಾರಣ, ಆರೋಪಿಗಳು ಆಲ್ಟೊ ಕಾರಿಗೆ ನಕಲಿ ನಂಬರನ್ನು ಅಳವಡಿಸಿ ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕೇರಳ ರಾಜ್ಯಕ್ಕೆ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ಇದಲ್ಲದೆ ವಾಹನವು ಜಪ್ತಾಗಿ ಈಗಾಗಲೇ 11 ತಿಂಗಳು ಮೀರಿದ್ದರೂ ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ, ತಕ್ಷೀರು ದಾಖಲಿಸಿದ ವಿಟ್ಲ ಪೊಲೀಸ್ ಠಾಣೆ ಕಚೇರಿಯಲ್ಲಾಗಲಿ ಅಥವಾ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಕಚೇರಿಯಲ್ಲಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ಹಾಗೂ ಸದರಿ ವಾಹನವನ್ನು ಇನ್ನೂ ಹೆಚ್ಚಿನ ಕಾಲ ತೆರೆದ ವಾತಾವರಣದಲ್ಲಿ ಇರಿಸುವುದರಿಂದ, ವಾಹನದ ಸ್ಥಿತಿಗತಿ ಕ್ಷೀಣಗೊಂಡು ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆಯಿರುವುದರಿಂದ ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನಿಖಾಧಿಕಾರಿಯವರು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರನ್ನು ಈಗಾಗಲೇ 11 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/250/ಡಿಟಿಸಿಆರ್/2008–09, ದಿನಾಂಕ:25ನೇ ನವೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ವಿಟ್ಲ ಪೊಲೀಸ್

ಠಾಣೆ,ವಿಟ್ಲ ಇವರ ತಕ್ಷೀರು ಸಂ:195/2008 ದಿ:14–12–2008 ರಲ್ಲಿ ಜಪ್ತುಪಡಿಸಿರುವ ಆಲ್ಟೊ ಕಾರು ಸಂಖ್ಯೆ: ಕೆಎಲ್–54–7009 ನ್ನು (ಚಾಸೀಸ್ ನಂಬರು X MA 3EYD81SO10092438 X H7 ಹಾಗೂ ಇಂಜೀನ್ ನಂಬರು F8DN4200834) ನಿಯಮ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:25–11–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಕರುಣಾಕರ, ಪಿ.ಸಿ.ನಂ:1361, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ.
ಪ್ರಾ.ಸಾ–2: ಶ್ರೀ.ಎನ್.ಐತಪ್ಪ, ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಬಂಟ್ವಾಳ ನಗರ, ಪೊಲೀಸ್ ಠಾಣೆ, ಬಂಟ್ವಾಳ.
ಪ್ರಾ.ಸಾ–3: ಶ್ರೀ.ಶ್ರೀಧರ.ಬಿ, ಪಿ.ಸಿ.ನಂ:641, ವಿಟ್ಲ ಪೊಲೀಸ್ ಠಾಣೆ, ವಿಟ್ಲ.
ಪ್ರಾ.ಸಾ–4: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ಮಂಗಳೂರು ಇವರಿಗೆ ಸಲ್ಲಿಸಿದ ತನಿಖಾ ವರದಿ.
ನಿಶಾನೆ ಪಿ–1A : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.
ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ.
ನಿಶಾನೆ ಪಿ–3 : ಮಹಜರಿನ ಪ್ರತಿ.
ನಿಶಾನೆ ಪಿ–4 : ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಸೊತ್ತಿನ ಪಟ್ಟಿ.
ನಿಶಾನೆ ಪಿ–5 : ರಾಸಾಯನಿಕ ವರದಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1274

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/312/ಡಿಟಿಸಿಆರ್/2007–08, ದಿನಾಂಕ:23ನೇ ಡಿಸೆಂಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಸಹಾಯಕ ಪೊಲೀಸ್ ಅಧೀಕ್ಷಕರು
ಪಣಂಬೂರು ಉಪ ವಿಭಾಗ, ಪಣಂಬೂರು.

ಆರೋಪಿಗಳು:
ಮಧುಕರ ಮಲ್ಲಿ, ಮೂಕಾಂಬಿಕಾ ಕೆಮಿಕಲ್ಸ್,
ಫ್ಯಾಕ್ಟರಿ ಮಾಲಿಕರು, ಬೈಕಂಪಾಡಿ, ಮಂಗಳೂರು ತಾಲ್ಲೂಕು,
ಮತ್ತುಇತರ 3 ಆರೋಪಿಗಳು.

ವಾಹನದ ಮಾಲೀಕರು
ಶ್ರೀ.ಜಗದೀಶ್ ಆಳ್ವ, ಆಳ್ವ ರೆಸ್ಸಿಡೆನ್ಸಿ,
ಪಾಣಾಲ,ಪಜೀರು ಅಂಚೆ ಮತ್ತು ಗ್ರಾಮ ಬಂಟ್ವಾಳ.

ಪ್ರಕರಣದ ಮುಖ್ಯಾಂಶಗಳು:

ಸಹಾಯಕ ಪೊಲೀಸ್ ಅಧೀಕ್ಷಕರು,ಪಣಂಬೂರು ಉಪ ವಿಭಾಗ,ಪಣಂಬೂರು ಇವರಿಗೆ ದಿನಾಂಕ:3–2–2008 ರಂದು ರಾತ್ರಿ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಮೆ:ಮೂಕಾಂಬಿಕ ಕೆಮಿಕಲ್ಸ್ ಫ್ಯಾಕ್ಟರಿಯಿಂದ ಕೇರಳ ರಾಜ್ಯಕ್ಕೆ ಟಿಪ್ಪರ್ ಲಾರಿಯಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಟವಾಗುತ್ತಿದೆ ಎಂದು ದೊರೆತ ಖಚಿತ ವರ್ತಮಾನದ ಮೇರೆಗೆ ಆ ದಿನ ಮಾರುವೇಷದಲ್ಲಿ ಸದ್ರಿ ಪ್ರದೇಶದಲ್ಲಿ ಕಾಯಲಾಗಿ ಆ ದಿನ ಯಾವುದೇ ಅಕ್ರಮ ಚಟುವಟಿಕೆ ಪತ್ತೆಯಾಗದ ಮೇರೆಗೆ ಪಣಂಬೂರು ಪೊಲೀಸ್ ವೃತ್ತ ನಿರೀಕ್ಷಕರಾದ ಶ್ರೀ. ಕೆ.ಎನ್.ಚಂದ್ರಶೇಖರ್, ಹಾಗೂ ಠಾಣಾ ಎ.ಎಸ್.ಐ ಶ್ರೀ ಮಾಧವ.ಯು ಮತ್ತು ಸಿಬ್ಬಂದಿಗಳಾದ ಶ್ರೀ ಉಲ್ಲಾಸ್,ಪಿ.ಸಿ 1333, ಶ್ರೀ ಗೋಪಾಲ ಕೃಷ್ಣ ಪಿ.ಸಿ.2023, ಹಾಗೂ ಶ್ರೀ ಕುಶಾಲ ಮಣಿಯಾಣಿ.ಪಿ.ಸಿ.996 ಇವರುಗಳನ್ನು ಬರಮಾಡಿ ಕೊಂಡು, ದಿ:4–2–2008 ರ ಬೆಳಗ್ಗಿನ ಜಾವ ಸದ್ರಿ ಮಾಹಿತಿ ಇರುವ ಪ್ರದೇಶದಲ್ಲಿ ಕಾಯುತ್ತಿರುವಾಗ ಮೆ:ಮೂಕಾಂಬಿಕ ಕೆಮಿಕಲ್ಸ್ ಫ್ಯಾಕ್ಟರಿಯಿಂದ ಒಂದು ಟಿಪ್ಪರ್ ಲಾರಿ ಹೊರಗೆ ಬಂದು ಕೆ.ಐ.ಎ.ಡಿ.ಬಿ ಕಡೆಗೆ ಹೋಗುವುದನ್ನು ಕಂಡು ಅನುಮಾನಗೊಂಡು ಸದ್ರಿ ಲಾರಿಯನ್ನು ನಿಲ್ಲಿಸಲು ಸೂಚನೆ ನೀಡಿದಾಗ ಲಾರಿ ಚಾಲಕನು ಲಾರಿಯನ್ನು ನಿಲ್ಲಿಸದೇ ಬೈಕಂಪಾಡಿ ಕಡೆಗೆ ಓಡಿಸಿದಾಗ ಅದನ್ನು ಬೆನ್ನಟ್ಟಿ ಕೆ.ಐ.ಎ.ಡಿ.ಬಿ ಕಚೇರಿ ಬಳಿ ತಡೆದು ನಿಲ್ಲಿಸಿ ಲಾರಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಸದ್ರಿ ಟಿಪ್ಪರ್ ಲಾರಿ ಸಂ:KA-19-B-7029 ಆಗಿದ್ದು, ಅದರಲ್ಲಿ ತುಂಬಿಸಲಾದ ಮರಳಿನ ಅಡಿಯಲ್ಲಿ 35 ಲೀ ಗಾತ್ರದ 157 ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 5495 ಲೀ ಮದ್ಯಸಾರ ಹೊಂದಿರುವುದನ್ನು ಪತ್ತೆಹಚ್ಚಿ,ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧವಾಗಿದ್ದು ಹಾಗೂ 34,38(ಎ)ರ ಪ್ರಕಾರ ಶಿಕ್ಷಾರ್ಹ ವಾಗಿರುವುದರಿಂದ, ವಾಹನ ಮತ್ತು ಮದ್ಯಸಾರವನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿಯೇ ಮಹಜರು ತಯಾರಿಸಿ, ಅರೋಪಿ ಗಳಾದ 1)ಮಧುಕರ ಮಲ್ಲಿ ಮೆ:ಮೂಕಾಂಬಿಕ ಕೆಮಿಕಲ್ಸ್ ಫ್ಯಾಕ್ಟರಿ ,ಬೈಕಂಪಾಡಿ ಕೈಗಾರಿಕಾ ಪ್ರದೇಶ ಇದರ ಮಾಲಕರು 2) ದಿವ್ವೇಶ್ ಅಲಿಯಾಸ್ ದಯೇಶ್ ಕುಮಾರ್, ಬಿನ್:ಪ್ರಕಾಶ್ ಶೆಟ್ಟಿ, ಮುಳ್ವೆ ಮಾಣಿಯ ಮನೆ, ಸರ್ಕಾರಿ ಪ್ರಾಥಮಿಕ ಶಾಲೆಯ ಹಾಗೂ ಗೇರುಬೀಜ ಫ್ಯಾಕ್ಟರಿಯ ಬಳಿ, ನರಿಮೊಗರು ಗ್ರಾಮ ಮತ್ತು ಅಂಚೆ,ಪುತ್ತೂರು (ಲಾರಿ ಚಾಲಕ) 3)ಬೀರಪ್ಪ ಹನುಮಂತಪ್ಪ ಪೂಜಾರಿ,ಬಿನ್:ದಿ:ಹನುಮಂತಪ್ಪ ಬೀರಪ್ಪ ಪೂಜಾರಿ, ಸೋಮನ ಹಳ್ಳಿ, ದುರ್ಗಾದೇವಿ ದೇವಸ್ಥಾನದ ಬಳಿ, ಮುದ್ದೇಬಿಹಾಳ ತಾಲೂಕು ಉಲಣಿ ಬಾಳ ಅಂಚೆ, ಬಿಜಾಪುರ ಜಿಲ್ಲೆ(ಲಾರಿಯ ಕ್ಲೀನರ್) 4) ಜಗದೀಶ್ ಆಳ್ವ (ಟಿಪ್ಪರ್ ಲಾರಿ ಮಾಲಕ) ಮತ್ತು 5) ಶಿವರಾಮ (ಟಪ್ಪರ್ ಲಾರಿಯ ರೈಟರ್) ಇವರುಗಳ ವಿರುದ್ಧ ತಕ್ಷೀರು ಸಂಖ್ಯೆ: 10/2008 ದಿ:4–2–2008ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಕರಣದ ಮುಂದಿನ ತನಿಖೆಗೆ ಸೊತ್ತು ಮತ್ತು ಕಡತವನ್ನು ಕಾರ್ಯವ್ಯಾಪ್ತಿಯ ಅಂದಿನ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ಜಾರಿ ಮತ್ತು ತನಿಖೆ ಇವರಿಗೆ ಹಸ್ತಾಂತರಿಸಲು ಪ್ರಾಧಿಕಾರದ ದಿನಾಂಕ:8–2–2008 ರಂದು ಅನುಮತಿ ನೀಡಲಾಗಿರುತ್ತದೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:–

1) ಟಿಪ್ಪರ್ ಲಾರಿ ನೊಂದಣಿ ಸಂ:KA-19B-7029
2) 35 ಲೀ ಗಾತ್ರದ 157 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು–5495 ಲೀ ಮದ್ಯಸಾರ.
3) ಪ್ಲಾಸ್ಟಿಕ್ ಹೊದಿಕೆ ತುಂಡುಗಳು–9.
4) ಮರಳಿನ ಮಾದರಿ

ಮೇಲಿನ ಮದ್ಯಸಾರ ತುಂಬಿದ 157 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಿಂದ ತಲಾ ಒಂದು ಲೀಟರಿನಂತೆ ಒಟ್ಟು 157 ಕ್ಯಾನುಗಳಲ್ಲಿ ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಗಿದೆ.

ಪ್ರಾಧಿಕಾರದ ದಿ:8–2–2008 ರ ಆದೇಶದಂತೆ ಅಬಕಾರಿ ಉಪ ನಿರೀಕ್ಷಕರು(ನಂ.1) ಮಂಗಳೂರು ಉತ್ತರ ಜಾರಿ ಮತ್ತು ತನಿಖೆರವರು ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ 35 ಲೀಟರಿನ 157 ಪ್ಲಾಸ್ಟಿಕ್ ಕ್ಯಾನುಗಳಲ್ಲಿದ್ದ 5495.000 ಲೀಟರ್ ಮದ್ಯಸಾರ ಮತ್ತು ವಾಹನ ಟಿಪ್ಪರ್ ಲಾರಿ ನೊಂದಣಿ ಸಂ:KA-19B-7029 ನ್ನು ದಿ:13–2–2008ರಂದು ಹಸ್ತಾಂತರ ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಜಗದೀಶ್ ಆಳ್ವ,ಆಳ್ವ ರೆಸ್ಸಿಡೆನ್ಸಿ ಪಾಣಾಲ, ಪಜೀರು ಅಂಚೆ ಮತ್ತು ಗ್ರಾಮ ಬಂಟ್ವಾಳ ಇವರು ಈ ಪ್ರಾಧಿಕಾರಕ್ಕೆ ದಿ:19–3–2008 ರಂದು ವಾಹನದ ಆರ್.ಸಿ ಪುಸ್ತಕದ ಪ್ರತಿಯೊಂದಿಗೆ ತಮ್ಮ ವಕೀಲರ ಮೂಲಕ ಅರ್ಜಿ ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯನ್ನು ಪರಿಶೀಲಿಸಿದ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ,ಮಂಗಳೂರು ಇವರ ಪ್ರಾಧಿಕಾರದಿಂದ ದಿ:4–7–2008 ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮೌಲ್ಯಕ್ಕೆ ಸಮನಾವಾದ ರೂ.5,90,000/– ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಹಾಗೂ ಇತರೆ ಷರತ್ತುಗಳ ಆಧಾರದ ಮೇಲೆ ವಾಹನವನ್ನು ನೊಂದಾಣಿ ಮಾಲೀಕರ ಮದ್ಯಂತರ ಸುಪರ್ದಿಗೆ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಸದ್ರಿ ಅದೇಶದಂತೆ ವಾಹನದ ಮಾಲೀಕರು ರೂ.5,90,000/– ಮೌಲ್ಯದ ಬ್ಯಾಂಕ್ ಗ್ಯಾರೆಂಟಿ ಪತ್ರ ಸಂ:8301, ದಿ:27–06–2008ರಂದು ಕಾರ್ಪೊರೇಷನ್ ಬ್ಯಾಂಕ್,ಕಾವೂರು ಶಾಖೆ,ಮಂಗಳೂರು ಇಲ್ಲಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು ,ಸದ್ರಿ ಬ್ಯಾಂಕ್ ಗ್ಯಾರೆಂಟಿಯ ಮಾನ್ಯತೆ ಅವಧಿಯು ದಿನಾಂಕ:26–6–2009

ರ ತನಕ ಊರ್ಜಿತದಲ್ಲಿದ್ದು, ತದನಂತರದಲ್ಲಿ ಸದರಿ ಬ್ಯಾಂಕ್ ಗ್ಯಾರೆಂಟಿಯ ಮಾನ್ಯತೆ ಅವಧಿಯನ್ನು ದಿನಾಂಕ:26–06–2010ರವರೆಗೆ ವಿಸ್ತರಿಸಿರುತ್ತಾರೆ. ಮಧ್ಯಂತರ ಬಿಡುಗಡೆ ಆದೇಶದಂತೆ ವಾಹನವನ್ನು ವಾಹನದ ಮಾಲೀಕರಾದ ಶ್ರೀ.ಜಗದೀಶ್ ಆಳ್ವ ಇವರ ಮಧ್ಯಂತರ ಸುಪರ್ದಿಗೆ ದಿನಾಂಕ:10–7–2008ರಂದು ಬಿಡುಗಡೆ ಮಾಡಲಾಗಿರುತ್ತದೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ–1 ಇವರು ದಿ:28–5–2008 ರಂದು ಸಲ್ಲಿಸಿದ್ದ ತನಿಖಾ ವರದಿ ಸಂ: ಮಂ.ಉ.ಜಾ.ತ/ಸಿಆರ್ಎಂ:49:07–08 ಇದರೊಂದಿಗೆ ಜಪ್ತುಪಡಿಸಿಕೊಂಡ ಮದ್ಯಸಾರದ ಮಾದರಿಗಳ ವಿಶ್ಲೇಷಣಾ ವರದಿ ಸಂ:86–157 ದಿ:13–3–2008 ಮತ್ತು ಜಪ್ತುಪಡಿಸಿದ ವಾಹನ ಸಂ:KA-19-B-7029 ಇದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ದ.ಕ ಇವರಿಂದ ಪಡೆಯಲಾದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರತಿಯನ್ನು ಅಡಕಗೊಳಿಸಿ ಸಲ್ಲಿಸುತ್ತಾ, ಜಪ್ತುಪಡಿಸಿಕೊಳ್ಳಲಾದ ಮದ್ಯಸಾರವನ್ನು ಮತ್ತು ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿದ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರತಿಯ ಪ್ರಕಾರ ಜಪ್ತುಪಡಿಸಿಕೊಂಡ ಮದ್ಯಸಾರದ ಮಾದರಿಗಳಲ್ಲಿ ಮದ್ಯಸಾರದ ಅಂಶ 94.5% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಮತ್ತು ವಶಪಡಿಸಿಕೊಂಡ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯಂತೆ ಶ್ರೀ.ಜಗದೀಶ್ ಆಳ್ವ, ಆಳ್ವ ರೆಸ್ಸಿಡೆನ್ಸಿ ಪಾಣಾಲ,ಪಜೀರು ಅಂಚೆ ಮತ್ತು ಗ್ರಾಮ ,ಬಂಟ್ವಾಳ ಇವರು ಸದ್ರಿ ವಾಹನದ ನೊಂದಣಿ ಮಾಲೀಕರಾಗಿರುವುದಾಗಿ ಹಾಗೂ M/s I.C.I.C.I Bank Ltd, K.S Rao Road,Mangalore ಇವರು ವಾಹನದ ಹೆಚ್.ಪಿ.ಎ.ದಾರರಾಗಿರುವುದಾಗಿ ದೃಡೀಕೃತವಾಗಿರುತ್ತದೆ.

ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಜಪ್ತುಪಡಿಸಿಕೊಂಡ 35 ಲೀ ಗಾತ್ರದ 157 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿದ್ದ 5495 ಲೀಟರ್ ಮದ್ಯಸಾರವನ್ನು (ಮಾದರಿ ಹೊರತು ಪಡಿಸಿ) ದಿನಾಂಕ:29–8–2008ರ ಪ್ರಾಧಿಕಾರದ ಆದೇಶದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 1965 ರ ಕಲಂ 43 ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಪ್ರಸ್ತುತ ಅಧಿಸೂಚನೆಯನ್ನು ಅನುಸರಿಸಿ, ಮದ್ಯಸಾರವನ್ನು ಸಾರ್ವಜನಿಕರ ಹಾಗೂ ಮಾಧ್ಯಮ ಪ್ರತಿನಿಧಿ ಮತ್ತು ಪಾನೀಯ ನಿಗಮ ಮಂಡಳಿ ಇದರ ಪ್ರತಿನಿಧಿಗಳ ಸಮಕ್ಷಮ ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ–1 ಇವರು ಮಹಜರು ಜರುಗಿಸಿ, ನಾಶಪಡಿಸಲು ಹಾಗೂ ಖಾಲಿ ಕ್ಯಾನುಗಳನ್ನು ವಿಲೇವಾರಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ ಮುಟ್ಟುಗೋಲು ಹಾಕಿ ಕೊಳ್ಳಲಾದ ಮದ್ಯಸಾರವನ್ನು ದಿನಾಂಕ:10–9–2008ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ, ಮಂಗಳೂರು ಇವರಿಂದ ಪಡೆಯಲಾದ ಬಿ.ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿರುವ ವಾಹನದ ಮಾಲೀಕರಿಗೆ ಹಾಗೂ ಪ್ರಕರಣದ ಆರೋಪಿತ ವ್ಯಕ್ತಿಗಳಿಗೆ ಜಪ್ತುಪಡಿಸಿದ ವಾಹನ ಮತ್ತು ಸೊತ್ತುಗಳನ್ನು ಯಾಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 1965 ರ ಕಲಂ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟೀಸು ನೀಡಲಾಗಿದ್ದು, ಸದ್ರಿ ನೋಟೀಸು ವಾಹನದ ಮಾಲೀಕರಿಗೆ ಜಾರಿಯಾಗಿದ್ದು, ಸದ್ರಿಯವರು ದಿ:29–7–08ರಂದು ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತಾ, ತಾನು ಸದ್ರಿ ವಾಹನವನ್ನು ಬಾಡಿಗೆ ಆಧಾರದಲ್ಲಿ ಸಾರ್ವಜನಿಕವಾಗಿ ನೀಡುತ್ತಿದ್ದು, ವಾಹನದಲ್ಲಿ ನೇಮಿಸಲಾದ ಚಾಲಕನಿಗೆ ವಾಹನವನ್ನು ಯಾವುದೇ ಅಕ್ರಮ ಸಾಗಾಟಕ್ಕೆ ಬಳಸಬಾರದು ಎಂಬ ಪೂರ್ವ ಷರತ್ತುಗಳನ್ನು ವಿಧಿಸಲಾಗಿದ್ದರೂ, ವಾಹನವನ್ನು ತನ್ನ ಗಮನಕ್ಕೆ ಬಾರದಂತೆ ಅಕ್ರಮ ಸಾಗಾಟಕ್ಕೆ ಬಳಸಿರುವುದು ಇರುತ್ತದೆ. ಹಾಗೂ ಈ ಅಕ್ರಮಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿ, ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳದೇ ಹಿಂತಿರುಗಿಸಬೇಕೆಂದು ಕೋರಿರುತ್ತಾರೆ.

ಪ್ರಕರಣದ ಕ್ರ.ಸಂ.1 ನೇ ಆರೋಪಿತ ವ್ಯಕ್ತಿಯಾಗಿರುವ ಮಧುಕರ ಮಲ್ಲಿ ಎಂಬವರು ಪ್ರಾಧಿಕಾರದ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತಾ, ತಾನು ಮೆ:ಮೂಕಾಂಬಿಕ ಕೆಮಿಕಲ್ಸ್ ಪ್ಯಾಕ್ಟರಿಯ ಮಾಲಕನಾಗಿದ್ದರೂ,ಸದರಿ ಫ್ಯಾಕ್ಟರಿಗೆ ಸಂಬಂಧಿಸಿದ ಮದ್ಯಸಾರವನ್ನು ಯಾವುದೇ ಅಕ್ರಮ ವ್ಯವಹಾರಕ್ಕೆ ಬಳಸಿರುವುದಿಲ್ಲ ಹಾಗೂ ಫ್ಯಾಕ್ಟರಿಗೆ ಸಂಬಂಧಿಸಿದ ಮದ್ಯಸಾರದ ಖರೀದಿ ಬಳಕೆ ಬಗ್ಗೆ ಸೂಕ್ತ ಲೆಕ್ಕ ಪತ್ರವನ್ನು ಇಡಲಾಗಿದ್ದು, ಸದ್ರಿ ಮದ್ಯಸಾರವು ಅಬಕಾರಿ ಅಧಿಕಾರಿಗಳ ಭದ್ರ ಸುಪರ್ದಿಯಲ್ಲಿ ಇರುತ್ತದೆ. ಇದರಿಂದ ಯಾವುದೇ ಅಕ್ರಮವಾಗಲು ಸಾಧ್ಯವಿಲ್ಲ ದಿರುವುದರಿಂದ ಪ್ರಕರಣದಲ್ಲಿ ಜಪ್ತುಪಡಿಸಿದ ಮದ್ಯಸಾರಕ್ಕೂ ತನಗೂ ಸಂಬಂಧವಿಲ್ಲ ಎಂದು ತಿಳಿಸಿ, ಸದ್ರಿ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಉಳಿದಂತೆ ಪ್ರಕರಣದ ಇತರ ಆರೋಪಿತ ವ್ಯಕ್ತಿಗಳಿಗೆ ಕಾರಣ ಕೇಳಿ ನೋಟೀಸು ಜಾರಿಯಾಗಿದ್ದರೂ,ಸದ್ರಿಯವರಿಂದ ಯಾವುದೇ ಪ್ರತಿಕ್ರಿಯೆ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ಫಿಯಾರ್ದುದಾರರಾದ ಶ್ರೀ.ಉಲ್ಲಾಸ್, ಪೊಲೀಸ್ ಕಾನ್ಸ್‌ಟೇಬಲ್ ಸಂ:1333 ,ಪಣಂಬೂರು ಪೊಲೀಸ್ ಠಾಣೆ, ಶ್ರೀ ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು(1)ಮಂಗಳೂರು ಉತ್ತರ ವಲಯ–1 ಮತ್ತು ಶ್ರೀ ಮಾಧವ ಯು.ಸಹಾಯಕ ಪೊಲೀಸ್ ಉಪ ನಿರೀಕ್ಷಕರು,

ಪಣಂಬೂರು ಪೊಲೀಸ್ ಠಾಣೆ ಇವರುಗಳು ಪ್ರಾಸಿಕ್ಯೂಶನ್ ಸಾಕ್ಷಿಗಳಾಗಿ ಕ್ರಮವಾಗಿ ಪಿಡಬ್ಲ್ಯೂ–1,2 ಮತ್ತು 3 ರಂತೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ರಕ್ಷಣಾ ಸಾಕ್ಷಿ ವಿಚಾರಣೆಗಾಗಿ ಹಲವಾರು ಬಾರಿ ಕಾಲವಕಾಶ ನೀಡಲಾಗಿದ್ದರೂ, ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ರಕ್ಷಣಾ ಸಾಕ್ಷಿ ಇಲ್ಲವೆಂದು ಪರಿಗಣಿಸಿ ರಕ್ಷಣಾ ಪರ ವಕೀಲರ ವಾದ ವಿವಾದಗಳನ್ನು ಆಲಿಸಿ, ಸಾಕ್ಷಿಗಳು ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಿ, ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾದಾಂಶಗಳು

1) ದಿನಾಂಕ:4–2–2008ರಂದು ಲಾರಿ ನೊಂದಣಿ ಸಂ:KA-19-B-7029ರಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣತ್ಮಾಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ. ಉಲ್ಲಾಸ್ ಕಾನ್ಸ್‌ಟೇಬಲ್, 1333, ಪಣಂಬೂರು ಪೊಲೀಸ್ ಠಾಣೆ, ಪಣಂಬೂರು ಇವರು ದಿನಾಂಕ:8–7–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ನಾನು 2000 ಪಣಂಬೂರು ಪೊಲೀಸ್ ಠಾಣೆ ಪಿ.ಸಿ. ಯಾಗಿ ಕೆಲಸ ಮಾಡುತ್ತಿದ್ದೇನೆ. ದಿ:3–2–2008 ರಂದು ನಮ್ಮ ಠಾಣೆಯ ಶೈಲೇಂದ್ರ ಕುಮಾರ್ ಸಹಾಯಕ ಪೊಲೀಸ್ ಅಧೀಕ್ಷಕರೊಂದಿಗೆ ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ ತಪಾಸಣೆಗೆ ಬಂದಾಗ ಮೆ:ಮೂಕಾಂಬಿಕಾ ಕೆಮಿಕಲ್ಸ್ ಫ್ಯಾಕ್ಟರಿಯಿಂದ ಸ್ಪಿರಿಟನ್ನು ಅಕ್ರಮವಾಗಿ ಟಿಪ್ಪರ್ ಲಾರಿಯಲ್ಲಿ ಸಾಗಿಸುತ್ತಿದ್ದುದ್ದನ್ನು ಕಂಡು ಒಂದು ಕೆಂಪು ಬಣ್ಣದ ಟಿಪ್ಪರ್ ಲಾರಿ ಫ್ಯಾಕ್ಟರಿ ಗೇಟಿನ ಹೊರಗಡೆ ಬರುತ್ತಿದ್ದಾಗ ನಾನು ನನ್ನೊಟ್ಟಿಗೆ ಇದ್ದ ಅಧಿಕಾರಿಗಳು ಲಾರಿಯನ್ನು ನಿಲ್ಲಿಸಲು ಸೂಚನೆ ಕೊಟ್ಟಾಗ ನಿಲ್ಲಿಸದೇ ಪರಾರಿಯಾಗಿರುತ್ತದೆ. ನಾವು ಒಂದು ಖಾಸಗಿ ವಾಹನದಲ್ಲಿ ಹೋಗಿ ಅದನ್ನು ತಡೆದು ನಿಲ್ಲಿಸಿದಾಗ ಸದ್ರಿ ಲಾರಿಯಲ್ಲಿ ಲಾರಿ ಚಾಲಕ ಮತ್ತು ಕ್ಲೀನರ್ ಇದ್ದು,ಲಾರಿಯಲ್ಲಿ 35 ಲೀಟರು ಸಾಮರ್ಥ್ಯದ 157 ಪ್ಲಾಸ್ಟಿಕ್ ಕ್ಯಾನುಗಳು ಇದ್ದು,ಅವುಗಳಲ್ಲಿ ಸ್ಪಿರಿಟ್ ತುಂಬಿದ್ದು ಕಂಡು ಬಂತು,ಸ್ಪಿರಿಟನ್ನು ಲಾರಿಯನ್ನು ಅಮಾನತು ಮಾಡಿ ಸ್ಥಳದಲ್ಲೇ ಮಹಜರು ತಯಾರಿಸಲಾಗಿ ಮಹಜರನ್ನು ನಿಶಾನೆ ಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಲಾಯಿತು. ಲಾರಿಯಲ್ಲಿದ್ದ ಚಾಲಕ ಮತ್ತು ಕ್ಲೀನರ್‌ನ ಹೆಸರು ಕೇಳಲಾಗಿ ಅವರು ದಿವ್ಯೇಶ ಮತ್ತು ಬೀರಪ್ಪ ಎಂದು ಹೇಳಿ ಸದ್ರಿ ಸ್ಪಿರಿಟನ್ನು ಸಾಗಿಸಲು ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾರೆ. ಪ್ರತಿ ಪ್ಲಾಸ್ಟಿಕ್ ಕ್ಯಾನಿನಿಂದ ಒಂದು ಬಾಟಲಿಯನ್ನು ಮಾದರಿಯಾಗಿ ತೆಗೆದು ಸೀಲು ಮಾಡಲಾಯಿತು. ನಂತರ ಲಾರಿ ಹಾಗೂ ಸೊತ್ತಿನೊಂದಿಗೆ ಪೊಲೀಸ್ ಠಾಣೆಗೆ ವಾಪಾಸು ಬಂದೆವು ಲಾರಿಯನ್ನು ನೋಡಿದರೆ ಗುರುತಿಸುತ್ತೇನೆ (ಲಾರಿಯನ್ನು ವಾಹನದ ಮಾಲೀಕರ ಮಧ್ಯಂತರ ಸ್ವಾಧೀನ ನೀಡಲಾಗಿರುತ್ತದೆ) ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ರಕ್ಷಣಾ ಪರ ವಕೀಲರಾದ ಶ್ರೀ.ಸುಬ್ಬಯ್ಯ ರೈ ಇವರ ಸಹಾಯಕರಾದ ಶ್ರೀ.ಮನೋಜ್ ಆಳ್ವ ಇವರ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ ದಿ:3–2–2008ರಂದು ಎ.ಎಸ್.ಪಿ ರವರಿಗೆ ರಾತ್ರಿ ಖಚಿತ ವರ್ತಮಾನ ಬಂದಿರುತ್ತದೆ. ಬೆಳಿಗ್ಗೆ ಸಾಧಾರಣ 7 –00 ಗಂಟೆಗೆ ಟಿಪ್ಪರ್ ಲಾರಿ ತಕ್ಷೀರು ಸ್ಥಳದಿಂದ ಗೇಟಿನ ಹೊರಗಡೆ ಬಂದಿರುತ್ತದೆ. ನಾವು ಖಾಸಗಿ ವಾಹನದಲ್ಲಿ ಹೋಗಿದ್ದೆವು. ಖಾಸಗಿ ವಾಹನದ ಚಾಲಕರು ಕುಶಾಲ ಮಣಿಯಾಣಿ ಆಗಿರುತ್ತಾರೆ. ಸದ್ರಿ ಟಿಪ್ಪರ್ ಲಾರಿಯನ್ನು ನಿಲ್ಲಿಸಲು ಎ.ಎಸ್.ಪಿ ರವರು ಸೂಚನೆ ಕೊಟ್ಟಿರುತ್ತಾರೆ. ಸದ್ರಿ ವಶಪಡಿಸಿಕೊಂಡ 157 ಪ್ಲಾಸ್ಟಿಕ್ ಕ್ಯಾನುಗಳಿಗೆ ಕ್ರಮ ಸಂಖ್ಯೆಯನ್ನು ನೀಡಿದ್ದೆವು. ತಕ್ಷೀರು ನಡೆದ ಸ್ಥಳದಲ್ಲಿ ಯಾವುದೇ ಅಂಗಡಿಗಳು ಇರಲಿಲ್ಲ. ಸ್ಯಾಂಪಲ್ ಕಳುಹಿಸಿದ ಬಾಟಲಿಗಳಿಗೆ ಸೀಲು ಮಾಡಿದ್ದರಲ್ಲಿ ನನ್ನ ಸಹಿ ಇರುವುದಿಲ್ಲ. ಮಹಜರನ್ನು ಎ.ಎಸ್.ಐ ಮಾಧವರವರು ಬರೆದಿರುತ್ತಾರೆ. ನಾನು ಆ ದಿವಸ ತಕ್ಷೀರು ಸ್ಥಳಕ್ಕೆ ಹೋಗಲೇ ಇಲ್ಲ ಎಂದರೆ ಸರಿಯಲ್ಲ. ಸದ್ರಿ ಟಿಪ್ಪರ್ ಲಾರಿಯಿಂದ ಯಾವುದೇ ಮದ್ಯಸಾರ ವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಮಹಜರನ್ನು ಠಾಣೆಯಲ್ಲಿ ಕುಳಿತು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಪ್ರಾ.ಸ–2:

ಶ್ರೀ.ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ಉತ್ತರ ವಲಯ–1 ಮಂಗಳೂರು ಇವರು ದಿ:8–7–2009ರಂದು ಸಾಕ್ಷಿ ನೀಡುತ್ತಾ , ನಾನು ಕಳೆದ 4 ವರ್ಷಗಳಿಂದ ಅಬಕಾರಿ ನಿರೀಕ್ಷಕರು,ಮಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ:13–2–2008ರಂದು ಪಣಂಬೂರು ಸಹಾಯಕ ಪೊಲೀಸ್ ಉಪ ಅಧೀಕ್ಷಕರು,ಪಣಂಬೂರು ಇವರ ಕ್ರೈಂ ಸಂ:10/2008 ದಿ:4–2–2008ರಲ್ಲಿ ವಶಪಡಿಸಿಕೊಂಡ ಗೂಡ್ಸ್ ಟಿಪ್ಪರ್ ಲಾರಿ ಸಂ: KA-19-B-7029 ವಾಹನ ಹಾಗೂ ಸದ್ರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 35 ಲೀಟರು ಗಾತ್ರದ 157 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಮದ್ಯಸಾರ ವನ್ನು ಈ ಕಛೇರಿಗೆ ಹಸ್ತಾಂತರಿಸಿರುತ್ತಾರೆ. ಮುಂದಿನ ತನಿಖೆ ನಡೆಸಲಾಗಿ ಮದ್ಯಸಾರವನ್ನು ನಾಶಪಡಿಸಲು 28–5–2008ರಂದು ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಮಂಗಳೂರು ಇವರ ಮುಟ್ಟುಗೋಲು ಆದೇಶಕ್ಕಾಗಿ ವರದಿ ಮಾಡಿರುತ್ತೇನೆ. ನಂತರ ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಮಂಗಳೂರುರವರ ಆದೇಶ ಸಂ: ಎಸ್‌ಡಿಕೆ: 312:ಡಿಟಿಸಿಆರ್: 2007–08 ದಿ:29–8–2008ರ ಆದೇಶದ ಪ್ರಕಾರ ವಶಪಡಿಸಿಕೊಂಡ 35 ಲೀಟರು ಗಾತ್ರದ 157 ಪ್ಲಾಸ್ಟಿಕ್ ಕ್ಯಾನುಗಳಲ್ಲಿದ್ದ ಸ್ಪಿರಿಟನ್ನು ನಾಶಪಡಿಸಲು ಆದೇಶಿಸಿರುತ್ತಾರೆ. ಸದ್ರಿ ಆದೇಶದ ಪ್ರಕಾರ ದಿ:10–9–2009ರಂದು ಸದ್ರಿ ಸ್ಪಿರಿಟನ್ನು ನಾಶಪಡಿಸಲಾಯಿತು.ಹಾಗೂ ವಶಪಡಿಸಿಕೊಂಡ ಖಾಲಿ ಕ್ಯಾನುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿ,ಬಂದಂತಹ ಮೌಲ್ಯವನ್ನು ಸರ್ಕಾರಕ್ಕೆ ಒಪ್ಪಿಸಲಾಗಿದೆ. ಪ್ರಕರಣದಲ್ಲಿ ವಶಪಡಿಸಿಕೊಂಡ ಟಿಪ್ಪರ್ ಲಾರಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕುವ ನಡವಳಿಗೆ ತನಿಖಾ ವರದಿಯನ್ನು ಈ ನ್ಯಾಯಾಲಯಕ್ಕೆ ದಿ:28–5–2008ರಂದು ಸಲ್ಲಿಸಿದ್ದು, ಸದ್ರಿ ತನಿಖಾ ವರದಿಯನ್ನು ನಿಶಾನೆ ಪಿ–2 ಎಂದು ,ಸಾಕ್ಷಿಯ ಸಹಿಯನ್ನು ನಿಶಾನೆ ಪಿ–2 ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಎದುರುದಾರರ ವಕೀಲರ ಪಾಟೀ ಸವಾಲಿಗೆ ಪ್ರಾಸಿಕ್ಯೂಶನ್ ಸಾಕ್ಷಿದಾರರು ಉತ್ತರಿಸುತ್ತಾ ಈ ಈ ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿದ ವಾಹನ ಮಾಲೀಕರಿಂದ ನಾನು ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ನಾನು ಸದ್ರಿ ಪ್ರಕರಣದಲ್ಲಿ ವಶಪಡಿಸಿರುವ ವಾಹನದ ಬಿ ರಿಜಿಸ್ಟ್ರಾರ್ ಪತ್ರದ ಆಧಾರದ ಮೇಲೆ ವಾಹನದ ಮಾಲಿಕತ್ವ ಗುರುತಿಸಿ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿ ಈ ಪ್ರಾಧಿಕಾರಕ್ಕೆ ಒಪ್ಪಿಸಿರುತ್ತೇನೆ ಎಂದು ಪಾಟಿ ಸಾವಲಿಗೆ ಉತ್ತರ ನೀಡಿರುತ್ತಾರೆ.

ಪ್ರಾ.ಸ–3:

ಶ್ರೀ. ಮಾಧವ ರಾವ್ ಯು.ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣೆ,ಪಣಂಬೂರು ಇವರು ದಿನಾಂಕ: 9–9–2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ನಾನು ಪಣಂಬೂರು ಪೊಲೀಸ್ ಠಾಣೆಯಲ್ಲಿ 2005ರಿಂದ ಇಂದಿನತನಕ ಸಹಾಯಕ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:4–2–2008ರಂದು ಬೆಳಿಗ್ಗೆ 6–30 ಗಂಟೆಗೆ ವೃತ್ತ ನಿರೀಕ್ಷಕರಾದ ಶ್ರೀ.ಚಂದ್ರಶೇಖರ್ ಇವರು ನಮ್ಮನ್ನು ಸಿಬ್ಬಂಧಿಯೊಂದಿಗೆ ಬೈಕಂಪಾಡಿ ಮೂಕಾಂಬಿಕ ಕೆಮಿಕಲ್ ಎಂಬ ರಾಸಾಯನಿಕ ಘಟಕ ಇಲ್ಲಿಗೆ ಬರುವಂತೆ ಸೂಚಿಸಿದ ಮೇರೆಗೆ ನಾನು ಠಾಣೆಯಿಂದ ನಮ್ಮ ಕಾನ್ಸ್ ಟೇಬಲ್ ಹೆಚ್.ಸಿ–672, ಎಎಸ್ ಮಧು ಮತ್ತು ಇತರ 4 ಕಾನ್ಸ್ ಟೇಬಲ್‌ಗಳೊಂದಿಗೆ ಮತ್ತು ಜೀಪು ಚಾಲಕನೊಂದಿಗೆ ಟೀ ಜಂಕ್ಷನ್ ಬಳಿ ಬಂದಾಗ ಬೆಳಿಗ್ಗೆ 7–00 ಗಂಟೆಗೆ ನಮ್ಮ ಹಿರಿಯ ಅಧಿಕಾರಿಗಳಾದ ಮಾನ್ಯ ಎಎಸ್‌ಪಿರವರು ಸದ್ರಿ ಸ್ಥಳದಲ್ಲಿ ಹಾಜರಿರುತ್ತಾರೆ. ಸದ್ರಿ ಸ್ಥಳಕ್ಕೆ ಬಂದಾಗ ಮೂಕಾಂಬಿಕಾ ಕೆಮಿಕಲ್ಸ್ ಘಟಕದ ಒಳಗಡೆ ಆವರಣದಿಂದ ಒಂದು ಕೆಂಪು ಬಣ್ಣದ ಟಿಪ್ಪರ್ ಲಾರಿಯು ಪ್ಯಾಕ್ಟರಿಯ ಗೇಟಿನಿಂದ ಹೊರಗಡೆ ಬಂದು, ಉತ್ತರ ದಿಕ್ಕಿಗೆ ಕೆಐಎಡಿಬಿ ಪ್ರದೇಶದ ಕಡೆಗೆ ಹೋಗುತ್ತಿದ್ದು ನಾನು ಮತ್ತು ಎಸಿಐ ಮತ್ತು ಸಿಬ್ಬಂಧಿಗಳು ಸದ್ರಿ ಟಿಪ್ಪರ್ ಲಾರಿಯನ್ನು ತಡೆಹಿಡಿದು ನಿಲ್ಲಿಸಲು ಸೂಚನೆ ನೀಡಿದಾಗ ಲಾರಿ ಚಾಲಕ ನಮ್ಮನ್ನು ಕಂಡು, ಲಾರಿಯನ್ನು ನಿಲ್ಲಿಸದೇ ಮುಂದಕ್ಕೆ ಪರಾರಿಯಾಗಲು ಪ್ರಯತ್ನಿಸಿದ್ದು, ನಾವು ಆ ಲಾರಿಯನ್ನು ಬೆನ್ನಟ್ಟಿ ಸುಮಾರು ಅರ್ಧ ಕಿ.ಮೀ ದೂರ ಕೆಐಎಡಿಬಿ ಪ್ರದೇಶದ ಕಡೆಗೆ ಸಾಗಿ ಲಾರಿಯನ್ನು ತಡೆದು ನಿಲ್ಲಿಸಲಾಗಿ, ಸದ್ರಿ ಲಾರಿಯಲ್ಲಿದ್ದ ಚಾಲಕ ಹಾಗೂ ಇನ್ನೊರ್ವ ವ್ಯಕ್ತಿ ಲಾರಿಯಿಂದ ಜಿಗಿದು,ಪರಾರಿಯಾಗಲು ಪ್ರಯತ್ನಿಸಿದಾಗ ಅವರನ್ನು ಹಿಡಿದು, ವಿಚಾರಿಸಲಾಗಿ ಲಾರಿಯಲ್ಲಿ ಹ್ಯೊಗೆ ಸಾಗಿಸಲಾಗುತ್ತಿದೆ ಎಂದು ತಿಳಿಸಿದರು. ನಂತರ ನಾವು ಸದ್ರಿ ಲಾರಿಯನ್ನು ಪರಿಶೀಲಿಸಲಾಗಿ ಮೇಲಕ್ಕೆ ಮರಳು ತುಂಬಿದ್ದು, ಸದ್ರಿ ಮರಳಿನ ಅಡಿಯಲ್ಲಿ ಲಾರಿಯ ಹಿಂಭಾಗದಲ್ಲಿ ತಲಾ 35 ಲೀ ಸಾಮರ್ಥ್ಯದ 157 ಪ್ಲಾಸ್ಟಿಕ್ ಕ್ಯಾನುಗಳನ್ನು ಅಡಗಿಸಿಟ್ಟಿರುವುದು ಕಂಡು ಬಂತು. ಸದ್ರಿ ಕ್ಯಾನುಗಳನ್ನು ಎಲ್ಲಿಂದ ತರಲಾಗಿದೆ ಎಂದು ನಾವು ಹಿಡಿದು ನಿಲ್ಲಿಸಿದ ಚಾಲಕ ಮತ್ತು ಇನ್ನೊಬ್ಬನನ್ನು ವಿಚಾರಿಸಲಾಗಿ ಸದ್ರಿ ಮದ್ಯಸಾರ ತುಂಬಿದ ಕ್ಯಾನುಗಳನ್ನು ಮೂಕಾಂಬಿಕಾ ಕೆಮಿಕಲ್ಸ್ ಘಟಕದಿಂದ ತಂದಿರುವುದಾಗಿ ತಿಳಿಸಿದನು. ಈ ಬಗ್ಗೆ ಸದ್ರಿ ಸ್ಪಿರಿಟ್ ತುಂಬಿದ ಕ್ಯಾನುಗಳು ಯಾರಿಗೆ ಸಂಬಂಧಿಸಿದ್ದು ಎಂದು ಕೇಳಲಾಗಿ ಇದು ಮೂಕಾಂಬಿಕಾ ಕೆಮಿಕಲ್ ಪ್ಯಾಕ್ಟರಿಯ ಮಾಲೀಕರಾದ ಶ್ರೀ. ಮಧುಕರ ಮಲ್ಲಿ ಇವರಿಗೆ ಸೇರಿರುವುದಾಗಿ ತಿಳಿಸಿದನು. ಹಾಗೂ ಸದ್ರಿ ಕ್ಯಾನುಗಳನ್ನು ಅವರ ಪ್ಯಾಕ್ಟರಿ ವಠಾರದಿಂದ ಶ್ರೀ.ಮಧುಕರ ಮಲ್ಲಿಯವರು ಇರಿಸಿದ್ದಾಗಿ ತಿಳಿಸಿದರು. ನಂತರ ಸದ್ರಿ ಸ್ಥಳಕ್ಕೆ ಬರಮಾಡಿಸಿದ ಚಂದ್ರಕಾಂತ ಮತ್ತು ಪ್ರವೀಣ ಎಂಬವರಿಗೆ ಲಾರಿಯಲ್ಲಿ ಸಿಕ್ಕಿದ ಸ್ಪಿರಿಟ್ ಸಾಗಾಟದ ಬಗ್ಗೆ ಮಹಜರು ತಯಾರಿಸಿದ ಬಗ್ಗೆ ತಿಳಿಸಿ ಅವರನ್ನು ಪಂಚ ಸಾಕ್ಷಿಯನ್ನಾಗಿ ಮಾಡಿ ಸದ್ರಿ ಲಾರಿ ಸಂ: KA-19-B-7029 ನ್ನು ಜಪ್ತು ಪಡಿಸಿ ಅದರಲ್ಲಿದ್ದ 35 ಲೀ ಸಾಮರ್ಥ್ಯದ 157

ಕ್ಯಾನುಗಳಿಂದ ಒಟ್ಟು 5495 ಲೀ ಮದ್ಯಸಾರ ಮತ್ತು ಸಾಗಾಣಿಕೆ ಮಾಡಲಾಗುತ್ತಿದ್ದ ಟಿಪ್ಪರ್ ಲಾರಿಯನ್ನು ಜಪ್ತು ಪಡಿಸಿ ಪ್ರತಿ ಕ್ಯಾನಿನಿಂದ ತಲಾ 1 ಲೀಟರಿನ ಕ್ಯಾನ್‌ನಲ್ಲಿ ಸ್ಪಿರಿಟ್ ಮಾದರಿಗಳನ್ನು ತೆಗೆದು ಮುಚ್ಚಳ ಹಾಕಿ ಬಟ್ಟೆಯಿಂದ ಮುಚ್ಚಳ ಕಟ್ಟಿ ಅರಗು ಸೀಲು ಹಾಕಲಾಯಿತು ಮತ್ತು ಪ್ರಕರಣದ ಸಂಖ್ಯೆಯ ಗುರುತು ಚೀಟಿಗಳನ್ನು ಎಲ್ಲಾ 157 ಮಾದರಿಗಳಿಗೆ ಅಂಟಿಸಲಾಯಿತು. ಮತ್ತು ಸದ್ರಿ ಮಾದರಿಗಳಿಗೆ 1ಎ ರಿಂದ 157ಎ ವರೆಗೆ ನಂಬರನ್ನು ಬರೆದು ಅಂಟಿಸಲಾಯಿತು. ನಂತರ ಮಹಜರನ್ನು ಪೂರ್ಣಗೊಳಿಸಿ ಪಂಚರಾದ ಚಂದ್ರಕಾಂತ, ಪ್ರವೀಣ ಪೂಜಾರಿ ಇವರೊಂದಿಗೆ ಪೊಲೀಸ್ ಅಧಿಕಾರಿಗಳು ಮತ್ತು ನಾವು ಸದ್ರಿ ಮಹಜರಿಗೆ ಸಹಿ ಮಾಡಿರುತ್ತೇನೆ. ಸದ್ರಿ ಮಹಜರನ್ನು ಪ್ರಾಧಿಕಾರದ ವಿಚಾರಣೆಯಲ್ಲಿ ಗುರುತಿಸಿದ್ದು ನಿಶಾನೆ ಪಿ–1 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸದ್ರಿ ಮಹಜರಿನ ನನ್ನ ಸಹಿಯನ್ನು ನಿಶಾನೆಪಿ–1 ಬಿ ಎಂದು ಗುರುತಿಸಲಾಯಿತು. ನಂತರ ನಾನು ಸದ್ರಿ ಸೊತ್ತು ಮತ್ತು ಅರೋಪಿಗಳನ್ನು ಠಾಣೆಗೆ ತಂದು ಅರೋಪಿಗಳ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 14,15,32,34,35,43 ರಡಿ ಮೊಕದ್ದಮೆ ದಾಖಲಿಸಿ ನಮ್ಮ ಠಾಣಾ ಅ.ಸಂ:10/2008 ದಿ:4–2–2008ರಂತೆ ದಾಖಲಿಸಿ ಪ್ರ.ಮಾ.ವರದಿ ತಯಾರಿಸಿರುತ್ತೇನೆ. ಸದ್ರಿ ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಳ್ಳಲಾದ ಸೊತ್ತುಗಳ ಪಿ.ಎಫ್ ವರದಿಯನ್ನು ನಾನೆ ತಯಾರಿಸಿರುತ್ತೇನೆ. ಸದ್ರಿ ಪ್ರಮಾವ ಪ್ರತಿಯನ್ನು ನಿಶಾನೆ ಪಿ–3ಎ ಗುರುತಿಸಲಾಯಿತು. ಮತ್ತು ಪಿಎಫ್ ನ್ನು ನಿಶಾನೆ ಪಿ–4 ಎಂದು, ಸಹಿಯನ್ನು ನಿಶಾನೆ ಪಿ–4 ಎ ಎಂದು ಗುರುತಿಸಲಾಯಿತು. ನಂತರ ಸದ್ರಿ ಮೊಕದ್ದಮೆಯ ಪ್ರಮಾವ ಮತ್ತು ದಸ್ತಗಿರಿ ಮಾಡಲಾದ ಇಬ್ಬರು ಅಪರಾಧಿಗಳನ್ನು ಮಾನ್ಯ ಜೆ.ಎಂ.ಎಫ್.ಸಿ 2ನೇ ನ್ಯಾಯಾಲಯ,ಮಂಗಳೂರು ಇಲ್ಲಿಗೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ, ನಂತರ ಈ ಪ್ರಕರಣಕ್ಕೆ ಸಂಬಂಧಿಸಿದ ತನಿಖೆ ಮುಂದುವರಿಸಿ ದಿ:15–2–08ರಂದು 157 ಕ್ಯಾನ್ ಗಳಲ್ಲಿರುವ ಮದ್ಯಸಾರದಿಂದ ತಲಾ ಒಂದು ಲೀಟರಿನಂತೆ ರಾಸಾಯನಿಕ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣಾ ಕಛೇರಿ ಮಂಗಳೂರು ಇವರಿಗೆ ಕಳುಹಿಸಿ ಕೊಟ್ಟಿದ್ದು, ಅವರಿಂದ ದಿ:13–3–2008ರ ರಾಸಾಯನಿಕ ವಿಶ್ಲೇಷಣೆ ವರದಿಯನ್ನು ಪಡೆದು ಕೊಂಡಿರುತ್ತೇನೆ. ನಂತರ ಮೊಕದ್ದಮೆಗೆ ಸಂಬಂಧಿಸಿ ವಶಪಡಿಸಿದ KA-19-B-7029 ವಾಹನದ ಮಾಲೀಕತ್ವದ ಬಗ್ಗೆ ಬಿ ವಹಿ ವರದಿ ಕೇಳಿ ಪ್ರಾ.ಸಾ.ಅ ಮಂಗಳೂರು ಇವರಿಗೆ ಪತ್ರ ಬರೆದಿರುತ್ತೇನೆ.

ನಂತರ ಬಿ ವಹಿ ಪಡೆದು ಸದ್ರಿ ವರದಿಯಂತೆ ಶ್ರೀ.ಜಗದೀಶ್ ಆಳ್ವ ಇವರು ಈ ವಾಹನದ ನೊಂದಣಿ ಮಾಲೀಕರು ಎಂದು ತಿಳಿದು ಬಂತು. ನಂತರ ಈ ಕಡತವನ್ನು ಮುಂದಿನ ತನಿಖೆ ಹಾಗೂ ದೋಷಾರೋಪಣಾ ಪಟ್ಟಿ ಬಗ್ಗೆ ಠಾಣಾ ಪೊಲೀಸ್ ಉಪ ನಿರೀಕ್ಷಕರು ಶ್ರೀ.ಜಯಂತ್ ಇವರಿಗೆ ಹಸ್ತಾಂತರ ಮಾಡಿರುತ್ತೇನೆ. ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿ ವಶಪಡಿಸಿಕೊಂಡ ಸೊತ್ತುಗಳನ್ನು ಈ ಪ್ರಾಧಿಕಾರದ ಅನುಮತಿ ಪಡೆದು ಮುಂದಿನ ತನಿಖೆ ಬಗ್ಗೆ ಶ್ರೀ.ವಿನೋದ್ ಕುಮಾರ್ ಅ.ಉ.ನಿ ಮಂಗಳೂರು ಉತ್ತರ ವಲಯ ಇವರ ಸುಪರ್ದಿಗೆ ಹಸ್ತಾಂತರಿಸಿರುತ್ತೇನೆ. ಎರಡನೇ ಜೆ.ಎಂ.ಎಫ್ ಸಿ ನ್ಯಾಯಾಲಯ, ಮಂಗಳೂರು ಇಲ್ಲಿ ಸಿ.ಸಿ ನಂ:3069 ರಂತೆ ದೋಷಾರೋಪಣಾ ಪಟ್ಟಿ ದಾಖಲಿಸಲಾಗಿರುತ್ತದೆ.

ಎದುರುದಾರರ ವಕೀಲರ ಪಾಟೀ ಸವಾಲಿಗೆ ಪ್ರಾಸಿಕ್ಯೂಶನ್ ಸಾಕ್ಷಿದಾರರು ಉತ್ತರಿಸುತ್ತಾ ನಾವು ದಿ:4–2–2008ರಂದು ಅಪರಾಧ ಸ್ಥಳಕ್ಕೆ ತಲುಪಿದಾಗ ಸದ್ರಿ ಸ್ಥಳದಲ್ಲಿ ನಮ್ಮ ಹಿರಿಯ ಅಧಿಕಾರಿಗಳು ಇಬ್ಬರು ಮತ್ತು ಮೂರು ಜನ ಸಿಬ್ಬಂಧಿಗಳು ಅಲ್ಲಿ ಹಾಜರಿದ್ದರು. ಸದ್ರಿಯವರು ನಿಂತಿದ್ದ ಟೀ ಜಂಕ್ಷನ್ ಎಂಬ ಸ್ಥಳದಿಂದ ಮೂಕಾಂಬಿಕಾ ರಾಸಾಯನಿಕ ಸ್ಥಳಕ್ಕೆ ಸುಮಾರು ಅರ್ಧ ಫರ್ಲಾಂಗು ದೂರವಿರುತ್ತದೆ, ನಾವು ಸದ್ರಿ ಸ್ಥಳಕ್ಕೆ ತಲುಪಿದ 10 ನಿಮಿಷದಲ್ಲಿ ಮೊಕದ್ದಮೆಗೆ ಒಳಪಟ್ಟ ವಾಹನವು ಆ ಸ್ಥಳಕ್ಕೆ ಬಂದಿರುತ್ತದೆ. ಸದ್ರಿ ವಾಹನವನ್ನು ನಮ್ಮ ಹಿರಿಯ ಅಧಿಕಾರಿ ಎ.ಎಸ್. ಪಿ ರವರು ಪ್ರಪ್ರಥಮವಾಗಿ ನೋಡಿರುತ್ತಾರೆ. ಸದ್ರಿ ಸ್ಥಳದಲ್ಲಿ ನಾನು ಪ್ರಥಮವಾಗಿ ತಕ್ಷೀರಿಗೆ ಸಂಬಂಧಿಸಿದ ವಾಹನ ಗಮನಿಸಿದ್ದು, ನಮ್ಮ ಎಎಸ್‌ಪಿ ಸಾಹೇಬರು ಸದ್ರಿ ವಾಹನವನ್ನು ನಿಲ್ಲಿಸಲು ಸನ್ನೆ ಮಾಡಿದಾಗ ಚಾಲಕನು ವಾಹನವನ್ನು ನಿಲ್ಲಿಸದೇ ಮುಂದೆ ಹೋಗಲು ಪ್ರಯತ್ನಿಸಿದಾಗ ನಾವು ನಿಲ್ಲಿಸಲು ಪ್ರಯತಿಸಿದೆವು. ನಾವು ಆ ದಿವಸ ನಿಂತಿದ್ದ ಟೀ ಜಂಕ್ಷನ್ ಎಂಬ ಸ್ಥಳದಿಂದ ಪೂರ್ವ ದಕ್ಷಿಣ ದಿಕ್ಕಿಗೆ ಮೂಕಾಂಬಿಕಾ ಪ್ಯಾಕ್ಟರಿ ಆವರಣವಿರುತ್ತದೆ. ಮೂಕಾಂಬಿಕ ಕೆಮಿಕಲ್ ಪ್ಯಾಕ್ಟರಿ ಆವರಣವು ನಮಗೆ ನೋಡಲು ಸಾಧ್ಯವಿಲ್ಲ. ಸದ್ರಿ ವಾಹನವನ್ನು ಎ.ಎಸ್.ಪಿರವರು ನಿಲ್ಲಿಸಲು ಸನ್ನೆ ಮಾಡಿದ ನಂತರ ಸುಮಾರು 50 ಫೀಟ್ ದೂರದಲ್ಲಿ ನಾವು ವಾಹನವನ್ನು ನಿಲ್ಲಿಸಲು ಸನ್ನೆ ಮಾಡಿರುತ್ತೇವೆ. ಸದ್ರಿ ವಾಹನವು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ಚಲಿಸಿ ಬರುತ್ತಿತ್ತು. ಸದ್ರಿ ಲಾರಿಯಲ್ಲಿ ಸಾಗಿಸಲಾಗುತ್ತಿದ್ದ 157 ಪ್ಲಾಸ್ಟಿಕ್ ಕ್ಯಾನುಗಳು ಅಡಗಿಸಿಟ್ಟು , ಮೇಲೆ ಹಾಕಲಾಗಿದ್ದ ಹ್ಯೊಗೆ ಎಷ್ಟು ಪ್ರಮಾಣದಲ್ಲಿತ್ತು ಎಂದು ನಾವು ಗಮನಿಸಿರುವುದಿಲ್ಲ. ನಾವು ಈ ಮೊಕದ್ದಮೆಯಲ್ಲಿ ಪತ್ತೆಹಚ್ಚಿದ ಸ್ಥಳವು ಜನಸಂಚಾರ ಪ್ರದೇಶವಾಗಿರುತ್ತದೆ. ನಮ್ಮ ಅಪರಾಧದ ಸ್ಥಳ ಪಂಚನಾಮೆಗೆ ಸಹಿ ಮಾಡಿರುವ ಪಂಚದಾರರು ನಮ್ಮ ಸೃಷ್ಟಿಯ ಸಾಕ್ಷಿಗಳು ಎಂದರೆ ಸರಿಯಲ್ಲ. ನಾವು ಮಾದರಿಗಳ ಮೇಲೆ ಅಂಟಿಸಲಾದ ಮೊಕದ್ದಮೆ ಗುರುತು ಚೀಟಿ 1ಎ ರಿಂದ 157ಎ ರಂತೆ ತಯಾರಿಸಿ ಅಂಟಿಸಿದ ಮಾದರಿ ಚೀಟಿಗಳ ಮೇಲೆ ನನ್ನ ಸಹಿ ಇರುವುದಿಲ್ಲ. ನಾನು ಈ ಸ್ಥಳ ಮಹಜರನ್ನು ನಮ್ಮ ಮೇಲಾಧಿಕಾರಿಗಳ ಮಾರ್ಗದರ್ಶನದಂತೆ ಕಛೇರಿಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ. ನಾನು ಸದ್ರಿ ಅಪರಾಧ ಸ್ಥಳಕ್ಕೆ ಹೋಗಿದ್ದೆ ಇಲ್ಲ ,ಸದ್ರಿ ಸ್ಥಳದಲ್ಲಿ ವಾಹನ ಅಕ್ರಮ ಸೊತ್ತು ಜಪ್ತು ಪಡಿಸಿದ್ದೆ ಇಲ್ಲ ಎಂಬುದು ಸರಿ ಅಲ್ಲ ,ನಾವು ವಶಪಡಿಸಿಕೊಂಡಿರುವ 157 ಕ್ಯಾನುಗಳಲ್ಲಿದ್ದ 5495 ಲೀ ಮದ್ಯಸಾರಕ್ಕೂ ವಾಹನದ ಮಾಲೀಕರಿಗೂ, ವಾಹನಕ್ಕೂ ಮತ್ತು ಮೂಕಾಂಬಿಕಾ ಕೆಮಿಕಲ್ ಸಂಸ್ಥೆಯ ಪಾಲುದಾರರಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಸರಿ ಅಲ್ಲ. ನಾನು ಆ ದಿವಸವಾಗಲೀ ,ಹಿಂದಿನ ದಿವಸವಾಗಲೀ, ಪ್ರಕರಣ ದಾಖಲಾದ ನಂತರವಾಗಲೀ, ಆ

ಮೂಕಾಂಬಿಕ ಕೆಮಿಕಲ್ಸ್ ಘಟಕದ ಆವರಣಕ್ಕೆ ಭೇಟಿ ನೀಡಿರುವುದಿಲ್ಲ. ಹಾಗೂ ಸದ್ರಿ ಘಟಕದಲ್ಲಿ ಇರಿಸಲಾಗಿರುವ ದಾಸ್ತಾನು ರಿಜಿಸ್ಟ್ರಾರ್‌ನ ಪರಿಶೀಲನೆ ನಡೆಸಲಾಗಿಲ್ಲ. ನಾನು ಮೊಕದ್ದಮೆಯಲ್ಲಿ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿ ಅಲ್ಲ ಎಂದು ಪಾಟಿ ಸಾವಲಿಗೆ ಉತ್ತರ ನೀಡಿರುತ್ತಾರೆ.

ಪ್ರಕರಣದಲ್ಲಿ ವಾಹನದ ಅರ್.ಸಿ ಮಾಲೀಕರಿಗೆ ರಕ್ಷಣಾ ಸಾಕ್ಷಿಯಾಗಿ ಹಾಜರಾಗುವಂತೆ ದಿ:27–10–2009,10–11–2009 ಮತ್ತು ಅಂತಿಮವಾಗಿ ದಿ:8–12–2009 ಕ್ಕೆ ದಿನ ನಿಗಧಿ ಪಡಿಸಿ, ಸೂಚನಾ ಪತ್ರ ನೀಡಲಾಗಿದ್ದರೂ,ಸದ್ರಿಯವರು ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಲು ಮುಂದೆ ಬಂದಿರುವುದಿಲ್ಲ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ–1,2 ಮತ್ತು ಪ್ರಾ.ಸ–3 ರವರ ಸಾಕ್ಷಿ ವಿಚಾರಣೆಯನ್ನು ಹಾಗೂ ರಕ್ಷಣಾ ಪರ ವಕೀಲರಿಂದ ಪಾಟಿ ಸವಾಲು ನಡೆಸಲಾಗಿದ್ದು, ರಕ್ಷಣಾ ಸಾಕ್ಷಿ ಹಾಜರಾಗದೇ ಇರುವುದರ ಬಗ್ಗೆ ರಕ್ಷಣಾ ಪರ ವಕೀಲರ ವಾದವನ್ನು ಅಲಿಸಿ ಮತ್ತು ಪ್ರಕರಣದ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿ:4–2–2008ರಂದು ಜಪ್ತು ಪಡಿಸಿರುವ ಟಿಪ್ಪರ್ ಲಾರಿ ಸಂ:KA-19-B-7029ರಲ್ಲಿ ಮರಳಿನ ಅಡಿಯಲ್ಲಿ ಅಡಗಿಸಿ ಇರಿಸಿಕೊಂಡು ಮದ್ಯಸಾರ ತುಂಬಿದ 35 ಲೀ ಸಾಮರ್ಥ್ಯದ 157 ಬಿಳಿ ಕ್ಯಾನುಗಳಲ್ಲಿ ಬೃಹತ್ ಪ್ರಮಾಣದಲ್ಲಿ 5495 ಲೀಟರ್ ಮದ್ಯಸಾರವನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು, ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ವಶಪಡಿಸಿಕೊಂಡಿದ್ದು, ಟಿಪ್ಪರ್ ಲಾರಿ ಸಂ:KA-19-B-7029ನ್ನು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯಸಾರ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಭೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ವಾಹನ ಮಾಲೀಕರು ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಉತ್ತರಿಸುತ್ತ ವಾಹನವನ್ನು ಸಾರ್ವಜನಿಕವಾಗಿ ಸೊತ್ತು ಸಾಗಾಟದ ಬಗ್ಗೆ ಬಾಡಿಗೆಗೆ ಇಡಲಾಗಿದ್ದು, ಹಾಗೂ ವಾಹನದ ಚಾಲಕನ ನಿಯುಕ್ತಿ ಪೂರ್ವದಲ್ಲಿ ವಾಹನವನ್ನು ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬಳಸಬಾರದೆಂದು ಪೂರ್ವ ಸೂಚನೆ ನೀಡಲಾಗಿರುತ್ತದೆ ಎಂದು ತಿಳಿಸಿರುವರಾದರೂ ಇದಕ್ಕೆ ಸೂಕ್ತವಾದ ಲಿಖಿತ ದಾಖಲೆಗಳನ್ನು ಸಾಕ್ಷ್ಯಾಧಾರವನ್ನಾಗಿ ಒದಗಿಸಿರುವುದಿಲ್ಲ. ಹಾಗೂ ತನ್ನ ನಿರಾಪರಾಧಿತ್ವವನ್ನು ಸಾಬೀತುಪಡಿಸುವ ಯಾವುದೇ ಅಂಶಗಳನ್ನು ದಾಖಲೆಗಳ ಮೂಲಕ ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗೂ ಈ ಪ್ರಾಧಿಕಾರದಿಂದ ಅವರಿಗೆ ರಕ್ಷಣಾ ಸಾಕ್ಷಿ ನಡೆಸಲು ಸತತ ಮೂರು ಬಾರಿ ಅವಕಾಶ ನೀಡಲಾಗಿಯೂ ,ಅವರು ರಕ್ಷಣಾ ವಿಚಾರಣೆಗೆ ಈ ಪ್ರಾಧಿಕಾರದ ಮುಂದೆ ಹಾಜರಾಗಲು ಮುಂದಾಗಿರುವುದಿಲ್ಲ.

ಕಾರಣ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯಾಧಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ವಾಹನದ ಮಾಲೀಕರಿಗೆ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಲು ಹಲವಾರು ಬಾರಿ ನೋಟಿಸು ನೀಡಲಾಗಿದ್ದರೂ,ಸದ್ರಿಯವರು ಹಾಜರಾಗಿ ರಕ್ಷಣಾ ಸಾಕ್ಷಿ ನೀಡಿ ತನ್ನ ನಿರುಪರಾಧಿತ್ವನ್ನು ಸಾಬೀತು ಪಡಿಸಲು ವಿಫಲರಾಗಿರುವುದರಿಂದ ಸದ್ರಿ ವಾಹನವನ್ನು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಟಿಪ್ಪರ್ ಲಾರಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಟಿಪ್ಪರ್ ಲಾರಿ ಸಂ: KA-19-B-7029ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲ0 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಸಹಾಯಕ ಪೊಲೀಸ್ ಅಧೀಕ್ಷಕರು,ಪಣಂಬೂರು ಉಪ ವಿಭಾಗ, ಪಣಂಬೂರು ಇವರ ತಕ್ಷೀರು ಸಂ:10/2008 ದಿ:4–2–2008 ರಲ್ಲಿ ಜಪ್ತು ಪಡಿಸಿರುವ ಟಿಪ್ಪರ್ ಲಾರಿ ಸಂ:KA-19-B-7029 (ಚಾಸೀಸ್ ನಂ:373134ASZ102379 ಮತ್ತು ಇಂಜಿನ್ ನಂ:697TC56ASZ101909) ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:4–7–2008ರಂದು ತಾತ್ಕಾಲಿಕವಾಗಿ ವಾಹನ ಬಿಡುಗಡೆಗೊಳಿಸಿ ಹೊರಡಿಸಿದ ಮಧ್ಯಂತರ ಬಿಡುಗಡೆ ಅದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಅರ್.ಸಿ ಮಾಲೀಕರು ಸದ್ರಿ ಮದ್ಯಂತರ ಬಿಡುಗಡೆ ಹೊಂದಿರುವ ಟಿಪ್ಪರ್

ಲಾರಿ ಸಂ: KA-19-B-7029 ನ್ನು ಈ ಆದೇಶದ 30 ದಿನಗಳೊಳಗೆ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ಉತ್ತರ ವಲಯ-I ಇವರ ಮೂಲಕ ಇಲಾಖಾ ವಶಕ್ಕೆ ಒಪ್ಪಿಸಲು ಆದೇಶಿಸಿದೆ. ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ಉತ್ತರ ವಲಯ -I ಇವರು, ಸದ್ರಿ ಮುಟ್ಟುಗೋಲು ವಾಹನವನ್ನು ಆರ್.ಸಿ ಮಾಲೀಕರಿಂದ ಇಲಾಖಾ ವಶಕ್ಕೆ ಪಡೆದು ಅವರ ಸುಪರ್ದಿಯಲ್ಲಿ ಇರಿಸಿಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ವಾಹನವನ್ನು ಆರ್.ಸಿ ಮಾಲಿಕರು ಈ ಆದೇಶ ಹೊರಡಿಸಿದ 30 ದಿವಸಗಳೊಳಗೆ ಸರ್ಕಾರಕ್ಕೆ ಅಬಕಾರಿ ಉಪ ನಿರೀಕ್ಷಕರು(1) ಮಂಗಳೂರು ಉತ್ತರ ವಲಯ -I ಇವರಲ್ಲಿ ಒಪ್ಪಿಸಲು ವಿಫಲರಾದ್ದಲ್ಲಿ, ಅವರು ಈ ಪ್ರಾಧಿಕಾರಕ್ಕೆ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರೆಂಟಿ ಮೊತ್ತ ರೂ.5,90,000/– ನ್ನು ಇನ್‌ವೋಕ್ ಮಾಡಿ ಸರ್ಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:23–12–2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ .ಉಲ್ಲಾಸ್ , ಕಾನ್ಸ್ ಟೇಬಲ್ ಸಂ:1333, ಪಣಂಬೂರು ಪೊಲೀಸ್ ಠಾಣೆ

ಪ್ರಾ.ಸಾ–2 : ಶ್ರೀ.ವಿನೋದ್ ಕುಮಾರ್
ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ–1

ಪ್ರಾ.ಸಾ–3 : ಶ್ರೀ . ಮಾಧವ ರಾವ್.ಯು,
ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣೆ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–I	:	ಮಹಜರು ಪ್ರತಿ
ನಿಶಾನೆ ಪಿ–Iಎ	:	ಅದರ ಮೇಲಿನ ಸಹಿ
ನಿಶಾನೆ ಪಿ–2	:	ತನಿಖಾ ವರದಿ
ನಿಶಾನೆ ಪಿ–2ಎ	:	ಅದರ ಮೇಲಿನ ಸಹಿ
ನಿಶಾನೆ ಪಿ–3	:	ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–3ಎ	:	ಅದರ ಮೇಲಿನ ಸಹಿ
ನಿಶಾನೆ ಪಿ–4	:	ಸೊತ್ತು ಪಟ್ಟಿ
ನಿಶಾನೆ ಪಿ–4ಎ	:	ಅದರ ಮೇಲಿನ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

–ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.69

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/78/ಡಿಟಿಸಿಆರ್/2008–09, ದಿನಾಂಕ:30ನೇ ಡಿಸೆಂಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಕೋಣಾಜೆ ಪೊಲೀಸ್ ಠಾಣೆ,
ಕೋಣಾಜೆ.

ಆರೋಪಿಗಳು:

1) ಅಬ್ದುಲ್ ಬಶೀರ್(20 ವ),
ಬಿನ್:ಅಬ್ದುಲ್ ರಹಿಮಾನ್ ವಾಸ:ಪೈವಳಿಕೆ ನಗರ,ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ.
2) ಬ್ರೂಟಾನ್ ಡಿಸೋಜ(22 ವ),
ಬಿನ್: ಹೆನ್ರಿ ಡಿಸೋಜ, ಕಲಾಯಿ ಮನೆ, ವಾಸ:ಪೈವಳಿಕೆ ನಗರ, ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ.
3) ಫ್ರಾನ್ಸಿಸ್ ದೈಗೋಳಿ (ಪರಾರಿಯಾಗಿರುತ್ತಾರೆ)
4) ವಾಹನ ಮಾಲೀಕರು (ಪತ್ತೆಯಾಗಿರುವುದಿಲ್ಲ)

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10–08–2008 ರಂದು ಬಂಟ್ವಾಳ ತಾಲೂಕು ಕೈರಂಗಳ ಗ್ರಾಮದ ನಂದರಪಡ್ಪು ಎಂಬಲ್ಲಿ, ನಂದರಪಡ್ಪುನಿಂದ ಕೇರಳದ ಸುಂಕದಕಟ್ಟೆ ಎಂಬಲ್ಲಿಗೆ ಹಾದುಹೋಗುವ ಸಾರ್ವಜನಿಕರ ದಾಮಾರು ರಸ್ತೆಯಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸ್ಯಾಂಟ್ರೊ ಕಾರಿನಲ್ಲಿ ಸಾಗಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರು ತಮ್ಮ ಸಿಬ್ಬಂದಿಗಳು ಮತ್ತು ಪಂಚರೊಂದಿಗೆ ಸದರಿ ಸ್ಥಳದಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ, ಸಂಜೆ ಸುಮಾರು 5–45 ಗಂಟೆ ಸಮಯಕ್ಕೆ ಮುಡಿಪು ಕಡೆಯಿಂದ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ಬರುತ್ತಿರುವುದನ್ನು ಕಂಡು ಸಂಶಯದ ಮೇರೆಗೆ ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕ ಕಾರನ್ನು ನಿಲ್ಲಿಸದೆ ಕೇರಳದ ಸುಂಕದಕಟ್ಟೆ ಕಡೆಗೆ ಮುಂದಕ್ಕೆ ಚಲಾಯಿಸಿಕೊಂಡು ಹೋದಾಗ ತಮ್ಮ ಇಲಾಖಾ ಜೀಪಿನಲ್ಲಿ ಸದರಿ ಕಾರನ್ನು ಬೆನ್ನಟ್ಟಿದಾಗ, ಸುಮಾರು 400 ಅಡಿ ದೂರದಷ್ಟು ಮುಂದಕ್ಕೆ ಕಾರಿನ ಚಾಲಕ ಕಾರನ್ನು ಚಲಾಯಿಸಿಕೊಂಡು ಹೋಗಿ ನಿಲ್ಲಿಸಿದನು. ಆ ಸಮಯದಲ್ಲಿ ಕಾರಿನ ಹಿಂಭಾಗದ ಸೀಟಿನಲ್ಲಿ ಕುಳಿತ್ತಿದ್ದ ಫ್ರಾನ್ಸಿಸ್ ದೈಗೋಳಿ ಎಂಬುವವನು ಕಾರಿನಿಂದ ಕೆಳಗೆ ಇಳಿದು ಪರಾರಿಯಾದನು. ಕಾರಿನ ಚಾಲಕನಾದ ಅಬ್ದುಲ್ ಬಶೀರ್(20 ವ), ಬಿನ್:ಅಬ್ದುಲ್ ರಹಿಮಾನ್ ವಾಸ:ಪೈವಳಿಕೆ ನಗರ,ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಮತ್ತು ಬ್ರೂಟಾನ್ ಡಿಸೋಜ(22 ವ), ಬಿನ್: ಹೆನ್ರಿ ಡಿಸೋಜ, ಕಲಾಯಿ ಮನೆ, ವಾಸ:ಪೈವಳಿಕೆ ನಗರ, ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಇವರನ್ನು ವಿಚಾರಿಸಿದಾಗ, ಕಾರಿನ ಹಿಂಭಾಗದ ಸೀಟಿನ ಅಡಿಭಾಗದಲ್ಲಿ ದಾಸ್ತಾನು ಇಟ್ಟಿರುವ ಪಾಲಿಥಿನ್ ಚೀಲಗಳಲ್ಲಿ ತುಂಬಿರುವ ಸಾರಾಯಿ ಸ್ಯಾಚೆಟ್‌ಗಳನ್ನು ಅಕ್ರಮವಾಗಿ ಕೇರಳ ರಾಜ್ಯಕ್ಕೆ ಮಾರಾಟಕ್ಕಾಗಿ ಕೊಂಡುಹೋಗುತ್ತಿರುವುದಾಗಿ ನುಡಿದಿರುತ್ತಾರೆ. ಸದರಿ 6 ಪಾಲಿಥಿನ್ ಚೀಲಗಳನ್ನು ಕಾರಿನಿಂದ ಕೆಳಗಿಳಿಸಿ ಪರಿಶೀಲಿಸಿ ನೋಡಿದಾಗ, 6 ಚೀಲಗಳಲ್ಲಿ ತಲಾ 100 ಎಂ.ಎಲ್.ನ ೪೦೦ ಸಾರಾಯಿ ಸ್ಯಾಚೆಟ್‌ಗಳಂತೆ ಒಟ್ಟು 2400 ಸಾರಾಯಿ ಸ್ಯಾಚೆಟ್‌ಗಳು ಇರುವುದು ಕಂಡು ಬಂತು. ಪ್ರತಿ ಸಾರಾಯಿ ಸ್ಯಾಚೆಟ್‌ಗಳ ಮೇಲೆ 100 ಎಂ.ಎಲ್. ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಿದೆ ಮತ್ತು ಮೈಶುಗರ್ ಕಂಪೆನಿ ಎಂದು ಬರೆದಿರುತ್ತದೆ. ಸದರಿ ಸಾರಾಯಿ ಸ್ಯಾಚೆಟ್‌ಗಳ ಪಾಲಿಥಿನ್ ಚೀಲಗಳಿಗೆ ಎ,ಬಿ,ಸಿ,ಡಿ,ಇ,ಎಫ್ ಎಂಬ ನಿಶಾನೆಯನ್ನು ಕೊಡಲಾಯಿತು. ಪ್ರತಿಯೊಂದು ಪಾಲಿಥಿನ್ ಚೀಲಗಳಿಂದ ಸ್ಯಾಂಪಲ್‌ಗಾಗಿ ತಲಾ 10 ರಂತೆ 100 ಎಂ.ಎಲ್.ನ ಸಾರಾಯಿ ಸ್ಯಾಚೆಟ್‌ಗಳನ್ನು ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ, ಅದಕ್ಕೆ ಎಸ್.ಹೆಚ್.ಒ. ಅರಗು ಸೀಲ್ ಹಾಕಿ ಅವುಗಳಿಗೂ ಕೂಡಾ ಕ್ರಮವಾಗಿ ಎ,ಬಿ,ಸಿ,ಡಿ,ಇ,ಎಫ್ ಎಂಬ ನಿಶಾನೆಯನ್ನು ಕೊಡಲಾಯಿತು. ಅಕ್ರಮ ಸಾಗಾಟಕ್ಕೆ ಬಳಸಿದ ಸ್ಯಾಂಟ್ರೊ ಕಾರನ್ನು ಅಜಮಾಯಿಸಿ ನೋಡಲಾಗಿ, ಅದರ ನೋಂದಣಿ ಸಂಖ್ಯೆ: ಕೆಎಲ್–8–ವಿ–3758 ಆಗಿದ್ದು, ಇದು ಬಿಳಿ ಬಣ್ಣದಾಗಿರುತ್ತದೆ. ಇದರ ಇಂಜೀನ್ ನಂ: ಜಿ4ಹೆಚ್–ಡಿ2ಬಿಒ2578 ಆಗಿದ್ದು, ಇತರೆ ಯಾವುದೇ ಸಂಖ್ಯೆಯು ಕಾಣಿಸಿರುವುದಿಲ್ಲ. ಆರೋಪಿಗಳಾದ ಅಬ್ದುಲ್ ಬಶೀರ್, ಬ್ರೂಟಾನ್ ಡಿಸೋಜ ಮತ್ತು ಪರಾರಿಯಾದ ಫ್ರಾನ್ಸಿಸ್ ದೈಗೋಳಿ ಇವರುಗಳು ಕರ್ನಾಟಕ ರಾಜ್ಯದಲ್ಲಿ ಸಾರಾಯಿ ನಿಷೇಧದವಿದ್ದರೂ ಕೂಡಾ ಸಾರಾಯಿ ಸ್ಯಾಚೆಟ್‌ಗಳನ್ನು ಅಕ್ರಮವಾಗಿ ತಯಾರಿಸಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವ ಆಪಾದನೆಯನ್ನು ಆರೋಪಿಗಳಿಗೆ ತಿಳಿಸಿ, ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಸ್ಯಾಂಟೊ ಕಾರನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸ್ವಾಧೀನಕ್ಕೆ ತೆಗೆದುಕೊಂಡು ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಸ್ಥಳ ಮಹಜರನ್ನು ಸ್ಥಳದಲ್ಲಿಯೇ ಬರೆದು, ಸ್ಥಳ ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದು ಮತ್ತು

ಸ್ಥಳ ಮಹಜರಿನಲ್ಲಿ ಸ್ಥಳ ಚೆಕ್‌ಬಂದಿಯನ್ನು ನಮೂದಿಸಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32 ಮತ್ತು 34 ರ ಪ್ರಕಾರ ಅಪರಾಧ ಹಾಗೂ ಶಿಕ್ಷರ್ಹವಾಗಿರುವುದರಿಂದ, ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ: 104/2008 ದಿ:10–8–2008 ರಂತೆ ಪ್ರಕರಣವನ್ನು ನೋಂದಾಯಿಸಿ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿ ಮತ್ತು ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸ್ಯಾಂಟ್ರೊ ಕಾರನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:10–9–2008 ರಂದು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/78/ಡಿಟಿಸಿಆರ್/2008–09 ದಿ:30–9–2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸ್ಯಾಂಟ್ರೊ ಕಾರನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:30–4–2009 ರಂದು ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: ಬಿಎನ್‌ಟಿ/ಸಿಆರ್‌ಎಂ/20/2008–09 ದಿ:20–6–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ: ಇ–514–6 ದಿ:3–12–2008 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿಯ ಮದ್ಯಸಾರದ ಪ್ರಮಾಣ ಶೇ.24 ಇರುವುದಾಗಿ ಹಾಗೂ ಸಾರಾಯಿಯು ಮಾನವನ ಸೇವನೆಗೆ ಯೋಗ್ಯವಲ್ಲವೆಂದು, ಇದು ನಕಲಿ ಸಾರಾಯಿ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯೊಂದಿಗೆ ಅಬಕಾರಿ ಉಪ ಅಧೀಕ್ಷಕರು,ಬಂಟ್ವಾಳ ಉಪ ವಿಭಾಗ,ಬಂಟ್ವಾಳ ಇವರ ವರದಿ ಸಂ:95/2008–09 ದಿ:30–6–2009 ರಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಸಿ ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ಅಧೀಕ್ಷಕರು ಹಾಗೂ ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/78/ಡಿಟಿಸಿಆರ್/2008–09 ದಿ:8–7–2009 ರ ಆದೇಶದಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13–7–2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶವಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12–9–2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಹಾಗೂ ಮಾಧ್ಯಮಗಳ ಪ್ರತಿನಿಧಿಗಳ ಸಮಕ್ಷಮ ಅಬಕಾರಿ ಆಯುಕ್ತರ ಸುತ್ತೋಲೆಯನ್ನು ಅನುಸರಿಸಿ, ಮುಟ್ಟುಗೋಲು ಹಾಕಿಕೊಳ್ಳಲಾದ (ಸ್ಯಾಂಪಲ್‌ಗಳನ್ನು ಹೊರತುಪಡಿಸಿ) 240–000 ಲೀಟರ್ ಸಾರಾಯಿ ಸ್ಯಾಚೆಟ್‌ಗಳನ್ನು ದಿ:30–7–2009 ರಂದು ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ/20/2008–09 ದಿ:8–9–2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸ್ಯಾಂಟ್ರೊ ಕಾರು ಸಂ: ಕೆಎಲ್–8–ವಿ–3758 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಾರಿಗೆ ಅಧಿಕಾರಿಗಳು, ತ್ರಿಚೂರು ಡಿವಿಜನ್, ಕೇರಳ ರಾಜ್ಯ ಇವರಿಗೆ ಪತ್ರ ಬರೆಯಲಾಗಿದ್ದು, ಇದುವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲ. ಸ್ಯಾಂಟ್ರೊ ಕಾರಿನಲ್ಲಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ವಾಹನವು ಜಪ್ತಾಗಿ ಈಗಾಗಲೇ 1 ವರ್ಷ 5 ತಿಂಗಳು ಮೀರಿದ್ದರೂ ಯಾವುದೇ ವ್ಯಕ್ತಿ ಅಥವಾ ಆರೋಪಿಗಳು, ವಾಹನದ ನೋಂದಣಿ ಮಾಲೀಕರಾಗಲಿ ತಕ್ಷೀರು ದಾಖಲಿಸಿದ ಕೋಣಾಜೆ ಪೊಲೀಸ್ ಠಾಣೆ ಕಚೇರಿಯಲ್ಲಾಗಲಿ ಅಥವಾ ತನಿಖಾಧಿಕಾರಿಗಳ ಕಚೇರಿಯಲ್ಲಾಗಲಿ ವಾಹನದ ಮಾಲಿಕತ್ವದ ಬಗ್ಗೆ ಅಧಿಕೃತ ದಾಖಲಾತಿಗಳೊಂದಿಗೆ ಖುದ್ದಾಗಿ ಯಾರೂ ಕೂಡಾ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ವಾಹನಕ್ಕೆ ಯಾರಿಂದಲೂ ಬೇಡಿಕೆಯಿಲ್ಲವೆಂದು ಮನಗಂಡು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಉಪಯೋಗಿಸಿರುವುದು ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸ್ಯಾಂಟ್ರೊ ಕಾರು ಸಂ: ಕೆಎಲ್–8–ವಿ–3758 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ದಸ್ತಗಿರಿಯಾದ ಆರೋಪಿಗಳಾದ ಅಬ್ದುಲ್ ಬಶೀರ್(20 ವ), ಬಿನ್:ಅಬ್ದುಲ್ ರಹಿಮಾನ್ ವಾಸ:ಪೈವಳಿಕೆ

ನಗರ,ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಮತ್ತು ಬ್ರೂಟಾನ್ ಡಿಸೋಜ(22 ವ), ಬಿನ್: ಹೆನ್ರಿ ಡಿಸೋಜ, ಕಲಾಯಿ ಮನೆ, ವಾಸ:ಪೈವಳಿಕೆ ನಗರ,ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಇವರುಗಳಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:10–08–2008 ರಂದು ಸ್ಯಾಂಟ್ರೊ ಕಾರು ಸಂ: ಕೆಎಲ್–8–ವಿ–3758 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧವೆಸಗಲು ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಮುಖ್ಯ ತನಿಖಾಧಿಕಾರಿಯಾದ ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು,ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:14–10–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ,ತಾನು ದಿ:19–9–2008 ರಿಂದ ಇಲ್ಲಿಯವರೆಗೆ ಬಂಟ್ವಾಳ ವಲಯದ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:30–4–2009 ರಂದು ತಕ್ಷೀರಿಗೆ ಸಂಬಂಧಪಟ್ಟ ಸೊತ್ತುಗಳನ್ನು ಹಸ್ತಾಂತರ ಪಡೆದುಕೊಂಡಿದ್ದು, ಮಾದರಿ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಪ್ರಕರಣ ತನಿಖೆಯನ್ನು ಮುಂದುವರಿಸಿ ವಾಹನ ಬಿ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ತ್ರಿಚೂರು, ಕೇರಳ ಇವರಿಗೆ ದಿ:20–6–2009 ರಂದು ಪತ್ರ ಬರೆಯಲಾಗಿದ್ದು, ಸದರಿಯವರಿಂದ ಯಾವುದೇ ಬಿ ವರದಿ ಇನ್ನೂ ಬಂದಿರುವುದಿಲ್ಲ. ಪ್ರಕರಣದಲ್ಲಿ ಜಪ್ತಾದ ಸಾರಾಯಿ ಸ್ಯಾಚೆಟ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿರುತ್ತೇನೆ. ಈ ಪ್ರಾಧಿಕಾರದ ಆದೇಶದಂತೆ ಸಾರಾಯಿ ಸ್ಯಾಚೆಟ್‌ಗಳ ಮುಟ್ಟುಗೋಲು ಆದೇಶದಂತೆ ದಿ:30–7–2009 ರಂದು ನಾಶಪಡಿಸಲಾಗಿರುತ್ತದೆ. ಪ್ರಕರಣವು ದಾಖಲಾಗಿ ಈಗಾಗಲೆ ಒಂದು ವರ್ಷ ಕಳೆದಿದ್ದು, ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ತನ್ನ ವಾರಿಸುದಾರಿಕೆಯನ್ನು ನಿರೂಪಿಸಲು ವಿಫಲರಾಗಿರುವುದರಿಂದ, ಸದರಿ ವಾಹನಕ್ಕೆ ಯಾರೊಬ್ಬರ ಬೇಡಿಕೆ ಇಲ್ಲವೆಂದು ಪರಿಗಣಿಸಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿ:8–9–2009 ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತೇನೆ. ರಾಸಾಯನಿಕ ಕೆಮಿಕಲ್ ವರದಿಯನ್ನು ನಿಶಾನೆ ಪಿ–1 ಎಂದು, ದಿ:20–6–2009 ರಂದು ಸಲ್ಲಿಸಿದ ತನಿಖಾ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಮತ್ತು ದಿ:8–9–2009 ರಂದು ಸಲ್ಲಿಸಿದ ಅಂತಿಮ ತನಿಖಾ ವರದಿಯನ್ನು ನಿಶಾನೆ ಪಿ–3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:10–8–2008 ರಂದು ಜಪ್ತುಪಡಿಸಿಕೊಂಡಿರುವ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ರಲ್ಲಿ ಅಕ್ರಮವಾಗಿ 100 ಎಂ.ಎಲ್.ನ 2400 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆ ಮಾಡಲಾಗುತ್ತಿದ್ದ ಅಂಶ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ,ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಮತ್ತು ಪತ್ತೆಯಾಗದಿರುವ ಆರೋಪಿತರು ಮತ್ತು ವಾಹನದ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು ಸದರಿ ವಾಹನದಲ್ಲಿ ಅವರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಿಸಿರುವುದು ಘಟನೆಯಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ

ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43(ಸಿ)ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 2400 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11,14, 32, 34 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ನ್ನು ವಶಪಡಿಸಿಕೊಂಡು ಸುಮಾರು 1 ವರ್ಷ 5 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಕೋಣಾಜೆ ಪೊಲೀಸ್ ಠಾಣೆ ಮತ್ತು ತನಿಖಾಧಿಕಾರಿಯವರ ಕಚೇರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲಿ, ದಸ್ತಗಿರಿಯಾದ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಸಲ್ಲಿಸಿದ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ರ ನೋಂದಣಿ ಮಾಲಿಕತ್ವದ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಂದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲು ತನಿಖಾಧಿಕಾರಿಗಳು ಪ್ರಯತ್ನಿಸಲಾಗಿದ್ದು, ಇದುವರೆಗೂ ಯಾವುದೇ ವರದಿಯು ಬಂದಿರುವುದಿಲ್ಲ. ಸ್ಯಾಂಟ್ರೊ ಕಾರಿನಲ್ಲಿ ಅಕ್ರಮವಾಗಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕೇರಳ ರಾಜ್ಯಕ್ಕೆ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ

ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಗಳಾದ ಅಬ್ದುಲ್ ಬಶೀರ್(20 ವ), ಬಿನ್:ಅಬ್ದುಲ್ ರಹಿಮಾನ್ ವಾಸ:ಪೈವಳಿಕೆ ನಗರ,ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಮತ್ತು ಬ್ರೂಟಾನ್ ಡಿಸೋಜ(22 ವ), ಬಿನ್: ಹೆನ್ರಿ ಡಿಸೋಜ, ಕಲಾಯಿ ಮನೆ, ವಾಸ:ಪೈವಳಿಕೆ ನಗರ, ಪೈವಳಿಕೆ ಗ್ರಾಮ ಮತ್ತು ಅಂಚೆ, ಕಾಸರಗೋಡು, ಕೇರಳ ಇವರುಗಳಿಗೆ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ನೀಡಲಾಗಿದ್ದು, ಅಬ್ದುಲ್ ಬಶೀರ್ ಇವರಿಗೆ ನೀಡಲಾದ ನೋಟೀಸು ಸ್ವೀಕೃತಿಯಾಗಿ ಈ ಪ್ರಾಧಿಕಾರಕ್ಕೆ ಸ್ವೀಕೃತಿ ರಶೀದಿ ಬಂದಿರುತ್ತದೆ. ಆದರೆ ಇದುವರೆಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸ್ಯಾಂಟ್ರೊ ಕಾರನ್ನು ಈಗಾಗಲೇ 1 ವರ್ಷ 5 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಸಿ) ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/78/ಡಿಟಿಸಿಆರ್/2008–09, ದಿನಾಂಕ:30ನೇ ಡಿಸೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರ ತಕ್ಷೀರು ಸಂ:104/2008 ದಿ:10–08–2008 ರಲ್ಲಿ ಜಪ್ತುಪಡಿಸಿರುವ ಸ್ಯಾಂಟ್ರೊ ಕಾರು ಸಂಖ್ಯೆ: ಕೆಎಲ್–8–ವಿ–3758 ನ್ನು ನಿಯಮ 43(ಸಿ) ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:30–12–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ರಾಸಾಯನಿಕ ವರದಿ.

ನಿಶಾನೆ ಪಿ–2 : ತನಿಖಾ ವರದಿ.

ನಿಶಾನೆ ಪಿ–2A : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ–3 : ತನಿಖಾ ವರದಿ.

ನಿಶಾನೆ ಪಿ–3A : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.70

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/424/ಡಿಟಿಸಿಆರ್/2008–09, ದಿನಾಂಕ:30ನೇ ಡಿಸೆಂಬರ್, 2009

ಉಪಸ್ಥಿತರು: ನೂರ್‌ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಕೋಣಾಜೆ ಪೊಲೀಸ್ ಠಾಣೆ,
ಕೋಣಾಜೆ.

ಆರೋಪಿಗಳು:

1) ರೋಶನ್(18 ವ),
ಬಿನ್:ಮೈಕಲ್ ವೇಗಸ್,
ವಾಸ:ರೈಮಂಡ್ ಡಿಸೋಜರವರ ಮನೆಯ
ಬಳಿ, ಪಾನೇಲ ಪಜೀರು ಗ್ರಾಮ, ಬಂಟ್ವಾಳ
ತಾಲೂಕು.

ವಾಹನ ಮಾಲೀಕರು:

ಮೆಲ್ವಿನ್ ವೇಗಸ್, ಬಿನ್:ಮೈಕಲ್ ವೇಗಸ್,
ಡೋರ್ ನಂ: 3–210 , ಪಾನೇಲ ಕೆದಗೆ
ಬೈಲ್, ಪಜೀರು ಅಂಚೆ ಮತ್ತು ಗ್ರಾಮ,
ಬಂಟ್ವಾಳ ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:13–06–2009 ರಂದು ಬಂಟ್ವಾಳ ತಾಲೂಕು ಪಜೀರು ಗ್ರಾಮದ ಇನೋಳಿ ಕಡೆಯಿಂದ ಮಾಲಾರುಪದವು ಜಂಕ್ಷನ್ ಬಳಿಯಲ್ಲಿ ಅಕ್ರಮ ಕಳ್ಳಭಟ್ಟಿ ಸಾಗಾಟವಾಗುವ ಬಗ್ಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಮಂಗಳೂರು ಪಶ್ಚಿಮ ವಲಯದ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳದ ಪೊಲೀಸ್ ಉಪ ಅಧೀಕ್ಷಕರಾದ ಶ್ರೀ.ಜೆ.ಪಾಪಯ್ಯ ಇವರು ಸಿಬ್ಬಂದಿಗಳೊಂದಿಗೆ ಬೆಳಿಗ್ಗೆ ಸುಮಾರು 10–35 ಗಂಟೆ ಸಮಯಕ್ಕೆ ಇನೋಳಿ ಕಡೆಯಿಂದ ಮಾಲಾರುಪದವು ಜಂಕ್ಷನ್‌ನಿಂದ ಇನೋಳಿಗೆ ಹೋಗುವ ರಸ್ತೆಯಲ್ಲಿ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಜೀಪ್ ನಿಲ್ಲಿಸಿ ರಸ್ತೆಗಾವಲು ನಡೆಸುತ್ತಿದ್ದಾಗ, 10–45 ಗಂಟೆ ಸಮಯಕ್ಕೆ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ಚಲಾಯಿಸಿಕೊಂಡು ಬರುತ್ತಿದ್ದು, ಮೋಟಾರು ಸೈಕಲ್‌ನ ಹಿಂದುಗಡೆ ಪ್ಲಾಸ್ಟಿಕ್ ಗೋಣಿ ಚೀಲದ ಒಂದು ಕಟ್ಟನ್ನು ಕಟ್ಟಿಕೊಂಡು ಬರುತ್ತಿರುವುದನ್ನು ಕಂಡು ನಿಲ್ಲಿಸಿದಾಗ, ಆತನ ಹೆಸರು ರೋಶನ್(18 ವ), ಬಿನ್:ಮೈಕಲ್ ವೇಗಸ್, ವಾಸ:ರೈಮಂಡ್ ಡಿಸೋಜರವರ ಮನೆಯ ಬಳಿ, ಪಾನೇಲ ಪಜೀರು ಗ್ರಾಮ,

ಬಂಟ್ವಾಳ ತಾಲೂಕು ಎಂಬುವುದಾಗಿ ತಿಳಿಸಿದ್ದು, ಮೋಟಾರು ಸೈಕಲ್‌ನ ಹಿಂದುಗಡೆ ಕಟ್ಟಿದ್ದ ಗೋಣಿ ಚೀಲದ ಬಗ್ಗೆ ವಿಚಾರಿಸಲಾಗಿ, ಅದರಲ್ಲಿ 20-000 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಕೊಂಡುಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಸದರಿ ಕಳ್ಳಭಟ್ಟಿ ಸಾರಾಯಿಯನ್ನು ಗಾಡಿಗದ್ದೆಯ ಹತ್ತಿರದ ಹೊಳೆಬದಿಯಲ್ಲಿ ಸ್ಟ್ಯಾನಿ ಎಂಬವನು ಪಾವೂರು ಉಳಿಯದ ಕುದ್ರುವಿನಿಂದ ಅಕ್ರಮವಾಗಿ ತಂದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ಕ್ಯಾನ್‌ನಿಂದ ಸ್ಯಾಂಪಲ್ ಬಗ್ಗೆ ಕ್ವಾರ್ಟರ್ ಬಾಟಲ್‌ನಲ್ಲಿ ತೆಗೆದಿರಿಸಿ, ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ಅದಕ್ಕೆ ಅರಗು ಸೀಲ್ ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಯಿತು. ಅದಕ್ಕೆ ಎ1 ಎಂದು ಮತ್ತು ಕ್ಯಾನಿಗೆ ಎ ಎಂದು ಮತ್ತು ಪ್ಲಾಸ್ಟಿಕ್ ಗೋಣಿ ಚೀಲಕ್ಕೆ ಸಿ ಎಂದು ಹಾಗೂ ಅಕ್ರಮ ಸಾಗಾಟಕ್ಕೆ ಬಳಸಿದ ಮೋಟಾರು ಸೈಲಕನ್ನು ಡಿ ಎಂದು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಯಿತು. ಗೋಣಿ ಚೀಲದ ಹಗ್ಗಕ್ಕೆ ಬಿ ಎಂದು ಚೀಟಿ ಅಂಟಿಸಲಾಯಿತು. ಅಕ್ರಮ ಸಾಗಾಟಕ್ಕೆ ಬಳಸಿದ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ವೈ-7126 ಬಜಾಜ್ ಕಂಪೆನಿಗೆ ಸೇರಿದ ಪ್ಲಾಟಿನಂ ಬೈಕ್ ಆಗಿದ್ದು, ಇದರ ಚಾಸೀಸ್ ನಂಬರು ಮತ್ತು ಇಂಜೀನ್ ನಂಬರನ್ನು ನಮೂದಿಸಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32, 34 ರ ಪ್ರಕಾರ ಅಪರಾಧವೆಂದು ಆರೋಪಿಗೆ ತಿಳಿಸಿ, ಆರೋಪಿಯನ್ನು ಹಾಗೂ ಕಳ್ಳಭಟ್ಟಿ ಮತ್ತು ಸಾಗಾಟಕ್ಕೆ ಬಳಸಿದ ಮೋಟಾರು ಸೈಕಲನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ದಿನಾಂಕ ಮತ್ತು ಸಮಯವನ್ನು ನಮೂದಿಸಿರುತ್ತಾರೆ. ನಂತರ ಪ್ರಕರಣದ ಸೊತ್ತುಗಳನ್ನು ಹಾಗೂ ದಸ್ತಗಿರಿಯಾದ ಆರೋಪಿಯನ್ನು ಹಾಗೂ ದಾಖಲಾತಿಗಳೊಂದಿಗೆ ಮುಂದಿನ ತನಿಖೆಯ ಬಗ್ಗೆ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರಿಗೆ ಹಸ್ತಾಂತರಿಸಿರುತ್ತಾರೆ. ಹಸ್ತಾಂತರ ಪಡೆದ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಿನಾಂಕ:13-6-2009 ರಂದು ಆರೋಪಿಯ ವಿರುದ್ಧ ತಕ್ಷೀರು ಸಂಖ್ಯೆ: 70/2009 ರಂತೆ ಪ್ರಕರಣವನ್ನು ನೋಂದಾಯಿಸಿ, ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಪ್ರಥಮ ಮಾಹಿತಿ ವರದಿ, ಮಹಜರು ಪ್ರತಿ ಹಾಗೂ ಸೊತ್ತುಗಳ ಪಟ್ಟಿ ಮತ್ತು ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ ಮತ್ತು ಮೋಟಾರು ಸೈಕಲನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:14-6-2009 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/424/ಡಿಟಿಸಿಆರ್/2008-09 ದಿ:24-6-2009 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು ಬಜಾಜ್ ಪ್ಲಾಟಿನಂ ಮೋಟಾರು ಸೈಕಲನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:28-7-2009 ರಂದು ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: ಬಿಎನ್‌ಟಿ/ಸಿಆರ್‌ಎಂ/2/2008-09 ದಿ:28-7-2009 ಮತ್ತು ದಿ:14-8-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರ ವರದಿ ಸಂಖ್ಯೆ: ಇ-269-1 ದಿ:5-8-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮದ್ಯಸಾರದ ಪ್ರಮಾಣ ಶೇ.24 ಇರುವುದಾಗಿ ಹಾಗೂ ಕಳ್ಳಭಟ್ಟಿ ಸಾರಾಯಿಯು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/424/ಡಿಟಿಸಿಆರ್/2008-09 ದಿ:8-12-2009 ರ ಆದೇಶದಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರದ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂ: ಬಿಎನ್‌ಟಿ/ಸಿಆರ್‌ಎಂ/2/2008-09 ದಿ:14-8-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ವೈ-7126 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ಪಡೆಯಲಾಗಿದ್ದು, ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್, ಬಿನ್:ಮೈಕಲ್ ವೇಗಸ್, ಡೋರ್ ನಂ: 3-210, ಪಾನೇಲ ಕೆದಗೆಬೈಲ್, ಪಜೀರು ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್, ಬಿನ್:ಮೈಕಲ್ ವೇಗಸ್, ಡೋರ್ ನಂ: 3–210, ಪಾನೇಲ ಕೆದಗೆಬೈಲ್, ಪಜೀರು ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಮತ್ತು ದಸ್ತಗಿರಿಯಾದ ಆರೋಪಿ ರೋಶನ್ (18 ವ),ಬಿನ್:ಮೈಕಲ್ ವೇಗಸ್, ವಾಸ:ರೈಮಂಡ್ ಡಿಸೋಜರವರ ಮನೆಯ ಬಳಿ, ಪಾನೇಲ ಪಜೀರು ಗ್ರಾಮ, ಬಂಟ್ವಾಳ ತಾಲೂಕು ಮತ್ತು ಫೈನಾನ್ಸಿಯರಾದ ಬಂಟ್ವಾಳ ವರ್ತಕರ ವಿವಿಧೋದ್ದೇಶ ಸಹಕಾರಿ ಸಂಘ, ಕೈಕಂಬ, ಬಿ.ಸಿ.ರೋಡ್, ಬಂಟ್ವಾಳ ಇವರುಗಳಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(B) ರನ್ವಯ ಕಾರಣ ಕೇಳಿ ನೋಟೀಸುಗಳನ್ನು ದಿನಾಂಕ: 19–9–2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳು ಸ್ವೀಕೃತಿಯಾಗಿ, ಸ್ವೀಕೃತಿ ರಶೀದಿ ಈ ಪ್ರಾಧಿಕಾರಕ್ಕೆ ಬಂದಿರುತ್ತದೆ.

ಈ ಪ್ರಾಧಿಕಾರವು ನೀಡಿರುವ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ವಾಹನದ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್,ಬಿನ್:ಮೈಕಲ್ ವೇಗಸ್, ಡೋರ್ ನಂ: 3–210, ಪಾನೇಲ ಕೆದಗೆಬೈಲ್, ಪಜೀರು ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಇವರು ತನ್ನ ವಕೀಲರ ಮುಖಾಂತರ ದಿ:9–10–2009 ರಂದು ಉತ್ತರವನ್ನು ಸಲ್ಲಿಸುತ್ತಾ, ಸದರಿ ಉತ್ತರದಲ್ಲಿ ವಾಹನವು ಕಳ್ಳಭಟ್ಟಿ ಸಾರಾಯಿ ಸಾಗಾಟಕ್ಕೆ ಉಪಯೋಗಿಸಿಲ್ಲ. ವಾಹನವನ್ನು ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ಸದ್ರಿ ವಾಹನದ ಹೈಪೋತಿಕೇಶನ್ ಹೊಂದಿರುವ ಬಂಟ್ವಾಳ ವರ್ತಕರ ವಿವಿಧೋದ್ದೇಶ ಸಹಕಾರಿ ಸಂಘ, ಕೈಕಂಬ, ಬಿ.ಸಿ.ರೋಡ್, ಬಂಟ್ವಾಳ ಇವರಿಗೆ ಕೂಡಾ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(B) ರನ್ವಯ ಕಾರಣ ಕೇಳಿ ನೋಟೀಸು ನೀಡಲಾಗಿದ್ದು, ಸದರಿ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಈ ಪ್ರಾಧಿಕಾರದ ಕಾರಣ ಕೇಳಿ ನೋಟೀಸಿಗೆ ದಿ:5–10–2009 ರಂದು ಉತ್ತರಿಸಿರುತ್ತಾರೆ. ಸದರಿ ಉತ್ತರದಲ್ಲಿ ಅವರ ಸಂಸ್ಥೆಯಿಂದ ಆರ್.ಸಿ. ಮಾಲೀಕರಿಗೆ ವಾಹನದ ಅಡವಿನ ಆಧಾರದಲ್ಲಿ ರೂ.30,500/– ಬಡ್ಡಿ ಕಂತು ಸಾಲ ನೀಡಿದ್ದು, ಅವರ ಸಂಸ್ಥೆಗೆ ಸದ್ಯ ರೂ.28,177/– ಮಾತ್ರ ಪಾವತಿಗೆ ಬಾಕಿಯಿದ್ದು, ಸದರಿ ವಾಹನವನ್ನು ಮೇಲಿನ ಅಪರಾಧಕ್ಕೆ ಸಂಬಂಧಿಸಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದಾಗಿ ವಿನಂತಿಸಿರುತ್ತಾರೆ. ಆದರೆ ಪ್ರಕರಣದ ವಿದ್ಯಮಾನಗಳಂತೆ ಆರೋಪಿ ಎಸಗಿರುವ ಅಪರಾಧ ದಿ:13–6–2009 ರಂದು ನಡೆದಿದ್ದು, ಸಂಸ್ಥೆಯವರು ಸಾಲ ನೀಡಿದ ನಂತರದಲ್ಲಿ ನಡೆದಿರುವುದರಿಂದ, ವಾಹನದ ಅಡವು ಹೊಂದಿರುವ ಸಂಸ್ಥೆಯ ಅಹವಾಲನ್ನು ಪರಿಗಣಿಸಲು ಮುಟ್ಟುಗೋಲು ನಿಯಮ 43(ಎ) ರಡಿ ಅವಕಾಶವಿಲ್ಲದಿರುವ ಕಾರಣ ಅವರ ಮನವಿ ಹಾಗೂ ಕಾರಣ ಕೇಳಿ ನೋಟೀಸಿಗೆ ಒಪ್ಪಿಸಿರುವ ಉತ್ತರ ಸಮಂಜಸವಾಗದಿರುವ ಕಾರಣ ಇದನ್ನು ಕೈಬಿಡಲಾಗಿದೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ನೋಂದಣಿ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್, ಬಿನ್:ಮೈಕಲ್ ವೇಗಸ್, ಡೋರ್ ನಂ: 3–210, ಪಾನೇಲ ಕೆದಗೆಬೈಲ್, ಪಜೀರು ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಹಾಗೂ ದಸ್ತಗಿರಿಯಾದ ಆರೋಪಿ ರೋಶನ್(18 ವ),ಬಿನ್:ಮೈಕಲ್ ವೇಗಸ್, ವಾಸ:ರೈಮಂಡ್ ಡಿಸೋಜರವರ ಮನೆಯ ಬಳಿ, ಪಾನೇಲ ಪಜೀರು ಗ್ರಾಮ, ಬಂಟ್ವಾಳ ತಾಲೂಕು ಮತ್ತು ಫೈನಾನ್ಸಿಯರಾದ ಬಂಟ್ವಾಳ ವರ್ತಕರ ವಿವಿಧೋದ್ದೇಶ ಸಹಕಾರಿ ಸಂಘ, ಕೈಕಂಬ, ಬಿ.ಸಿ.ರೋಡ್,ಬಂಟ್ವಾಳ ಇವರುಗಳಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿ, ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:13–6–2009 ರಂದು ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧಕ್ಕೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ?.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣವನ್ನು ದಾಖಲಿಸಿದ ಶ್ರೀಅರುಣ್ ಕುಮಾರ್, ಹೆಚ್.ಸಿ. ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಿ:10–11–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ,ತಾನು ಕಳೆದ ಒಂದು ವರ್ಷ 9 ತಿಂಗಳಿನಿಂದ ಕೋಣಾಜೆ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತಾನು ದಿ:16–6–2009 ರಂದು ಠಾಣಾ ಹಗಲು ಪ್ರಭಾರದಲ್ಲಿದ್ದಾಗ, ಮಧ್ಯಾಹ್ನ ಸುಮಾರು 2–00 ಗಂಟೆ ಸಮಯಕ್ಕೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳದ ಪೊಲೀಸ್ ಉಪ ಅಧೀಕ್ಷಕರಾದ ಶ್ರೀ.ಜೆ.ಪಾಪಯ್ಯರವರು ತನ್ನ ಸಿಬ್ಬಂದಿಯವರೊಂದಿಗೆ ಠಾಣೆಗೆ ಬಂದು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನು ಸ್ವೀಕರಿಸಿಕೊಂಡು ತಮ್ಮ ಠಾಣಾ ತಕ್ಷೀರು ಸಂಖ್ಯೆ: 70/2009 ನ್ನು ಕಲಂ 32, 34 ರಂತೆ ಕರ್ನಾಟಕ ಅಬಕಾರಿ ಕಾಯಿದೆಯಡಿ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಿರುತ್ತೇನೆ. ತಾನು ಸ್ವೀಕರಿಸಿದ ವರದಿಯನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ತಾನು ತಯಾರಿಸಿದ ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಸದರಿ ದಿವಸದಂದು ಹಾಜರುಪಡಿಸಿದ ಆರೋಪಿ ಹಾಗೂ ಸೊತ್ತುಗಳನ್ನು ಕೂಡಾ ತಮ್ಮ ಸಮಕ್ಷಮ ಹಾಜರುಪಡಿಸಿದ್ದು, ತಯಾರಿಸಿದ ಮೂಲ ದಾಖಲಾತಿಗಳನ್ನು ಹಸ್ತಾಂತರಿಸಿರುತ್ತಾರೆ. ಸ್ವೀಕರಿಸಿದ ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ಸ್ವಾಧೀನಪಡಿಸಿದ ಸೊತ್ತುಗಳ ಪೈಕಿ ಕಳ್ಳಭಟ್ಟಿ ಸಾರಾಯಿ ಹಾಗೂ ಅಕ್ರಮ ಸಾಗಾಟಕ್ಕೆ ಬಳಸಿದ ಮೋಟಾರು ಸೈಕಲನ್ನು ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರ ನೀಡಿರುತ್ತೇನೆ. ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ರಿಮಾಂಡ್ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣ ದಾಖಲಿಸಿದ ಮಹಜರು ಸಾಕ್ಷಿದಾರರಾದ ಶ್ರೀ.ಜೆ.ಪಾಪಯ್ಯ, ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಮಂಗಳೂರು ಇವರು ದಿ:8–12–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:21–4–2008 ರಿಂದ ಮಂಗಳೂರು ವಲಯದ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳದ ಉಪ ಅಧೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತಾನು ದಿ:13–6–2009 ರಂದು ತನ್ನ ಸಿಬ್ಬಂದಿ ಸಮೇತ ಬೆಳಿಗ್ಗೆ 10–30 ಗಂಟೆ ಸಮಯಕ್ಕೆ ಇನೋಳಿ ಮಾಲಾರು ಪಡ್ಪುವಿನಿಂದ ಇನೋಳಿ ರಸ್ತೆಯಲ್ಲಿ ಮಾಲಾರು ಪಡ್ಪು ಕಡೆಗೆ ಬಂದು ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ಬರುತ್ತಿರುವುದನ್ನು ನೋಡಿ ಬಂದ ಮಾಹಿತಿ ಮೇರೆಗೆ ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ, ಸದರಿ ಮೋಟಾರು ಸೈಕಲ್‌ನ ಹಿಂಬದಿಯ ಸೀಟಿನಲ್ಲಿ ಒಂದು ಪ್ಲಾಸ್ಟಿಕ್ ಗೋಣಿ ಚೀಲದ ಕಟ್ಟು ಇದ್ದು, ಕಟ್ಟಿನ ಬಗ್ಗೆ ವಿಚಾರಿಸಿದಾಗ, ಅದರಲ್ಲಿ 20–000 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡಲು ಸಾಗಾಟ ಮಾಡಿರುವುದೆಂದು ತಿಳಿಸಿ, ಈ ಬಗ್ಗೆ ಪಂಚರ ಮುಖೇನ ಮಹಜರು ಜರುಗಿಸಿ,ಕ್ಯಾನ್‌ನಲ್ಲಿ ತುಂಬಿಸಿಟ್ಟ 20–000 ಲೀಟರ್ ಕಳ್ಳಭಟ್ಟಿ ಸಾರಾಯಿಯಿಂದ 180 ಎಂ.ಎಲ್.ನ ಬಾಟಲ್‌ಗೆ ಕಳ್ಳಭಟ್ಟಿ ಸಾರಾಯಿ ತುಂಬಿಸಿ ಸ್ಯಾಂಪಲ್‌ಗಾಗಿ ಪ್ರತ್ಯೇಕವಾಗಿ ತೆಗೆದು, ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ಮೊಹರು ಕ್ರಮ ಜರುಗಿಸಿ ಕ್ಯಾನ್‌ಗೆ ಎ ಎಂದು, ಸ್ಯಾಂಪಲ್ ಬಾಟಲ್‌ಗೆ ಎ1 ಎಂದು ಗುರುತಿನ ಚೀಟಿ ಅಂಟಿಸಲಾಯಿತು. ಎಲ್ಲಾ ಸೊತ್ತುಗಳನ್ನು ಪಂಚರ ಸಮಕ್ಷಮ ಸ್ವಾಧೀನಪಡಿಸಿಕೊಂಡು ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರನ್ನು ನಿಶಾನೆ ಪಿ–3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3A ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 3

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:23–12–2009 ರಂದು ಈ ಪ್ರಾಧಿಕಾರದಲ್ಲಿ ಸಾಕ್ಷಿ ನುಡಿದಿರುತ್ತಾರೆ. ತಾನು ದಿ:19–9–2008 ರಿಂದ ಇಲ್ಲಿಯವರೆಗೆ ಬಂಟ್ವಾಳ ವಲಯ ಕಚೇರಿಯ ಅಬಕಾರಿ ನಿರೀಕ್ಷಕರಾಗಿದ್ದು, ತಕ್ಷೀರಿಗೆ ಸಂಬಂಧಪಟ್ಟ ಸೊತ್ತುಗಳನ್ನು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರಿಂದ ದಿ:14–8–2009 ರಂದು ಪಡೆಯಲಾಗಿದ್ದು, ತಕ್ಷೀರಿಗೆ ಸಂಬಂಧಪಟ್ಟ ಪೊಲೀಸ್ ಉಪ ಅಧೀಕ್ಷಕರು, ಪಣಂಬೂರು ಉಪ ವಿಭಾಗ, ಪಣಂಬೂರು ಇವರ ಕಚೇರಿಯಿಂದ ನೀಡಿದ ಕೆಮಿಕಲ್ ವರದಿ ಸಂಖ್ಯೆ: ಇ–269–1 ದಿ:5–8–2009 ರ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದಿರುತ್ತೇನೆ. ಸದರಿ ವರದಿಯನ್ನು

ನಿಶಾನೆ ಪಿ–4 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ರ ಬಿ ಎಕ್ಸ್‌ಟ್ರ್ಯಾಕ್ಟ್‌ನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಂದ ಪಡೆಯಲಾಗಿದ್ದು, ಸದರಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಸದರಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ತನಿಖೆಯನ್ನು ಮುಂದುವರಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ ಹಾಗೂ ಮೋಟಾರು ಸೈಕಲನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ದಿನಾಂಕ: 14–8–2009 ರಂದು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–6ಎ ಎಂದು ಗುರುತಿಸಲಾಯಿತು. ವಾಹನದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರು ವಾಹನದ ಬಿಡುಗಡೆಗಾಗಿ ಯಾರೂ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಸಾಗಾಟದಲ್ಲಿ ಭಾಗಿಯಾದ ಆರೋಪಿಗಳು ಸಹಾ ತಮ್ಮ ಕಚೇರಿಯ ಮುಂದೆ ಹಾಜರಾಗಿ ಯಾವುದೆ ವ್ಯಕ್ತಿಯು ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ಹಾಜರಾಗಿರುವುದಿಲ್ಲ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ರಲ್ಲಿ ಅಕ್ರಮವಾಗಿ 20–000 ಲೀಟರ್ ಕಳ್ಳಭಟ್ಟಿ ಸಾರಾಯಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ದಸ್ತಗಿರಿಯಾದ ಆರೋಪಿ ಶ್ರೀ.ರೋಶನ್, ಬಿನ್: ಮೈಕಲ್ ವೇಗಸ್, ವಾಸ: ರೈಮಂಡ್ ಡಿಸೋಜರವರ ಮನೆ, ಪಾಣೆಲಪಜೀರ್ ಗ್ರಾಮ, ಬಂಟ್ವಾಳ ತಾಲೂಕು ಇವನು ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್ ಇವನ ತಮ್ಮನಾಗಿರುವ ಬಗ್ಗೆ ತನಿಖೆಯಿಂದ ದೃಢಪಟ್ಟಿರುವುದರಿಂದ, ವಾಹನದ ಮಾಲೀಕರು ಕೂಡಾ ಈ ಅಕ್ರಮ ದಂಧೆಯಲ್ಲಿ ಭಾಗಿಯಾಗಿರುವ ಬಗ್ಗೆ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಸೈಕಲನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವಿನಂತಿಸಿಕೊಳ್ಳುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:13–6–2009 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ:ಕೆಎ–19–ವೈ–7126 ರಲ್ಲಿ ಅಕ್ರಮವಾಗಿ 20–000 ಲೀಟರ್ ಕಳ್ಳಭಟ್ಟಿ ಸಾರಾಯಿ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ,ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದರೂ ನಂತರ ಅವರು ಖುದ್ದಾಗಿ ಹಾಜರಾತಿ ನೋಟೀಸಿಗೆ ಪ್ರಕರಣದ ಯಾವುದೇ ಸಾಕ್ಷಿದಾರರ ಪಾಟೀ ಸವಾಲು ಮತ್ತು ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣಕ್ಕೆ ಮತ್ತು ದಸ್ತಗಿರಿಯಾದ ಆರೋಪಿ ವಾಹನದ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್ ಇವರ ತಮ್ಮನಾಗಿರುವುದರಿಂದ, ವಾಹನ ಮಾಲೀಕರ ತಿಳುವಳಿಕೆಯಿಂದಲೇ ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಿಸಲು ಬಳಸಿರುವುದು ಸಾಕ್ಷಿ ಹೇಳಿಕೆಗಳಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಪ್ರಕರಣದಲ್ಲಿ ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಮಂಗಳೂರು ಮತ್ತು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿ ಅಕ್ರಮವಾಗಿ 20–000 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಕಳ್ಳಭಟ್ಟಿ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ರ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38(ಎ) ರ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ನ್ನು ವಶಪಡಿಸಿಕೊಂಡು ಸುಮಾರು 6 ತಿಂಗಳು ಕಳೆದಿದ್ದು, ವಾಹನದ ನೋಂದಣಿ ಮಾಲೀಕರಾದ ಮೆಲ್ವಿನ್ ವೇಗಸ್ ಇವರು ಈ ಪ್ರಾಧಿಕಾರದಿಂದ ನೀಡಿದ ಕಾರಣ ಕೇಳಿ ನೋಟೀಸಿಗೆ ಅನುಸಾರ ಉತ್ತರವನ್ನು ದಿ:9–10–2009 ರಂದು ತಮ್ಮ ವಕೀಲರ ಮೂಲಕ ನೀಡಿದ್ದು, ತದನಂತರ ಪ್ರಕರಣದ ಯಾವುದೇ ಹಾಜರಾತಿ ನೋಟೀಸಿಗೆ ಖುದ್ದಾಗಿ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಹಾಗೂ ಆರೋಪಿಯಾಗಲಿ ಹಾಜರಾಗಿ ಈ ಪ್ರಾಧಿಕಾರವು ನಡೆಸಿದ ಸಾಕ್ಷಿದಾರರ ಹೇಳಿಕೆಗಳ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ಯಾವುದೇ ರಕ್ಷಣಾ ಸಾಕ್ಷಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಯದ ಅಬಕಾರಿ ನಿರೀಕ್ಷಕರ ವರದಿಯಲ್ಲಿ ಸಲ್ಲಿಸಿರುವ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕ ಶ್ರೀ.ಮೆಲ್ವಿನ್ ವೇಗಸ್ ಆಗಿದ್ದು, ಈತನ ತಮ್ಮನೇ ಪ್ರಕರಣದ ಆರೋಪಿಯಾಗಿದ್ದು, ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನಿಖಾಧಿಕಾರಿಯವರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನದ ನೋಂದಣಿ ಮಾಲೀಕರಾದ ಶ್ರೀ.ಮೆಲ್ವಿನ್ ವೇಗಸ್ ಮತ್ತು ದಸ್ತಗಿರಿಯಾದ ಆರೋಪಿ ರೋಶನ್ ಮತ್ತು ಫೈನಾನ್ಸಿಯರಾದ ವರ್ತಕರ ವಿವಿಧೋದ್ದೇಶ ಸಹಕಾರಿ ಸಂಘ ನಿಯಮಿತ, ಬಂಟ್ವಾಳ ಇವರುಗಳಿಗೆ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ನೀಡಲಾಗಿದ್ದು, ಸದರಿ ನೋಟೀಸುಗಳು ಸ್ವೀಕೃತಿಯಾಗಿದ್ದರೂ ಇದುವರೆಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ವಿವರಣೆಯನ್ನು ಮತ್ತು ಸಾಕ್ಷಿದಾರರ ಪಾಟೀ ಸವಾಲು ಹಾಗೂ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ.

ಆದುದರಿಂದ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ನ್ನು ಈಗಾಗಲೇ 6 ತಿಂಗಳು ಕಳೆದಿದ್ದು, ಇದು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/424/ಡಿಟಿಸಿಆರ್/2008–09, ದಿನಾಂಕ:30ನೇ ಡಿಸೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಮಂಗಳೂರು ಮತ್ತು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರ ತಕ್ಷೀರು ಸಂ: 70/2009 ದಿ:13–6–2009 ರಲ್ಲಿ ಜಪ್ತುಪಡಿಸಿರುವ ಬಜಾಜ್ ಪ್ಲಾಟಿನಂ ಮೋಟಾರು ಸೈಕಲ್ ಸಂಖ್ಯೆ: ಕೆಎ–19–ವೈ–7126 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:30–12–2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀಅರುಣ್ ಕುಮಾರ್, ಹೆಚ್.ಸಿ. ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ.

ಪ್ರಾ.ಸಾ–2: ಶ್ರೀ.ಜೆ.ಪಾಪಯ್ಯ, ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಮಂಗಳೂರು.

ಪ್ರಾ.ಸಾ–3: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ಪ್ರಾ.ಸಾ–1 ರವರು ಸ್ವೀಕರಿಸಿದ ವರದಿ.
ನಿಶಾನೆ ಪಿ–1A: ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ.
ನಿಶಾನೆ ಪಿ–2A : ಅದರಲ್ಲಿರುವ ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–3 : ಮಹಜರು ವರದಿ.
ನಿಶಾನೆ ಪಿ–3A : ಅದರಲ್ಲಿರುವ ಪ್ರಾ.ಸಾ–2ರವರ ಸಹಿ.
ನಿಶಾನೆ ಪಿ–4 : ಕೆಮಿಕಲ್ ವರದಿ.
ನಿಶಾನೆ ಪಿ–5 : ಬಿ ಎಕ್ಸ್‌ಟ್ರ್ಯಾಕ್ಟ್ ವರದಿ.
ನಿಶಾನೆ ಪಿ–6 : ಪ್ರಾ.ಸಾ–3ರವರ ತನಿಖಾ ವರದಿ.
ನಿಶಾನೆ ಪಿ–6A : ಅದರಲ್ಲಿರುವ ಪ್ರಾ.ಸಾ–3ರವರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.71

ಮಾನ್ಯ 5ನೇ ಎ.ಸಿ.ಎಮ್.ಎಮ್. ನ್ಯಾಯಾಲಯ, ಬೆಂಗಳೂರು ನಗರ

ಈ ಕೆಳಕಂಡ ವಾಹನಗಳ ವಾರಸುದಾರರನ್ನು ಪತ್ತೆ ಮಾಡುವುದಕ್ಕಾಗಿ ಬೆಂಗಳೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸುತ್ತೋಲೆಯನ್ನು ಕಳುಹಿಸಿದ್ದು ವಾರಸುದಾರರು ಪತ್ತೆಯಾಗಿರುವುದಿಲ್ಲ. ಸದರಿ ವಾಹನಗಳನ್ನು ಶೀಘ್ರ ವಿಲೇವಾರಿ ಮಾಡದಿದ್ದಲ್ಲಿ ಇವುಗಳ ಮೌಲ್ಯವು ದಿನಗಳದಂತೆ ಕಡಿಮೆಯಾಗುವುದರಿಂದ ಘನ ನ್ಯಾಯಾಲಯದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಸದರಿ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಸಾರ್ವಜನಿಕ ಬಹಿರಂಗ ಹರಾಜು ಮಾಡಿ ಹಣವನ್ನು ಸರ್ಕಾರಿ ಖಜಾನೆಗೆ ಪಾವತಿ ಮಾಡಲು ಈ ಬಗ್ಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ಪಡಿಸಲು ಆದೇಶ ನೀಡಬೇಕೆಂದು ಕೋರಿಕೊಳ್ಳಲಾಗಿದೆ.

Sl. No.	CR.No.	PF. No.	Vehicle Type	Reg No.	Eng No.	Chasis No.
1.	333/06 U/S 379 I.P.C.	128/07	Tata Indica Car	TN-22-AP-5910	-	-
2.	363/06 U/S 399, 402 I.P.C.	148/06 ITEM No.03	Maruthi Van	KL-4-C-8228	-	-
3.	363/06 U/S 399, 402, I.P.C.	150/06	Opel Car	KA-19-N-2821	7B0001649	MA6NSBF 191H206144
4.	363/06 U/S 399, 402, I.P.C.	161/06	Lancer	KA-34-M-6014	-	-
5.	363/06 U/S 399, 402, I.P.C.	164/06	Tata Indica Car	KL-11-L-7718	4751D101 KAZP43406	600131KYZP 43051
6.	363/06 U/S 399, 402, I.P.C.	170/06	Maruthi Zen	KA-12-N-8214	G10BBN15 1167	MA3EYD32 300586613
7.	363/06 U/S 399, 402, I.P.C.	172/06	1. Tavera Car 2. Tavera Car	- -	3AE0921145	MARABRJ 765 A889382
8.	363/06 U/S 399, 402, I.P.C.	177/06	Maruthi Car	KA-30-P-4777	E8CV523 193	19M3G052H 22
9.	363/06 U/S 399, 402, I.P.C.	178/06	Maruthi Wagner	-	F10DN39 79828	MAD3EED81 S19587

Sl. No.	CR.No.	PF. No.	Vehicle Type	Reg No.	Eng No.	Chasis No.
10.	363/06 U/S 399, 402, I.P.C.	154/06	Toyota Qualise	KA-09-B-3060	ZL9819220	LF5010732
11.	541/06 U/S 399/402, I.P.C.	231/06	1. Maruthi 800 2. Maruthi 800	CKD-2267 CND-8899	- -	- -
12.	541/06 U/S 399/402, I.P.C.	234/06	Tata Indica	KA-13-P-1835	-	-
13.	465/06 U/S 379, I.P.C.	158/07	Tata Indica	KL-01-N-5671	4751DI03LZP	600137LUZP E 3267
14.	465/06 U/S 379, I.P.C.	161/07	Ford Ikon	TN-01-S-8794	96WT7F0960B	-

5ನೇ ಎ.ಸಿ.ಎಮ್.ಎಮ್. ನ್ಯಾಯಾಲಯ,

ಪಿ.ಆರ್.224 ಬೆಂಗಳೂರು ನಗರ.

ಮಾನ್ಯ 3ನೇ ಎ.ಸಿ.ಎಂ.ಎಂ. ನ್ಯಾಯಾಲಯದ ನ್ಯಾಯಾಧೀಶರ ಸನ್ನಿದಾನಕ್ಕೆ, ಬೆಂಗಳೂರು ನಗರ

ದಿನಾಂಕ:26ನೇ ನವೆಂಬರ್, 2009

ವಿಷಯ: ವಾರಸುದಾರರು ಇಲ್ಲದೆ ಅಮಾನತುಪಡಿಸಿಕೊಂಡಿರುವ ದ್ವಿಚಕ್ರವಾಹನಗಳನ್ನು ಪ್ರಕ್ರಿಯೆ ಮುಖಾಂತರ ಬಹಿರಂಗ ಹರಾಜು ಮಾಡಿ ಹಣವನ್ನು ಸರ್ಕಾರಕ್ಕೆ ಪಾವತಿಸಲು ಅನುಮತಿಗಾಗಿ ಮನವಿ.

ಈ ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯದಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಕಾಟನ್‌ಪೇಟೆ ಪೊಲೀಸ್ ಠಾಣಾ ಸರಹದ್ದಿನಲ್ಲಿ ಆಗಾಗ್ಗೆ ವಾರಸುದಾರರು ಇಲ್ಲದೆ ದೊರೆತಿದ್ದ 22 ಹಳೆಯ ದ್ವಿಚಕ್ರ ವಾಹನಗಳನ್ನು ಅಮಾನತುಪಡಿಸಿಕೊಂಡಿದ್ದು ಇವುಗಳ ವಾರಸುದಾರರ ಪತ್ತೆಗಾಗಿ ವಾಹನಗಳ ವಿವರಗಳನ್ನು ನಗರದ ಎಲ್ಲಾ ನಿಯಂತ್ರಣ ಕೊಣೆಗಳಿಗೂ ಎಸ್.ಸಿ.ಆರ್.ಬಿ. ಕಛೇರಿ ಮತ್ತು ಸಿ.ಸಿ.ಆರ್.ಬಿ. ಕಛೇರಿಗೆ ಕಳುಹಿಸಿದ್ದು ಮತ್ತು ವಾಹನದ ಬಗ್ಗೆ ಬೆಂಗಳೂರಿನ ಎಲ್ಲಾ ಠಾಣೆಗಳಿಗೂ ಸುತ್ತೋಲೆಗಳನ್ನು ಕಳುಹಿಸಿದ್ದು ಒಟ್ಟು 22 ವಾಹನಗಳ ಪೈಕಿ 9 ವಾಹನಗಳ ಮಾಲೀಕರು ಪತ್ತೆಯಾಗಿದ್ದು ಉಳಿದ 13 ವಾಹನಗಳ ಬಗ್ಗೆ ಯಾವುದೇ ಮಾಹಿತಿಯು ದೊರೆಯದೆ ಇದ್ದು ಯಾವುದೆ ಠಾಣೆಗಳಿಗೆ ಬೇಕಿಲ್ಲವಾಗಿರುತ್ತವೆ.

ಈ ಕೆಳಕಂಡ ಹಳೆಯ ದ್ವಿಚಕ್ರವಾಹನಗಳ ಮಾಲೀಕರನ್ನು ಪತ್ತೆಮಾಡಲು ಮಾಡಿದ ಎಲ್ಲಾ ಪ್ರಮಾಣಿಕ ಪ್ರಯತ್ನದಿಂದಲೂ ಮಾಲೀಕರು ಪತ್ತೆಯಾಗಿರುವುದಿಲ್ಲ. ಸದರಿ ಹಳೆಯ ದ್ವಿಚಕ್ರವಾಹನಗಳನ್ನು ಠಾಣೆಯ ಆವರಣದಲ್ಲಿ ನಿಲ್ಲಿಸಿಕೊಳ್ಳಲು ಸರಿಯಾದ ಸ್ಥಳ ಇಲ್ಲದೆ ಇದ್ದು ವಾಹನಗಳು ಮಳೆಯಲ್ಲಿ ನೆನೆದು ಬಿಸಿಲಿನಲ್ಲಿ ಒಣಗಿ ತುಕ್ಕುಹಿಡಿದು ಹಾಳಾಗುವ ಸಂಭವವಿರುತ್ತದೆ.

ಆದ್ದರಿಂದ ಈ ಕೆಳಗೆ ನಮೂದಿಸಿರುವ ವಿವರಗಳ ಹಳೆಯ ದ್ವಿಚಕ್ರ ವಾಹನಗಳ ವಿವರಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ ಮಾಡಿಸಿ ಪ್ರಕ್ರಿಯೆ ಮುಖಾಂತರ ಹಳೆಯ ದ್ವಿಚಕ್ರವಾಹನಗಳನ್ನು ಬಹಿರಂಗ ಹರಾಜು ಮಾಡಿ ಹರಾಜಿನಿಂದ ಬಂದ ಹಣವನ್ನು ಸರ್ಕಾರಕ್ಕೆ ಜಮ ಮಾಡಲು ಅನುಮತಿಯನ್ನು ನೀಡಬೇಕೆಂದು ಈ ಮೂಲಕ ಮಾನ್ಯ ನ್ಯಾಯಾಲಯದಲ್ಲಿ ನಿವೇದಿಸಿದೆ.

ಕ್ರ. ಸಂ.	ಸಿಮೀಸ್ ನಂ.	ಪಿ.ಎಫ್. ನಂ.	ವಾಹನದ ಹೆಸರು & ನಂ.	ಚಾರ್ಸಿ ನಂ	ಇಂಜಿನ್ ನಂ
1.	88/09	38/09	ಕೈನೆಟಿಕ್ ಹೊಂಡಾ ಕೆಎ–01–ಆರ್–9071	NI/SF089430	NIE/SF085376
2.	89/09	40/09	ಸುಜುಕಿ ಸಮುರಾಯ್ ಕೆಎ–01–ಇಬಿ–4189	7201F126858	7201M191743
3.	100/09	47/09	ಬಜಾಜ್ ಸ್ಕೂಟರ್ ಕೆಎ–04–ಜೆ–4925	FO5DM227586	5DM201837
4.	100/09	47/09	ಟಿ.ವಿ.ಎಸ್. ಎಕ್ಸೆಲ್ ಕೆಎ–03–ಇಪಿ–9416	MD621BD1841213472	OD1L41250589
5.	101/09	48/09	ಕೈನೆಟಕ್ ಹೊಂಡಾ ಕೆಎ–05–ಎಕ್ಸ್7048	K1FPL022226	KIEPL022498
6.	101/09	48/09	ಬಜಾಜ್ ಚೇತಕ್ ಕೆಎ–05–ಎಲ್–3675	06F94D39827	06M94D40315
7.	185/09	96/09	ಬಜಾಜ್ 150 ಸಿಕೆಕ್ಯೂ–9923	No	06E803292
8.	186/09	97/09	ಯಮಹಾ ಕೆಎ–04–ಇ–2937	99E4LSO13475	4LSO13475
9.	191/09	100/09	ಕೈನೆಟಿಕ್ ಹೊಂಡಾ ಕೆಎ–06–ಇ–6523	NIFHK327781	317967/HK
10.	194/09	102/09	ಆಕ್ಟೀವ್ ಹೊಂಡಾ ಕೆಎ–03–ಇಜೆ–7109	ME4JFO85F38236876	JFO8EO243947
11.	219/09	113/09	ಟಿವಿಎಸ್ ಎಕ್ಸೆಲ್ ಕೆಎ–04–ಇಇ–4718	P1302F713294	P1302M711511
12.	222/09	116/09	ಸಿಟಿ 100 ಎಂಎಚ್–09 ಎಎನ್–7801	DUFBLF01741	EOMBLF41499
13.	223/09	117/09	ಕವಾಸಕಿ ಬಜಾಜ್ ಕೆಬಿ100 ಸಿಕೆಎನ್–6211	300046717	30EO46293

ಇದರೊಂದಿಗೆ ಅಸಲು ಸುತ್ತೋಲೆ ಮತ್ತು ಎಸ್.ಸಿ.ಆರ್.ಬಿ. ಕಛೇರಿಯ ವರದಿಯನ್ನು ಲಗತ್ತಿಸಿ ನಿವೇದಿಸಿದೆ.

ಮೂರನೇ ಅಪರ ಮುಖ್ಯ ಮಹಾನಗರ

ಪಿ.ಆರ್.235 ದಂಡಾಧಿಕಾರಿ, ಬೆಂಗಳೂರು.

URBAN DEVELOPMENT DEPARTMENT

NOTIFICATION

No.UDD/1042/MNX/2003, Bangalore, Dated:6th January, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from acquisition the lands specified below in respect of which the Preliminary Notification was published in the Karnataka Gazette Dated:17.01.1985 in Part-III-3 at pages from 10 to 36 vide Notification No.HUD/295/MNX/84, Dated:15.12.1984 and Final Notification No.HUD 444 MNX 1986 Dated:28.11.1986 was published in the Karnataka Gazette Dated:25.12.1986 under Sub-section(1) of Section-19 of BDA Act-1976 (Karnataka Act-12 of 1976) for formation of layout Called "BETWEEN HOSUR ROAD AND SARJAPURA ROAD''.

SCHEDULE

DISTRICT:BANGALORE TALUK: SOUTH HOBLI: BEGUR VILLAGE: AGARA

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	Boundaries			
										East Sy.No	West Sy. No	North Sy.No	South Sy.No
				A-G	A-G	A-G	Rs.Ps.	A.G.	A-G				
1.	A.Gundappa Bin Appajappa and Venkatamma Joint	149	Dry	2-05	0-01	2-04	2-12-0	2-05	2-05	150 and 131	146	148	133
	Total								**2-05**				

TOTAL EXTENT WITH DRAWN 02 ACRES AND 05 GUNTAS ONLY (Two Acres and Five Guntas Only)

By Order and in the name of the Governor of Karnataka

M.S. PREMACHANDRA

Under Secretary to Government,

Urban Development Department.

PR-99

URBAN DEVELOPMENT DEPARTMENT

NOTIFICATION

No.UDD/745/MNX/2001, Bangalore, Dated:12th January, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from acquisition the lands specified below in respect of which the Preliminary Notification was published in the Karnataka Gazette Dated:22.12.1977 in Part-III-3 at pages from 335 to 347 vide Notification No.A3/PR/SLAO(S)/2/77-78 and Final Notification No.TWD 41 MNJ 1978 Dated:30.08.1979 was published in the Karnataka Gazette Dated:20.09.1979 in Part-III-I under Sub-Section (1) of Section-19 of BDA Act-1976 (Karnataka Act-12 of 1976) for formation of layout Called “EXTENSION OF MAHALAKSHMI LAYOUT (Nandini) LAYOUT”.

SCHEDULE

DISTRICT:BANGALORE TALUK: BANGALORE NORTH HOBLI: YESHWANTHAPURA VILLAGE: JARAKABANDEKAVAL

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
1.	Government: Ganga bin Hanumantha, Appanna bin Hanumaiah, Chittunija Muniyappa Nagaraja Venkataswamappa Sonnappa bin Muniswamappa, Anjani Bin Poojaga, Madappanahalli Muniswamappa, M. Narasimhalu, Ramaiah S/o Marappa, Krishnappa, Doddaiah Bin Nanjappa, K. Bettaiah, K. Ramaiah	1(117)	Kharab	519-37	519-37	-	-	393-25	1-00	79, 78	Laggere Boundry	CITB Road, Kante erava Studio	Laggere Boundry

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Lakshamamma W/o Munivenkatappa, Channappa bin Hanumaiah, Narasimaiah bin Revaiah, Poojappa, Muninanjappa, Keshviannal, Thimakka, Kanteerava Studio, A. Munishamappa, Nanja, N. Ramareddy, Krishnappa S/o Lakkappa, Hanumanthadevaru, I.O.I. India Pvt. Ltd., Kannamma W/o B. Ramadas, Anantha Shishu Sevashram, V. Thimmaiah, Kethamaranahalli Marappa, K. Sudershan B.E.L., o/s Doreswamy Iyengar, Adhi Smbuava Hostel,												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Hanumantharayappa S/o Venkategowda, Bhossandrada Narasappa, Maridas, G.N. Chinnaswamy, G. Rangaswamappa S/o G.M. Govindappa, G. Sreeramaiah, V. Narayanappa, C.Papanna o/o Munishamappa, Bangappa S/o Thimmannappa, Perumal Naidu, S. Maraiah, M. Munishamappa, Kanteerava Studio, C. Mallaiah S/o Chinne Gowda, M. Ramaiah S/o Chittandappa, Ramaiah, Annapyappa S/o Kivudappa, K. Hanumanthappa S/o Mogappa, M. Chennappa												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	S/o Madappanahally Muniswamappa, V. Siddegowda, Chowdaiah, S. Marappa, Gangahanumaiah, Channappa S/o Thammanna, Papanna S/o Thammanna, Chikkanna bin Kunigalsppa, K.P. Devaraju S/o Poojappa, N.K. Thimmaiah, Bylappa S/o Bylappa, Hanumanthappa S/o Bylappa, H.J. Venkatachalaiah S/o M.C. Gangaiah, Muniyappa S/o Venkataiah, H. Ganga Hanumaiah S/o Huchaia, Muninanjappa, Puttahanumaiah, Narasimhaiah S/o												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Chittundappa, Muniyappa, Thimmasetty S/o Chikkagovindappa, Annayappa bin Munivenkatappa, Nagappa bin Nagappa, Narasimahaiah bin Muniyappa, N. Sadasaiva, P.B. Sajjan Rao, M. Ramaswamy, Narayanarao, Savithramma, Thigalara Lakasmaiah, Chinnappa S/o Munishamappa, Poojappa S/o Munishamappa, Krishnamurthy S/o Hanumaiah, Mylarappa S/o Muddurappa, B.T. Lakshman, J. Kodanda Reddy, M. Muniswamappa, Sharadamma S/o												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Venkataswamappa, Muninagappa S/o Muniswamappa, G. Hanumanthappa bin Galappa, S. Mylarappa S/o Subbaiah, Ramaiah Bin Venkatappa, Pillappa S/o Muniswamappa, Gajjimuniyappa, Siddamma W/o Anjanappa, C.Muniraju, G. Hanumanthappa, Abbaiah bin Muniyappa, Jayaramaiah, Manordas S/o Madavaji, M. Anantharamaih, Venkatamma W/o Venkataboyi, Lakshmi Narasamma, Chengaiah S/o Narrsaiah, M. Chennappa, Chittasetty, Venkataswamy bin												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Guruswamy, M. Annantharamaiah, V. Venkataswamy bin Venkatabody, S.M. Ghandrappa, Venkatanna bin Chinnaiah, B.M. Seetharamaiah, Y.R. Anthonyswamy, V.R. Ganaprakash, Venkatamma W/o Hanumantha Boyl, S.R. Venkatareddy, Nanjundappa, K.L. Diwakar, K.L. Prabhakar, K.L.Sudhakar, Prabhakar, K.L. Diwakar, K.L. Sudhakar, N. Venkataswamy, K.L. Prabhakar, K.L. Diwakar, K.L. Sudhakar,												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	K.L. Prabhakar, K.L. Diwakar, K.L. Sudhakar, M. Gopal M.H. Hanumanthappa, M.R. Prakash, M.R. Ramaiah, M.H. Puttaiah bin Chikkahanumantha, S. Venugopal Naidu, S. Gangadhar, S. Varadaraju S/o Nayr, N. Varadaraju S/o Nayr, K.L. Prabhakar, K.L. Sudhakar, K.L. Diwakar, Chinnanna bin Venkataboyi, Y. Yallappa bin Maistry Venkataboyi, K.B. Venkatesh, M. Narayanaswamy, K. Shamanna, Thamaiah, Thimmaboyi bin Chinnabovi,												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	M. Chinnappa & Siddasetty, G. Venkataswamy S/o Gangaiah, Venkatamma W/o Gangaiah, Hanumantha bin Guruswamy, Hanumantha bin Sallapur Boyi, Venkataswamy bin Venkataswamy, Chinnaiah bin Gangaboyi, K. Lakshminarasamma, Bhaktavastala Naidu, Venugopal Naidu, V. Narayanappa, Venkateshboyi, Chinnakka W/o Poojari Venkataswamy, Annaiah bin Poojari Venkataswamy, Venkataswamy S/o Venkataswamy, Munivenkatappa S/o												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Chikka Venkatappa, Venkataswamy bin Venkataswamy, Poojari Venkataswamy bin Lakshma boyi, M. Chinnappa & Siddasetty, Venkatamma, Hanumanthappa, Naganahalli Venkatappa bin Venkatappa bin Venkataswamy, Ramaswamy bin Yellabovi, M. Chinnappa And Siddasetty, Kalabovi S/o Yellabovi, M. Chinnappa & Siddasetty, M. Chinnappa & Sidda Setty, Yellappa, K. Lakshmidevamma, M. Chinnappa & Siddasetty, Venkataswamy bin												

Sl. No.	Name of the Khatedar/Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No.	North Sy.No.	South Sy.No.
				A-G	A-G	A-G	Rs.Ps.	A.G.	A-G				
	Venkatabovi, Chinnamma, Chinnamma, M. Chinnappa & Siddasetty, Venkataswamy bin Venkataswamy, M. Chinnappa & Sidda Setty, Venkatabovi S/o Poojari Venkataswamy, H. Narayana Rao, M. Chinnappa & Siddasetty, Motaiah, Krishnappa, K. Sridharan, M. Lakshmaiah bin Mariyappa, R.V. Krishnaswamy.												
				Total					**1-00**				

TOTAL EXTENT WITH DRAWN 01 ACRE (One Acre Only)

By Order and in the name of the Governor of Karnataka

M.S. PREMACHANDRA

Under Secretary to Government,

Urban Development Department.

PR-125

ಉಪ ಆಯುಕ್ತರು(ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಾರ್ಯಾಲಯ,

ಕೇಂದ್ರ ಕಛೇರಿ, ನಗರಪಾಲಿಕೆ ಕಟ್ಟಡಗಳು, 1ನೇ ಮಹಡಿ, ನರಸಿಂಹರಾಜು ವೃತ್ತ, ಬೆಂಗಳೂರು.

ಭೂ ಅರ್ಜನೆ ಅಧಿನಿಯಮದ 4(1)ನೇ ಪ್ರಕರಣದ ಮೇರೆಗೆ ಅಧಿಸೂಚನೆ

ಕ್ರಮಾಂಕ:ಎಲ್.ಎ.ಸಿ/ಪಿ.ಆರ್/14/2007-08, ದಿನಾಂಕ:31ನೇ ಡಿಸೆಂಬರ್, 2009

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆಸ್ತಿಗಳು, ಸಾರ್ವಜನಿಕ ಉದ್ದೇಶಗಳಿಗಾಗಿ ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.131 (ಹಳೆ ವಾರ್ಡ್ ನಂ.39) ಕೆಂಗೇರಿ ಹೋಬಳಿ, ಪಂತರಪಾಳ್ಯ ಗ್ರಾಮದ ಗ್ರಾಮಠಾಣದ ಖಾನೇಷುಮಾರಿ ಮುನಿಸಿಪಲ್ ಖಾತೆ ನಂ.1, ಹೌಸ್‌ಲಿಸ್ಟ್ ಖಾತೆ ನಂ.7ರ ಭಾಗಶಃ ಆಸ್ತಿಯು ರಸ್ತೆ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಿದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕಂಡುಬಂದಿರುವುದರಿಂದ:

1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಕಲಂ 177 ಮತ್ತು ಕರ್ನಾಟಕ ಅಧಿನಿಯಮ ಸಂಖ್ಯೆ:33ರ ಮೂಲಕ ತಿದ್ದುಪಡಿಯಾದ 1991ನೇ ಸಾಲಿನ ಭೂ ಸ್ವಾಧೀನ ಅಧಿನಿಯಮ 1894ರ (ಕೇಂದ್ರ ಅಧಿನಿಯಮ, ಸಂಖ್ಯೆ:1894ರ 1) 4ನೇ ಪ್ರಕರಣದ-(1)ನೇ ಉಪ ಪ್ರಕರಣದ ಉಪಬಂಧಗಳ ಅನುಸಾರವಾಗಿ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಈ ಬಗ್ಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರವು ಆ ಅಧಿನಿಯಮದ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು- ಭೂ ಅರ್ಜನೆ ಅಧಿಕಾರಿ, ಅವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಲಾಗಿದೆ.

ಸದರಿ ಅಧಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು ಅಧಿನಿಯಮದ 5(ಎ) ಪ್ರಕರಣದ ಮೇರೆಗೆ ಉಪ ಆಯುಕ್ತರು(ಭೂಸ್ವಾಧೀನ)ರವರ ಪ್ರಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರನ್ನು ನೇಮಕ ಮಾಡಿದೆ.

ಭೂಮಿಯಲ್ಲಿ/ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ವ್ಯಕ್ತಿಯು ತನ್ನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಅಧಿಸೂಚನೆಯು ಪ್ರಕಟವಾದ ತಾರೀಖಿನಿಂದ ಮೂವತ್ತು ದಿನಗಳ ಒಳಗಾಗಿ ಅಥವಾ ಅದಕ್ಕಿಂತ ಮುಂಚೆ ಕರ್ನಾಟಕ ಅಧಿನಿಯಮ 1961ರ 17ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ 3(ಸಿ) ಪ್ರಕರಣದ ಮೇರೆಗೆ ಉಪ ಆಯುಕ್ತರು(ಭೂಸ್ವಾಧೀನ)ರವರ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕವಾದ ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು.

ಸದರಿ ಅರ್ಜನೆ ಉದ್ದೇಶಕ್ಕಾಗಿ ಸದರಿ ಭೂಮಿಗಳ/ಆಸ್ತಿಗಳ ಮೇಲೆ ನಿಯೋಜಿತರಾದ ಯಾವುದೇ ಮೋಜಣಿದಾರರು ಅಥವಾ ಇತರೇ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅಥವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿ/ಆಸ್ತಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಉಪ ಆಯುಕ್ತರು(ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು,ರವರ ಅನುಮತಿಯಿಲ್ಲದೆ ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಸದರಿ ಭೂಮಿಗಳ/ಆಸ್ತಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿ/ಆಸ್ತಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ(ಏಳನೇ ಖಂಡ) 2ನೇ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ನಗರಪಾಲಿಕೆ ಕಟ್ಟಡಗಳು, 2ನೇ ಮಹಡಿ, ನರಸಿಂಹರಾಜು ವೃತ್ತ, ಬೆಂಗಳೂರು. ಇವರ ಕಛೇರಿಯಲ್ಲಿ ಭೂಮಿಗಳ/ಆಸ್ತಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.131 (ಹಳೆ ವಾರ್ಡ್ ನಂ.39) ಕೆಂಗೇರಿ ಹೋಬಳಿ, ಪಂತರಪಾಳ್ಯ ಗ್ರಾಮದ ಗ್ರಾಮಠಾಣದ ಖಾನೇಷುಮಾರಿ ಮುನಿಸಿಪಲ್ ಖಾತೆ ನಂ.1, ಹೌಸ್‌ಲಿಸ್ಟ್ ಖಾತೆ ನಂ.7ರ ಭಾಗಶಃ ಜಾಗವು ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಪಂತರ ಪಾಳ್ಯ ಗ್ರಾಮದ ಗ್ರಾಮಠಾಣ ಸಂಖ್ಯೆ	ಮಹಾನಗರ ಪಾಲಿಕೆ ಖಾತಾ ನೋಂದಾವಣೆ ಮುನಿಸಿಪಲ್ ಆಸ್ತಿ ಸಂಖ್ಯೆ	ಭೂಸ್ವಾಧೀನಕ್ಕೆ ಬೇಕಾಗಿರುವ ವಿಸ್ತೀರ್ಣ ಚ.ಅ.ಗಳಲ್ಲಿ	ತರಹೆ	ಚಕ್ಕುಬಂದಿ			
							ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11
1.	ಅಪ್ಪಯ್ಯಣ್ಣ ಬಿನ್ ಮುನಿಶಾಮಪ್ಪ	ಅಪ್ಪಯ್ಯಣ್ಣ ಬಿನ್ ಮುನಿಶಾಮಪ್ಪ	ಪಾಲಿಕೆ ಖಾತೆ ನಂ.01, ಹೌಸ್‌ಲಿಸ್ಟ್ ಖಾತೆ ನಂ.7	01	1092.75 ಚ.ಅ.	ಖಾಲಿ ಜಾಗ	ಸರ್ಕಾರಿ ರಸ್ತೆ	ಖಾಸಗಿ ಸ್ವತ್ತು	ಖಾನೇಷುಮಾರಿ ನಂ.01ರ ಉಳಿಕೆ ಜಾಗ	ಖಾಸಗಿ ಆಸ್ತಿ ಮತ್ತು ಚರಂಡಿ

ಬೆಂಗಳೂರು
ದಿನಾಂಕ:31.12.2009
ಪಿಡಿ–26

ಚಿಕ್ಕಮುನಿಯಪ್ಪ
ಉಪ ಆಯುಕ್ತರು (ಭೂಸ್ವಾಧೀನ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಉಪ ಆಯುಕ್ತರು(ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಾರ್ಯಾಲಯ,

ಕೇಂದ್ರ ಕಛೇರಿ, ನಗರಪಾಲಿಕೆ ಕಟ್ಟಡಗಳು, 1ನೇ ಮಹಡಿ, ನರಸಿಂಹರಾಜು ವೃತ್ತ, ಬೆಂಗಳೂರು.

ಭೂ ಅರ್ಜನೆ ಅಧಿನಿಯಮದ 4(1)ನೇ ಪ್ರಕರಣದ ಮೇರೆಗೆ ಅಧಿಸೂಚನೆ

ಕ್ರಮಾಂಕ:ಎಲ್.ಎ.ಕ್ಯೂ/ಸಿ.ಆರ್/27/2009–10, ದಿನಾಂಕ:27ನೇ ಜನವರಿ, 2010

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆಸ್ತಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು, ಸಾರಕ್ಕಿ ಕೆರೆ ಗ್ರಾಮದ ಸರ್ವೆ ನಂ.4/2 ರಲ್ಲಿ ಮಹಾನಗರ ಪಾಲಿಕೆ ಆಸ್ತಿ ಸಂಖ್ಯೆ:144–151/150–29 ರಲ್ಲಿ ಸುಮಾರು 800 ಚ.ಅ. ಜಾಗವು ಕಾಲುವೆ ನಿರ್ಮಾಣಕ್ಕೆ ಅವಶ್ಯಕವಾಗಿ ಬೇಕಾಗಿರುತ್ತದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕಂಡುಬಂದಿರುವುದರಿಂದ:

1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಕಲಂ 177 ಮತ್ತು ಕರ್ನಾಟಕ ಅಧಿನಿಯಮ ಸಂಖ್ಯೆ:33ರ ಮೂಲಕ ತಿದ್ದುಪಡಿಯಾದ 1991ನೇ ಸಾಲಿನ ಭೂ ಸ್ವಾಧೀನ ಅಧಿನಿಯಮ 1894ರ (ಕೇಂದ್ರ ಅಧಿನಿಯಮ, ಸಂಖ್ಯೆ:1894ರ 1) 4ನೇ ಪ್ರಕರಣದ–(1)ನೇ ಉಪ ಪ್ರಕರಣದ ಉಪಬಂಧಗಳ ಅನುಸಾರವಾಗಿ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಈ ಬಗ್ಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರವು ಆ ಅಧಿನಿಯಮದ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು– ಭೂ ಅರ್ಜನೆ ಅಧಿಕಾರಿ, ಅವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಲಾಗಿದೆ.

ಸದರಿ ಅಧಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು ಅಧಿನಿಯಮದ 5(ಎ) ಪ್ರಕರಣದ ಮೇರೆಗೆ ಉಪ ಆಯುಕ್ತರು(ಭೂಸ್ವಾಧೀನ)ರವರ ಪ್ರಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರನ್ನು ನೇಮಕ ಮಾಡಿದೆ.

ಭೂಮಿಯಲ್ಲಿ/ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ವ್ಯಕ್ತಿಯು ತನ್ನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಅಧಿಸೂಚನೆಯು ಪ್ರಕಟವಾದ ತಾರೀಖಿನಿಂದ ಮೂವತ್ತು ದಿನಗಳ ಒಳಗಾಗಿ ಅಥವಾ ಅದಕ್ಕಿಂತ ಮುಂಚೆ ಕರ್ನಾಟಕ ಅಧಿನಿಯಮ 1961ರ 17ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ 3(ಸಿ) ಪ್ರಕರಣದ ಮೇರೆಗೆ ಉಪ ಆಯುಕ್ತರು(ಭೂಸ್ವಾಧೀನ)ರವರ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕವಾದ ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು.

ಸದರಿ ಅರ್ಜನೆ ಉದ್ದೇಶಕ್ಕಾಗಿ ಸದರಿ ಭೂಮಿಗಳ/ಆಸ್ತಿಗಳ ಮೇಲೆ ನಿಯೋಜಿತರಾದ ಯಾವುದೇ ಮೋಜಣಿದಾರರು ಅಥವಾ ಇತರೇ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅಥವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿ/ಆಸ್ತಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಉಪ ಆಯುಕ್ತರು(ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು,ರವರ ಅನುಮತಿಯಿಲ್ಲದೆ ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಸದರಿ ಭೂಮಿಗಳ/ಆಸ್ತಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿ/ಆಸ್ತಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ(ಏಳನೇ ಖಂಡ) 2ನೇ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ಸಹಾಯಕ ಆಯುಕ್ತರು(ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ನಗರಪಾಲಿಕೆ ಕಟ್ಟಡಗಳು, 2ನೇ ಮಹಡಿ, ನರಸಿಂಹರಾಜು ವೃತ್ತ, ಬೆಂಗಳೂರು. ಇವರ ಕಛೇರಿಯಲ್ಲಿ ಭೂಮಿಗಳ/ಆಸ್ತಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.187, ಬೆಂಗಳೂರು ದಕ್ಷಿಣ ತಾಲ್ಲೂಕು, ಸಾರಕ್ಕಿ ಕೆರೆ ಗ್ರಾಮದ ಸರ್ವೆ ನಂ.4/2 ರಲ್ಲಿ ಮಹಾನಗರ ಪಾಲಿಕೆ ಆಸ್ತಿ ಸಂಖ್ಯೆ:144–151/150–29 ರಲ್ಲಿ ಸುಮಾರು 800 ಚ.ಅ. ಜಾಗವು ಕಾಲುವೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಮಹಾನಗರ ಪಾಲಿಕೆ ಖಾತಾ ನೋಂದಾವಣೆ ಮುನಿಸಿಪಲ್ ಆಸ್ತಿ ಸಂಖ್ಯೆ ಮತ್ತು ಸರ್ವೆ ನಂ.	ಭೂಸ್ವಾಧೀನಕ್ಕೆ ಬೇಕಾಗಿರುವ ವಿಸ್ತೀರ್ಣ ಚ.ಅ.ಗಳಲ್ಲಿ	ತರಹೆ	ಚಕ್ಕುಬಂದಿ			
						ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10
1.	ಮಹಮದ್ ರಫೀಕ್ ಬಿನ್ ಅಬ್ದುಲ್ ಖಲೀಲ್	ಮಹಮದ್ ರಫೀಕ್ ಬಿನ್ ಅಬ್ದುಲ್ ಖಲೀಲ್	ಸರ್ವೆ ನಂ.4/2 ರಲ್ಲಿ ಮುನಿಸಿಪಲ್ ಖಾತೆ ನಂ.144–151/150–29 ರಲ್ಲಿ	800 ಚ.ಅ	ಖಾಲಿ ಜಾಗ	ರಸ್ತೆ	ಖಾಸಗಿ ಸ್ವತ್ತು	ನಿವೇಶನ ಸಂಖ್ಯೆ:29	ನಿವೇಶನ ಸಂಖ್ಯೆ:30

ಬೆಂಗಳೂರು
ದಿನಾಂಕ:27.01.2010
ಪಿಡಿ–27

ಚಿಕ್ಕಮುನಿಯಪ್ಪ
ಉಪ ಆಯುಕ್ತರು (ಭೂಸ್ವಾಧೀನ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೃಹತ್ ಕಾಮಗಾರಿ ವಿಭಾಗ, ತುಮಕೂರು

ಪ್ರಕಟಣೆ ಸಂಖ್ಯೆ: ಕಾನಿಇಂ/ಬೃಕಾವಿ/ತು/08–09/3824–28, ದಿನಾಂಕ:18ನೇ ಜನವರಿ, 2010

ಕ.ವಿ.ಪ್ರ.ನಿ.ನಿ. 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಪ್ರಕರಣ 67 ಅನ್ವಯ ಈ ಕೆಳಗೆ ತಿಳಿಸಿರುವ ಯೋಜನೆಗಳನ್ನು ರೂಪಿಸಿದೆ. ಹಾಗೂ ಸದರಿ ಯೋಜನೆಗಳನ್ನು ಲೈಸೆನ್ಸ್‌ದಾರರು ಮತ್ತು ಆಸಕ್ತರು ಯಾವುದೇ ಇತರ ವ್ಯಕ್ತಿಗಳ ತಿಳುವಳಿಕೆಗಾಗಿ ಮೂಲಕ ಪ್ರಕಟಿಸಲಾಗಿದೆ. ಯೋಜನೆಗಳ ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ಯೋಜನೆಯ ಹೆಸರು	ಯೋಜನೆಯ ಪ್ರಮುಖ ಲಕ್ಷಣಗಳು	ಯೋಜನೆಯ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಹಾದು ಹೋಗುವ ಪ್ರದೇಶ
1.	ತುಮಕೂರು ತಾಲ್ಲೂಕು, ತಿಮ್ಮಸಂದ್ರ ಗ್ರಾಮದಲ್ಲಿ (ಸರ್ವೆ ನಂ.38 ತಿಮ್ಮಸಂದ್ರ ಗ್ರಾಮ, ಹೆಬ್ಬೂರು ಹೋಬಳಿ) 2*8 ಎಂವಿಎ ವಿದ್ಯುತ್ ಉಪಸ್ಥಾವರವನ್ನು ಸ್ಥಾಪಿಸುವುದು ಮತ್ತು ಉದ್ದೇಶಿಸಿರುವ 66/11 ಕೆವಿ ಉಪಸ್ಥಾವರಕ್ಕೆ ಹಾಲಿ ಇರುವ ಮೇಳೇಕೋಟೆ–ಹೆಬ್ಬೂರು 66 ಕೆವಿ ಪ್ರಸರಣಾ ಮಾರ್ಗದಿಂದ 0.05 ಕಿ.ಮೀ. ಉದ್ದದ 66 ಕೆ.ವಿ. ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು.	1) ತಿಮ್ಮಸಂದ್ರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವೋಲ್ಟೇಜ್ ಉತ್ತಮಪಡಿಸುವುದು. 2) ಮಾರ್ಗವ್ಯವಸ್ಥೆಯಲ್ಲಿ ನಷ್ಟವನ್ನು ಕಡಿಮೆಗೊಳಿಸುವುದು. 3) ಮುಂಬರುವ ತುಮಕೂರು ವಿಶ್ವವಿದ್ಯಾಲಯ ಮತ್ತು ನೀರು ಸರಬರಾಜು ಯೋಜನೆಗಳಿಗೆ ವಿದ್ಯುತ್ ಒದಗಿಸುವುದು. 4) ವಿದ್ಯುತ್ ಸರಬರಾಜಿನ ಗುಣಮಟ್ಟ ಉತ್ತಮ ಪಡಿಸುವುದು ಮತ್ತು ಸ್ಥಿರತೆ ಕಾಪಾಡುವುದು. 5) 11 ಕೆವಿ ರಿಂಗ್ ಮೈನ್ ವ್ಯವಸ್ಥೆಯನ್ನು ಕಲ್ಪಿಸುವುದು. 6) ಹೆಬ್ಬೂರು ಉಪ ಸ್ಥಾವರದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು.	502.58	ಮೇಳೇಕೋಟೆ
2.	ಹಾಲಿ ಇರುವ 220/110/11 ಕೆವಿ ಕಿಬ್ಬನಹಳ್ಳಿ ಕ್ರಾಸ್ ಉಪ ಸ್ಥಾವರದಿಂದ ತಿಮ್ಮನಹಳ್ಳಿ ಟ್ಯಾಪ್ ಪಾಯಿಂಟ್ ವರೆಗೆ ಹೊಸ ಕಾರಿಡಾರ್‌ನಲ್ಲಿ 110 ಕೆವಿ ಜಂಟಿ ಪ್ರಸರಣಾ ಮಾರ್ಗವನ್ನು, ಕೆಬಿ ಕ್ರಾಸ್ ಉಪಸ್ಥಾವರದಲ್ಲಿ ಟರ್ಮಿನಲ್ ಬೇಯೊಂದಿಗೆ ನಿರ್ಮಿಸುವುದು.	1) 110 ಕೆವಿ ಕೆ.ಬಿ. ಕ್ರಾಸ್–ಹುಳಿಯಾರ್ ಪ್ರಸರಣಾ ಮಾರ್ಗದ ಮೇಲಿನ ಅಧಿಕ ಒತ್ತಡವನ್ನು ಕಡಿಮೆಗೊಳಿಸುವುದು. 2) ಮುಂಬರುವ ವಿದ್ಯುತ್ ಬೇಡಿಕೆಯನ್ನು ಕಲ್ಪಿಸುವುದು. 3) ವಿದ್ಯುತ್ ಸರಬರಾಜಿನ ಗುಣಮಟ್ಟ ಉತ್ತಮ ಪಡಿಸುವುದು ಮತ್ತು ಸ್ಥಿರತೆ ಕಾಪಾಡುವುದು.	966.15	ಕಿಬ್ಬನಹಳ್ಳಿ, ಹಟ್ನ, ಪಂಕಜನಹಳ್ಳಿ, ಮಲಗೊಂಡನಹಳ್ಳಿ, ಕಂಟಲಗೆರೆ, ಅಗಸರಹಳ್ಳಿ, ದಬ್ಬೇಘಟ್ಟ, ಕಲ್ಲೇನಹಳ್ಳಿ, ದುಗುಡಿಹಳ್ಳಿ, ಮಾರಸಂದ್ರ, ರಾವಪ್ಪನಪಾಳ್ಯ, ಮಳಿಗೆಹಳ್ಳಿ, ಮುದ್ದೇನಹಳ್ಳಿ, ಬೈಲಪ್ಪನಹಳ್ಳಿ.

ಕ.ವಿ.ಪ್ರ.ನಿ.ನಿ. ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ–111 ರ (ಕೇಂದ್ರ ಕಾಯ್ದೆ 1885ರ 13 ಅನ್ವಯ) ಅಧಿನಿಯಮ ಟೆಲಿಗ್ರಾಫ್ ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 60 ದಿನಗಳ ಒಳಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ) ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಕೋತಿತೋಪು, ತುಮಕೂರು–02, ಇವರಿಗೆ ಕಳುಹಿಸುವುದು.

ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಬೃಹತ್ ಕಾಮಗಾರಿ ವಿಭಾಗ, ತುಮಕೂರು.

ಪಿಡಿ–28